19 March 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 125 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಪ್ರಾರ್ಥನೆ ಮತ್ತು ನಂಬಿಕೆ ಇವೆರಡೂ
ಬಲಯುತವಾದ ಅಸ್ತ್ರಗಳು!
ಅಸಾಧ್ಯವಾದುದನ್ನು ಸಾಧ್ಯವಾಗಿಸುತ್ತವೆ!
-ಸ್ನೇಹಾ ಆನಂದ್

**ಶುಭಾಶಯಗಳು**

ಸಮಸ್ತ ಓದುಗರಿಗೆ, ಜಾಹೀರಾತುದಾರರಿಗೆ ಯುಗಾದಿ ಹಬ್ಬದ ಶುಭಾಶಯಗಳು


**ಕಚೇರಿಗೆ ಬಿಡುವು**

ಯುಗಾದಿ ಹಬ್ಬದ ನಿಮಿತ್ತ ಗುರುವಾರ ಕಚೇರಿಗೆ ಬಿಡುವು. ಶುಕ್ರವಾರದ ಸಂಚಿಕೆ ಇರುವುದಿಲ್ಲ

ಪ್ರಜ್ವಲ್ ಅಶ್ಲೀಲ ವಿಡಿಯೋ ವೈರಲ್:

## 39 ಮಂದಿ ವಿರುದ್ಧ ಚಾರ್ಜ್‌ಶೀಟ್

**ಹಾಸನ:** ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣದಲ್ಲಿ ಪೆನ್‌ಡ್ರೈವ್ ಹಂಚಿಕೆ ಸಂಬಂಧ ಎಸ್‌ಐಟಿ ಚಾರ್ಜ್‌ಶೀಟ್ ಸಲ್ಲಿಸಿದೆ.



ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಹಾಸನ ಸಿವಿಲ್ ಕೋರ್ಟ್‌ಗೆ ಎಸ್‌ಐಟಿ 13,712 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದೆ. ಒಟ್ಟು 39 ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಿದೆ. ಅಶ್ಲೀಲ ವಿಡಿಯೋ ಹಂಚಲು ಆರೋಪಿಗಳು 70 ಪೆನ್‌ಡ್ರೈವ್ ಖರೀದಿಸಿ ದ್ದರು. ಹಾಸನದಲ್ಲೇ 70 ಪೆನ್‌ಡ್ರೈವ್ ಖರೀದಿ ಮಾಡಿರುವುದು ತನಿಖೆಯಿಂದ ಬಯಲಾಗಿದೆ.

70 ಪೆನ್‌ಡ್ರೈವ್ ಖರೀದಿಸಿ ವಿಡಿಯೋ ವೈರಲ್ ಮಾಡಿರುವುದು ಪುಟ 2ಕ್ಕೆ

# ಚೈತ್ರದ ಸಂಭ್ರಮ: ಯುಗಾದಿಗೆ ಪ್ರಕೃತಿಯ ಸ್ವಾಗತ




▶▶ ಗಿರಿಜಾ.ಎಸ್.ದೇಶಪಾಂಡೆ

ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ










ಪ್ರಕೃತಿಯು ತನ್ನ ಹಳೆಯ ತೊಗಲನ್ನು ಬಿಟ್ಟು ಹೊಸ ತೊಗಲು ಮೈವೆತ್ತಿ ಬರುವ ಸಮಯವಿದು.ಗಿಡ,ಮರ,ಬಳ್ಳಿಗಳು ತಮ್ಮ ಹಳೆಯ ರೂಪವನ್ನು ಬದಲಾಯಿಸಿಕೊಂಡು ಹೊಂಬಣ್ಣದ ಚಿಗುರೆಲೆಯಲ್ಲಿ ಶೋಭಿಸುತ್ತವೆ.ಹಣ್ಣೆಲೆಗಳೆಲ್ಲ ಉದುರಿ ಮರಗಿಡಗಳೆಲ್ಲ ಹೊಸ ಚಿಗುರಿನೊಂದಿಗೆ ಕಂಗೊಳಿಸುವ ಕಾಲ. ಪ್ರಕೃತಿಯು ತನ್ನ ಮೈಕೊಡವಿ ಹಸಿರನ್ನುಟ್ಟು ಅಪ್ಸರೆಯಂತೆ ಮೆರೆಯುವ ಸವಿಕಾಲ ಇದಾಗಿದೆ.

ಪಕ್ಷಿಗಳಲ್ಲಿ ನವಿಲು, ಪ್ರಾಣಿಗಳಲ್ಲಿ ಮಾನವ,ಋತುಗಳಲ್ಲಿ ವಸಂತ ಶ್ರೇಷ್ಟವಾದಂತೆ ಎಲ್ಲ ಹಬ್ಬಗಳಿಗಿಂತ ಹೊಸವರ್ಷದ ಯುಗಾದಿ ಸರ್ವ ಶ್ರೇಷ್ಠ ಹಬ್ಬವಾಗಿದೆ.ಈ ಪ್ರಸಿದ್ಧವಾದ ಯುಗಾದಿ ಹಬ್ಬ ಚೈತ್ರಮಾಸದ ಶುಕ್ಲಪಕ್ಷದ ಪಾಡ್ಯದಂದು ಬರುತ್ತದೆ.ಈ ಹಬ್ಬವು ಹಿಂದೂಗಳ ದೃಷ್ಟಿಯಲ್ಲಿ ವರ್ಷಾರಂಭದ ಪವಿತ್ರ ದಿನವಾಗಿದೆ.

### ಯುಗಾದಿಯ ಅರ್ಥ

'ಯುಗದ ಆದಿ' 'ಯುಗಾದಿ' ಎಂಬ ಶಬ್ದ ಸಂಸ್ಕೃತದ 'ಯುಗ' ಮತ್ತು 'ಆದಿ' ಎಂಬ ಎರಡು ಶಬ್ದಗಳಿಂದ ಕೂಡಿದೆ.ಯುಗವೆಂದರೆ ಸೃಷ್ಟಿಯ ಕಾಲಮಾನ.ಅರ್ಥಾತ್ ಹೊಸವರ್ಷ.ಆದಿ ಎಂದರೆ ಆರಂಭ.ಯುಗಾದಿ ತತ್ಸಮಾನ ಪದವಾದರೆ ಉಗಾದಿ ತದ್ಭವ. ಈ ಹಬ್ಬವು ಪೌರಾಣಿಕ ಹಾಗೂ ಐತಿಹಾಸಿಕ ವಿಶೇಷತೆಗಳ ದಿನವಾಗಿದೆ.ಇದು ಬ್ರಹ್ಮದೇವನ ಸೃಷ್ಟಿಯ ದಿನ. ಚೈತ್ರ ಶುದ್ಧ ಪಾಡ್ಯದಂದು ಸೂರ್ಯೋದಯವಾಗುತ್ತಿರುವಾಗ ಬ್ರಹ್ಮನು ವಿಶ್ವವನ್ನು ಸೃಷ್ಟಿಸಿದನೆಂದೂ ಅಂದಿನಿಂದ ಕಾಲಗಣನೆಯಾಗಿ ಗ್ರಹ, ನಕ್ಷತ್ರ, ಮಾಸ, ಋತು, ವರ್ಷ ಇವುಗಳನ್ನು ಏರ್ಪಡಿಸಿದನೆಂದೂ ವೃತಖಂಡದಲ್ಲೂ, ಪುರಾಣದಲ್ಲೂ ಉಲ್ಲೇಖವಿದೆ.

ಯುಗಾದಿಯಿಂದ ಪ್ರಾರಂಭವಾಗುವ ಹೊಸವರ್ಷದ ಪಂಚಾಂಗಗಳೂ ಇದನ್ನೇ ಹೇಳುತ್ತವೆ.ವೇದ ಕಾಲದಿಂದಲೂ ಯುಗಾದಿಯ ಮಹಿಮೆ ಕಂಡುಬರುತ್ತದೆ. ಶ್ರೀ ರಾಮಚಂದ್ರನು ರಾವಣನನ್ನು ಸಂಹರಿಸಿ ಬಂದಾಗ ಅಯೋಧ್ಯೆಯಲ್ಲಿ ಶ್ರೀ ರಾಮಚಂದ್ರನ ಪಟ್ಟಾಭಿಷೇಕವಾದ ದಿನ ಅಲ್ಲದೇ ಮಹಾಭಾರತದಲ್ಲಿ ಬರುವ ಚೇಡಿರಾಜ್ಯದ ಅರಸು ವಸುವಿನ ಉಗ್ರ ತಪಸ್ಸಿಗೆ ಮೆಚ್ಚಿದ ಇಂದ್ರನು ವೈಜಯಂತಿ ಮಾಲೆಯನ್ನು ಅವನಿಗೆ ಕೊಟ್ಟು ,ಚಿನ್ನದ ಕಳಶವುಳ್ಳ ಚಕ್ರಾಧಿಪತ್ಯವನ್ನು ರಾಜನ ತಲೆಯ ಮೇಲೆ ಇಟ್ಟಿರುವ ದಿನ ಇದಾಗಿದೆ.

ಇತಿಹಾಸದಲ್ಲಿ ಯುಗಾದಿ ಪುಟ 2ಕ್ಕೆ

# ಡಿಜೆ ನಿಷೇಧಕ್ಕೆ ಸರ್ಕಾರ ಚಿಂತನೆ

* ವಿಧಾನಸಭೆಯಲ್ಲಿ ಸಚಿವ ಶಿವರಾಜ ತಂಗಡಗಿ ಮಾಹಿತಿ

**ಬೆಂಗಳೂರು:** ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಅಬ್ಬರದ ಸಂಗೀತ ಪ್ರಸಾರಕ್ಕೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ಡಿಜೆ ನಿಷೇಧಿಸಲು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ವಿಧಾನಸಭೆಯಲ್ಲಿ ಬುಧವಾರ ತಿಳಿಸಿದರು.



ಶಾಸಕ ಎಸ್.ಎನ್.ಚನ್ನಬಸಪ್ಪ ಅವರು ನಿಯಮಿತವಾಗಿ 'ಸಹ್ಯಾದ್ರಿ ಉತ್ಸವ'ವನ್ನು ಆಯೋಜಿಸಲು ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು ಎಂದು ಸದನದಲ್ಲಿ ಕೋರಿದರು. ಇದೇ ವೇಳೆ, ಬಿಜೆಪಿಯ ಜನಾರ್ಧನ ರೆಡ್ಡಿ ಅವರು ಕೊಪ್ಪಳದಲ್ಲಿ ಆನೆಗುಂದಿ ಉತ್ಸವವನ್ನು ಪುನರಾರಂಭಿಸಬೇಕು ಎಂದು ಒತ್ತಾಯಿಸಿದರು. ಆಗ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಡಿಜೆ ವಿಚಾರವನ್ನು ಪ್ರಸ್ತಾಪಿಸಿದರು.

ಎಲ್ಲ ಆಚರಣೆಗಳ ಸಂದರ್ಭದಲ್ಲಿ ಡಿಜೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಯಾವುದೇ ಆಚರಣೆ, ಮೆರವಣಿಗೆ ಸಂದರ್ಭದಲ್ಲಿ ಡಿಜೆ, ಐಟಂ ಸಾಂಗ್‌ಗಳು ಪ್ರಸಾರ ಆಗಲಿಲ್ಲವೆಂದರೆ ನಮ್ಮ ದೇವರು ಮುಂದೆ ಸಾಗುವುದೇ ಇಲ್ಲ. ಇದು ನಾಚಿಕೆಗೇಡಿನ ಸಂಗತಿ. ಈ ಬಗ್ಗೆ ಚರ್ಚೆಯಾಗಬೇಕಿದೆ. ಡಿಜೆಗಳು, ಐಟಂ ಸಾಂಗ್‌ಗಳಿಂದ ಸಂಸ್ಕೃತಿಗೆ ಯಾವ ಒಳಿತೂ ಆಗಿಲ್ಲ ಎಂದು ಪ್ರತಿಪಾದಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ತಂಗಡಗಿ, ಈ ಸಂಬಂಧ ಆದೇಶ ಹೊರಡಿಸುತ್ತೇವೆ. ಡಿಜೆಯಿಂದಾಗಿ ಸಾಕಷ್ಟು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ ಎಂದರು. ಮುಂದುವರಿದು, ವಿರೋಧ ಪಕ್ಷಗಳ ನಾಯಕರ ಸಹಕಾರವನ್ನೂ ಕೋರಿದ ಅವರು, ಎಲ್ಲರೂ ಸಹಮತ ಸೂಚಿಸಿದರೆ, ಡಿಜೆ ನಿಷೇಧಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಈ ಹೇಳಿಕೆಗೆ ಶಾಸಕ ಚನ್ನಬಸಪ್ಪ ವಿರೋಧ ವ್ಯಕ್ತಪಡಿಸಿದರು. ನಿಮಗೆ ಡಿಜೆ ಬೇಡದಿರಬಹುದು. ನಮಗೆ ಬೇಕು. ಸುಪ್ರಿಂ ಕೋರ್ಟ್ ಆದೇಶದ ಅನುಸಾರ, ಮಸೀದಿಗಳಲ್ಲಿ ಆಜಾನ್ ಕೂಗುವುದನ್ನು ನೀವು ನಿಷೇಧಿಸಬೇಕು. ಅದನ್ನೂ ಮಾಡುವಿರಾ ಎಂದು ಪ್ರಶ್ನಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ. ಖಾದರ್, ಡೆಸಿಬಲ್ ಪ್ರಮಾಣ ಎಷ್ಟಿರಬೇಕು ಎಂಬುದನ್ನು ಸುಪ್ರೀಂ ಕೋರ್ಟ್ ನಿಗದಿಪಡಿಸಿದೆ. ಎಲ್ಲ ಸರ್ಕಾರಗಳೂ ಅದನ್ನು ಅನುಸರಿಸಬೇಕು ಪುಟ 2ಕ್ಕೆ



# ಜೆಡಿಎಸ್‌ನಿಂದಲೇ ಸ್ಪರ್ಧೆ ಖಚಿತ: ಜಿಟಿಡಿ

## ಜೆಡಿಎಸ್ ಬಿಡುವ ಪ್ರಶ್ನೆಯೇ ಇಲ್ಲ: ಶಾಸಕ ಜಿ.ಟಿ.ದೇವೇಗೌಡ

**ಮೈಸೂರು:** ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದಲೇ ನಾನು ಸ್ಪರ್ಧಿಸುತ್ತೇನೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟಪಡಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಜಯಪುರ ಗ್ರಾಮದಲ್ಲಿ ಮಾತನಾಡಿದ ಅವರು, ಜೆಡಿಎಸ್ ಬಿಡುವ ಪ್ರಶ್ನೆಯೇ ಇಲ್ಲ. ಒಂದು ವೇಳೆ ಜೆಡಿಎಸ್ ಪಕ್ಷದಿಂದ ಟಿಕೆಟ್ ಕೊಡದಿದ್ದರೆ ಕ್ಷೇತ್ರದ ಜನರಾದ ನೀವು ಹೇಳಿದಂತೆ ಕೇಳುತ್ತೇನೆ ಎಂದು ಕ್ಷೇತ್ರದ ಜನರ ಮುಂದೆ ಭಾವನಾತ್ಮಕವಾಗಿ ದಾಳ ಉರುಳಿಸಿದ್ದಾರೆ.

ನಾನು ಜೆಡಿಎಸ್ ಪಕ್ಷದಲ್ಲೇ ಇದ್ದೇನೆ. ಮುಂದೆಯೂ ಇರುತ್ತೇನೆ. ಟಿಕೆಟ್ ಕೊಡದಿದ್ದರೆ ಮತದಾರರು ನೀವು ಏನು ಹೇಳ್ತಿರಾ ಅದಕ್ಕೆ ನಾನು ಬದ್ಧ. ನೀವು ಅರ್ಜಿ ಹಾಕು ಅಂದರೆ ಹಾಕುತ್ತೇನೆ. ನಿಮ್ಮ ಪ್ರೀತಿ ಆಶೀರ್ವಾದವೇ ನನಗೆ ದೈವ ಎಂದು ಹೇಳಿದರು.

ಮಾಜಿ ಶಾಸಕ ಸಾ.ರಾ.ಮಹೇಶ್ ವಿರುದ್ಧ ವಾಗ್ದಾಳಿ ನಡೆಸಿದ ಜಿಟಿಡಿ, ನಾನು ಪಕ್ಷ ಕಟ್ಟುವಾಗ ಸಾರಾ ಎಲ್ಲಿದ್ದರು ಎಂದು ಪ್ರಶ್ನಿಸಿದರು. ನನ್ನ ಬಳಿ ಯಾವುದೇ ಸಹಾಯ ಮಾಡಿಸಿಕೊಳ್ಳದ ಜನರು ನನ್ನನ್ನು ಗೆಲ್ಲಿಸಿದ್ದಾರೆ. ಆದರೆ, ನಾನು ಬೆಳೆಸಿದವರು, ದುಡ್ಡು ಮಾಡಿದವರು ನನ್ನ ವಿರುದ್ಧವೇ ನಿಂತಿದ್ದಾರೆ. ಇದು ಇವತ್ತಿನದ್ದಲ್ಲ, ಹಿಂದಿನಿಂದಲೂ ನಡೆದುಕೊಂಡು ಬಂದಿದೆ ಎಂದು ಹೇಳುವ ಮೂಲಕ ಭಾವನಾತ್ಮಕ ದಾಳ ಪ್ರಯೋಗಿಸಿದ್ದಾರೆ.



ಈಗಾಗಲೇ ಜೆಡಿಎಸ್‌ನ ಎಲ್ಲಾ ಸಭೆಗಳಿಗೂ ಜಿಟಿಡಿ ಗೈರಾಗಿದ್ದಾರೆ. ಜೆಡಿಎಸ್ ವರಿಷ್ಠರು ಕೂಡ ಜಿಟಿಡಿ ಬಿಟ್ಟು ಮುಂದೆ ಹೋಗುವ ಮಾತಾಡಿದ್ದಾರೆ. ಫ್ಲೆಕ್ಸ್‌ಗಳಲ್ಲೂ ಜಿಟಿಡಿ ಫೋಟೋಗೆ ಕೊಕ್ ನೀಡಲಾಗಿದೆ. ಈ ಹಂತದಲ್ಲಿ ಜಿಟಿಡಿ ಪ್ರಯೋಗಿಸಿರುವ ಭಾವನಾತ್ಮಕ ದಾಳ ಕ್ಷೇತ್ರದಲ್ಲಿ ಕುತೂಹಲ ಮೂಡಿಸಿದೆ.

### ಸದ್ಯಕ್ಕೆ ಜೆಡಿಎಸ್ ಪಕ್ಷದಲ್ಲಿ ಇಲ್ಲ: ಜಿಟಿಡಿಗೆ ಸಾ.ರಾ. ಮಹೇಶ್ ತಿರುಗೇಟು


**ಮೈಸೂರು:** ಶಾಸಕ ಜಿ.ಟಿ.ದೇವೇಗೌಡ ಅವರು ಸದ್ಯಕ್ಕೆ ಜೆಡಿಎಸ್ ಪಕ್ಷದಲ್ಲಿ ಇಲ್ಲ ಎಂದು ನಾಯಕ ಎಚ್.ಡಿ.ಕುಮಾರಸ್ವಾಮಿ ಅವರೇ ಸ್ಪಷ್ಟವಾಗಿ ಹೇಳಿದ್ದಾರೆ. ವಿಧಾನಸಭೆ ಚುನಾವಣೆಗೆ ಇನ್ನೂ ಎರಡೂವರೆ ವರ್ಷವಿದೆ. ಮುಂದೆ ನೋಡೋಣ ಎಂದು ಸಾ.ರಾ. ಮಹೇಶ್ ತಿರುಗೇಟು ನೀಡಿದರು.



ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ನಾನು ಪಕ್ಷಕಟ್ಟುವಾಗ ಸಾ.ರಾ ಪುಟ 2ಕ್ಕೆ

## ಕೆಪಿಎಸ್‌ಸಿ ಸುಧಾರಣೆಗೆ ಸದನ ಸಮಿತಿ ರಚನೆ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದದಲ್ಲಿ ಸುಧಾರಣೆ ತರಲು ಸದನ ಸಮಿತಿ ರಚನೆಗೆ ಸರ್ಕಾರ ನಿರ್ಧಾರ ಮಾಡಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.



ವಿಧಾನಸಭೆಯಲ್ಲಿ ಕೆಪಿಎಸ್‌ಸಿ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎನ್ನಲಾದ ಆರೋಪಕ್ಕೆ ಸಂಬಂಧಿಸಿದಂತೆ ಉತ್ತರ ನೀಡಿದ ಅವರು, ಸರ್ವಪಕ್ಷಗಳ ಎಂಟು ಸದಸ್ಯರು ಇರುವ ಸದನ ಸಮಿತಿ ರಚನೆಗೆ ಸಿಎಂ ಆದೇಶಿಸಿದ್ದಾರೆ. ಕೆಪಿಎಸ್‌ಸಿ ಪರೀಕ್ಷಾ ವ್ಯವಸ್ಥೆ ಸರಿಪಡಿಸಲು ಈ ಸದನ ಸಮಿತಿ ಕೊಡುವ ಶಿಫಾರಸುಗಳನ್ನು ಜಾರಿ ಮಾಡಲಾಗುವುದು ಎಂದು ಉತ್ತರಿಸಿದರು. ಒಂದೇ ಕೊಠಡಿಯಲ್ಲಿ 11–12 ಜನ ಆಯ್ಕೆ ಆಗಿದ್ದಾರೆ. ಅದರಲ್ಲೂ ಒಂದೇ ಕುಟುಂಬದ 3–4 ಮಂದಿ ಅರ್ಹತಾ ಪರೀಕ್ಷೆಗೆ ಆಯ್ಕೆ ಆಗಿದ್ದಾರೆ ಎನ್ನುವುದು ಆರೋಪ.

## ವಸತಿ ಕಟ್ಟಡಕ್ಕೆ ಬೆಂಕಿ: 8 ಮಂದಿ ಸಜೀವದಹನ



**ನವದೆಹಲಿ:** ವಸತಿ ಕಟ್ಟಡವೊಂದರಲ್ಲಿ ಬುಧವಾರ ಬೆಳಗ್ಗೆ ಏಕಾಏಕಿ ಬೆಂಕಿ ಹೊತ್ತಿ 8 ಮಂದಿ ಸಾವನ್ನಪ್ಪಿರುವ ಘಟನೆ ನೈಋತ್ಯ ದೆಹಲಿಯ ಪಾಲಂ ಪ್ರದೇಶದಲ್ಲಿ ನಡೆದಿದೆ. ಬುಧವಾರ ಮುಂಜಾನೆ 7 ಗಂಟೆಯ ಸುಮಾರಿಗೆ ಅಗ್ನಿ ಅವಘಡ ನಡೆದಿದೆ. ಘಟನಾ ಸ್ಥಳಕ್ಕೆ 30 ಅಗ್ನಿಶಾಮಕ ವಾಹನಗಳು ರಕ್ಷಣಾ ಕಾರ್ಯಾಚರಣೆ ನಡೆಸಿದವು. ಕಟ್ಟಡದ ಒಳಗೆ ಇನ್ನೂ ಹಲವರು ಸಿಲುಕಿರುವ ಶಂಕೆಯಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಅಗ್ನಿ ಅವಘಡಕ್ಕೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಘಟನೆ ಸಂಬಂಧ ಹೆಚ್ಚಿನ ತನಿಖೆ ನಡೆಯುತ್ತಿದೆ.

## ಸಚಿವ ಸ್ಥಾನಕ್ಕೆ ಹಿರಿಯರ ಒತ್ತಡ: ಹೊಸ ಶಾಸಕರ 'ಡಿನ್ನರ್ ಪಾರ್ಟಿ'

**ಬೆಂಗಳೂರು:** ಬಜೆಟ್ ಅಧಿವೇಶನ ನಂತರ ಸಂಪುಟ ಪುನಾರಚನೆ ನಡೆಯಲಿದೆ ಎಂಬ ಸುದ್ದಿಯ ನಡುವೆ ಕಾಂಗ್ರೆಸ್ ನಿಂದ ಮೊದಲು ಮತ್ತು ಎರಡನೇ ಬಾರಿ ಆಯ್ಕೆಯಾದ ಶಾಸಕರು ಕಳೆದ ರಾತ್ರಿ ಬೆಂಗಳೂರಿನ ಖಾಸಗಿ ಹೋಟೇಲ್ ನಲ್ಲಿ ಔತಣ ಕೂಟ ನಡೆಸಿದ್ದಾರೆ. 48 ಶಾಸಕರು ಡಿನ್ನರ್ ಮೀಟಿಂಗ್ ನಲ್ಲಿ ಭಾಗವಹಿಸಿದ್ದರು.

ಸಚಿವ ಸಂಪುಟ ಪುನಾರಚನೆ ವೇಳೆ ಮೊದಲ ಮತ್ತು ಎರಡನೇ ಬಾರಿ ಶಾಸಕರಾದವರಿಗೆ ಸಚಿವ ಸ್ಥಾನ ನೀಡುವ ಬಗ್ಗೆ ಒತ್ತಡ ಹೇರುವ ಕುರಿತು ಕಾರ್ಯತಂತ್ರ ಹೆಣೆಯಲು ಸಭೆಯಲ್ಲಿ ಚರ್ಚಿಸಿದರು ಎಂದು ತಿಳಿದುಬಂದಿದೆ. ಇದೇ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ನಲ್ಲಿ ನಾಯಕತ್ವ ಬದಲಾವಣೆ ವಿಚಾರದಲ್ಲಿ ಹೈಕಮಾಂಡ್ ಮಧ್ಯಪ್ರವೇಶಕ್ಕೆ ಒತ್ತಾಯಿಸಲು ಕೈ ಶಾಸಕರು ಚರ್ಚಿಸಿದ್ದಾರೆ ಎನ್ನಲಾಗಿದೆ.

ಇದಕ್ಕೂ ಮುನ್ನ ಸಿಎಂ ಸಿದ್ದರಾಮಯ್ಯ ಅವರನ್ನು ವಿಧಾನಸಭೆಯಲ್ಲಿ ಭೇಟಿಯಾದ ಹಿರಿಯ ಕೈ ಶಾಸಕರು ಸಂಪುಟ ಪುನಾರಚನೆ ವೇಳೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದ್ದಾರೆ. ಸುಮಾರು 16 ಹಿರಿಯ ಪುಟ 2ಕ್ಕೆ

## ಅಧಿಕಾರಿಗಳ ವಿರುದ್ಧ ದೇವರಾಜೇಗೌಡ ಕಿಡಿ

**ಹಾಸನ:** ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಪ್ರಕರಣದಲ್ಲಿ ತಮ್ಮನ್ನು ಅನ್ಯಾಯವಾಗಿ ಆರೋಪಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಈ ಪ್ರಕರಣದಲ್ಲಿ ಯಾರು ಭಾಗಿಯಾಗಿದ್ದಾರೆ ಎಂಬುದು ಸಾರ್ವಜನಿಕರಿಗೆ ಗೊತ್ತಿರುವ ವಿಚಾರ. ರಾಜ್ಯ ರಾಜಕಾರಣದಲ್ಲಿ ದೊಡ್ಡ ಸಂಚಲನ ಮೂಡಿಸಿದ ಪ್ರಕರಣ ಇದಾಗಿದೆ ಎಂದು ಪ್ರಕರಣದ ಆರೋಪಿಯೂ ಆಗಿರುವ ಬಿಜೆಪಿ ಮುಖಂಡ ದೇವರಾಜೇಗೌಡ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ತನಿಖೆ ನಡೆಸಿದ ಅಧಿಕಾರಿಗಳು ಕಾಂಗ್ರೆಸ್ ಪಕ್ಷದ ಪ್ರಭಾವದಲ್ಲಿ ಕೆಲಸ ಮಾಡಿದ್ದಾರೆ. ನಿಜವಾಗಿ ಪೆನ್‌ಡ್ರೈವ್ ಹಂಚಿಕೆ ಮಾಡಿದವರ ಹೆಸರು ಚಾರ್ಜ್‌ಶೀಟ್‌ನಲ್ಲಿ ಇಲ್ಲ. ತನಿಖೆ ನಡೆಸಿದ ಅಧಿಕಾರಿಗಳ ವಿರುದ್ಧವೇ ಪುಟ 2ಕ್ಕೆ

# ದೇವಾಲಯದ ಹುಂಡಿ ಹಣ ಲೂಟಿ

## ಕಾಂಗ್ರೆಸ್ ವಿರುದ್ಧ ಮಾಜಿ ಶಾಸಕ ಸಾ.ರಾ.ಮಹೇಶ್ ವಾಗ್ದಾಳಿ

**ಮೈಸೂರು:** ಭ್ರಷ್ಟಚಾರ ಮುಕ್ತ ಆಡಳಿತ ನೀಡುವುದಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ದೇವಾಸ್ಥಾನದ ಹುಂಡಿಯನ್ನೂ ಬಿಡದೆ ಲೂಟಿ ಮಾಡುತ್ತಿದೆ ಎಂದು ಮಾಜಿ ಶಾಸಕ ಸಾ.ರಾ.ಮಹೇಶ್ ವಾಗ್ದಾಳಿ ನಡೆಸಿದರು.

ನಗರದ ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯಲ್ಲಿ ನಡೆದ ಧನುರ್ಮಾಸದ ಜಾತ್ರಾ ಮಹೋತ್ಸವದಲ್ಲಿ ಕೇವಲ ಪೇಂಟಿಂಗ್ ಕೆಲಸಕ್ಕೆ ಜಿಎಸ್‌ಟಿ ಹೊರತುಪಡಿಸಿ 5,27,639 ರೂ ಬಿಲ್ ಮಾಡಲಾಗಿದೆ. ಈ ಹಿಂದೆ ಇದೇ ಕೆಲಸಕ್ಕೆ ಗರಿಷ್ಠ ಎಂದರೆ ಕೇವಲ 1 ಲಕ್ಷ ರೂಪಾಯಿ ವೆಚ್ಚವಾಗುತ್ತಿತ್ತು. ಇನ್ನು ಲೈಟಿಂಗ್, ಸೌಂಡ್ ಸಿಸ್ಟಮ್ ಮತ್ತು ಬ್ಯಾರಿಕೇಡ್ ವ್ಯವಸ್ಥೆಗೆ 14,74,876 ರೂ ಬಿಲ್ ಮಾಡಿದ್ದಾರೆ. ನಿರ್ಮಿತಿ ಕೇಂದ್ರದಿಂದ ಈ ಜಾತ್ರೆಗಾಗಿ 32 ಲಕ್ಷ ರೂ ಡ್ರಾ ಮಾಡಲಾಗಿದೆ. ರೈತರು ಜಾನುವಾರುಗಳನ್ನು ಕಟ್ಟುತ್ತಾರೆ. ವ್ಯಾಪಾರಿಗಳು ಅಂಗಡಿಗಳನ್ನು ಹಾಕುತ್ತಾರೆ. 32 ಲಕ್ಷ ಖರ್ಚು ಮಾಡಿದ್ದಾದರೂ ಯಾಕೆ ಎಂದು ಪ್ರಶ್ನಿಸಿದರು.



2019ರಲ್ಲಿ ಜಾತ್ರೆಗೆ 4.47ಲಕ್ಷ 2020–21 (ಕೋವಿಡ್ ಸಮಯ) 21,000 ರೂ, ನಾನು ಶಾಸಕನಾಗಿದ್ದಾಗ 2022–23ರಲ್ಲಿ 3.74.600 ರೂ. ಖರ್ಚು ಮಾಡಲಾಗಿತ್ತು. ಈ ಬಾರಿ 32 ಲಕ್ಷ ಎಂದರೆ ಸರ್ಕಾರ ಎಷ್ಟು ಪರ್ಸೆಂಟ್ ಭ್ರಷ್ಟಾಚಾರ ಮಾಡುತ್ತಿದೆ ಎಂದು ಜನರೇ ತೀರ್ಮಾನಿಸಬೇಕು. ಅಲ್ಲದೆ ದೇವಸ್ಥಾನದ ಅಭಿವೃದ್ಧಿಗೆ ಬಳಸಬೇಕಿದ್ದ ಸುಮಾರು 80 ಲಕ್ಷ ಹುಂಡಿ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಸಿಎಂ ಜಿಲ್ಲೆಯಲ್ಲಿ ಈ ರೀತಿಯಾದರೆ ರಾಜ್ಯದ ಗತಿಯೇನು? ಈ ಭ್ರಷ್ಟಾಚಾರಗಳ ಹಿಂದೆ ಯಾರಿದ್ದಾರೆ? ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ಬಿಜೆಪಿ 40 ಪರ್ಸೆಂಟ್ ಸರ್ಕಾರ ಎಂದು ಆರೋಪಿಸಿ, ಜನರಿಗೆ ಭ್ರಷ್ಟಾಚಾರ ಮುಕ್ತ ಆಡಳಿತದ ಭರವಸೆ ನೀಡಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂತು. ಆದರೆ, ಸರ್ಕಾರ ಈಗ ಮಾಡುತ್ತಿರುವುದಾದರೂ ಏನು? ದೇವಸ್ಥಾನದಲ್ಲೂ ಲಂಚ ಪಡೆಯುತ್ತಿದೆ ಎಂದು ಕಿಡಿ ಕಾರಿದರು.

ಕೆ.ಆರ್.ನಗರದ ಜನರಲ್ ಆಸ್ಪತ್ರೆ ಮತ್ತು ಮಹಿಳಾ ಹಾಗೂ ಮಕ್ಕಳ ಆಸ್ಪತ್ರೆಯಲ್ಲಿ ಶುಲ್ಕ ವಿಧಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ಹಿಂದೆ ಶುಲ್ಕವಿರಲಿಲ್ಲ. ಪುಟ 2ಕ್ಕೆ

## ದೇವೇಗೌಡ, ಖರ್ಗೆಗೆ ಮೋದಿ ಶ್ಲಾಘನೆ

ರಾಜಕೀಯದಲ್ಲಿ ಪೂರ್ಣವಿರಾಮವಿಲ್ಲ | ಪ್ರಧಾನಿ ಮೋದಿ ಅಭಿಮತ

**ನವದೆಹಲಿ:** ಸಂಸತ್ತನ್ನು ಮುಕ್ತ ವಿಶ್ವವಿದ್ಯಾಲಯ ಇದ್ದಂತೆ. ರಾಜಕೀಯದಲ್ಲಿ ಪೂರ್ಣವಿರಾಮ ಇರುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟರು.



ರಾಜ್ಯಸಭೆಯಲ್ಲಿ ಬುಧವಾರ ನಿರ್ಗಮಿತ 59 ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಎಲ್ಲರ ಕೊಡುಗೆಯನ್ನು ಶ್ಲಾಘಿಸಿದರು. ಇಂತಹ ಕ್ಷಣಗಳು ಪಕ್ಷಗಳ ಎಲ್ಲೆಯನ್ನು ಮೀರಿ ನಮ್ಮನ್ನು ಭಾವನಾತ್ಮಕವಾಗಿಸಿಬಿಡುತ್ತವೆ. ನಿಮ್ಮ (ನಿರ್ಗಮಿತ ಸದಸ್ಯರು) ಅನುಭವ ದೇಶಕ್ಕೆ ಯಾವಾಗಲೂ ದಾರಿದೀಪ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ–ಎಸ್‌ಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಮೋದಿ ಶ್ಲಾಘಿಸಿದರು. ಇವರು ತಮ್ಮ ಜೀವನದ ಅರ್ಧದಷ್ಟು ಕಾಲವನ್ನು ಸಂಸದೀಯ ಪ್ರಕ್ರಿಯೆಗಳಲ್ಲಿಯೇ ಕಳೆದ ದಿಗ್ಗಜರು ಎಂದು ಹೇಳಿದರು.

ಅವರು ಸದನಕ್ಕೆ ಇಷ್ಟೊಂದು ಸಮರ್ಪಣಾಭಾವದಿಂದ ಹಾಜರಾಗುವುದನ್ನು ಮುಂದುವರಿಸುವ ರೀತಿ ಎಲ್ಲಾ ಹೊಸ ಸಂಸದರು ಕಲಿಯಬೇಕು. ಇದು ನಿಜಕ್ಕೂ ಅನುಕರಣೀಯ. ಇಷ್ಟು ದೀರ್ಘಾವಧಿಯ ರಾಜಕೀಯದಲ್ಲಿ ಸಕ್ರಿಯವಾಗಿರುವುದು ಸಣ್ಣ ಸಾಧನೆಯಲ್ಲ ಎಂದು ಮೋದಿ ಹೇಳಿದರು. ಪುಟ 2ಕ್ಕೆ

ಮೊದಲ ಪುಟದಿಂದ

## ಸದ್ಯಕ್ಕೆ ಜೆಡಿಎಸ್ ಪಕ್ಷದಲ್ಲಿ ಇಲ್ಲ: ಜಿಟಿಡಿಗೆ ಸಾ.ರಾ. ತಿರುಗೇಟು

ಮಹೇಶ್ ಎಲ್ಲಿ ದ್ದರು ಎಂಬ ಜಿಟಿಡಿ ಹೇಳಿಕೆ ಕುರಿತು ಪ್ರತಿಕ್ರಯಿಸಿದ ಅವರು, ನಾನು ಬಿಜೆಪಿಯಿಂದಲೇ ಬಂದಿರಬಹುದು. ಆದರೆ, ಕುಮಾರಸ್ವಾಮಿ ಸಹೋದರರನಂತೆ ಕಾಣುವ ಮೂಲಕ ನಾನು ಪಕ್ಷಕ್ಕೆ ನಿಷ್ಠೆಯಿಂದ ಇದ್ದೇನೆ. ಶಾಸಕನಾಗುವ ಮೊದಲು ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಯುವ ಜೆಡಿಎಸ್ ನಾಯಕ ಹೀಗೆ ಅನೇಕ ಹುದ್ದೆಗಳ ನಿಭಾಯಿಸಿ ಪಕ್ಷ ಸಂಘಟಿಸಿದ್ದೇನೆ. ಎಲ್ಲಾ ಬೆಳವಣಿಗೆ ಗಮನಿಸುತ್ತಿರುವ ನಮ್ಮ ಹೈಕಮಾಂಡ್ ಮುಂದೆಯೂ ಅವರಿಗೇ ಟಿಕೆಟ್ ನೀಡಿದರೆ ನಮ್ಮ ಅಭ್ಯಂತರ ಇಲ್ಲ. ಆದರೆ, ಜಿ.ಟಿ.ದೇವೇಗೌಡರು ಸದ್ಯಕ್ಕೆ ನಮ್ಮಲ್ಲಿಲ್ಲ ಎಂಬ ದೊಡ್ಡವರ ನಿಲುವೇ ನಮ್ಮ ನಿಲುವು ಎಂದು ಸಾ.ರಾ ಮಹೇಶ್ ತಿರುಗೇಟು ನೀಡಿದರು.

ನಮ್ಮ ಪಕ್ಷಕ್ಕಾಗಿ ಶ್ರದ್ಧೆ ಪ್ರಾಮಾಣಿಕವಾಗಿ ದುಡಿಯುವವರನ್ನು ಉಳಿಸಿಕೊಳ್ಳುವ ಶಿಸ್ತು ತೋರಬೇಕಾದ ಅಗತ್ಯವಿದೆ. ಕೆ.ಆರ್.ನಗರದಲ್ಲಿ ಆಪ್ತರ ಮೂಲಕ ಸ್ವಪಕ್ಷದ ನನ್ನ ವಿರುದ್ಧ ರಾಜಕಾರಣ ಮಾಡುತ್ತಾರೆ. ಪಾಲಿಕೆ, ಜಿಲ್ಲಾ ಪಂಚಾಯಿತಿ, ವಿಧಾನ ಪರಿಷತ್ ನಲ್ಲೂ ನಮ್ಮ ಪಕ್ಷದ ವಿರುದ್ಧ ನಡೆ ತೋರಿಸುತ್ತಾರೆ. ಮಾತ್ರವಲ್ಲದೆ ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ತಾವು ರಾಜ್ಯ ಮಟ್ಟದ ಸ್ಥಾನ ಉಳಿಸಿಕೊಳ್ಳಲು ನಮ್ಮ ಪಕ್ಷದವರನ್ನು ಸೋಲಿಸುತ್ತಾರೆ. ಇಷ್ಟೆಲ್ಲಾ ಪಕ್ಷಕ್ಕೆ ವಿರುದ್ಧವಾಗಿ ನಡೆದಿಕೊಂಡಿರುವುದು ಎಚ್.ಡಿ.ದೇವೇಗೌಡ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರ ಗಮನಕ್ಕೆ ಬಂದ ಹಿನ್ನೆಲೆಯಲ್ಲೇ ಅವರು ನಿರ್ಧಾರ ಹೇಳಿದ್ದಾರೆ ಎಂದು ತಿಳಿಸಿದರು.

## ಡಿಜೆ ನಿಷೇಧಕ್ಕೆ ಸರ್ಕಾರ ಚಿಂತನೆ

ಎಂದು ಹೇಳಿದರು. ಇದೇ ವೇಳೆ ಬಿಜೆಪಿಯ ಹಿರಿಯ ಶಾಸಕ ಎಸ್.ಸುರೇಶ್ ಕುಮಾರ್ ಅವರು, ಡಿಜೆ ಬ್ಯಾನ್ ಮಾಡುವ ಚಿಂತನೆಗೆ ಬೆಂಬಲ ವ್ಯಕ್ತಪಡಿಸಿದರು. ಹೃದಯ ಸಂಬಂಧಿ ಸಮಸ್ಯೆಗಳಿರುವವರು ಡಿಜೆ ಶಬ್ದದಿಂದ ತೊಂದರೆ ಅನುಭವಿಸುತ್ತಿರುವುದನ್ನು ನೋಡಿದ್ದೇವೆ. ಮಕ್ಕಳೂ ಕಿವಿ ಮುಚ್ಚಿಕೊಳ್ಳುವುದನ್ನು ಕಂಡಿದ್ದೇವೆ. ಈ ವಿಚಾರದಲ್ಲಿ ಪೊಲೀಸರೂ ಅಸಹಾಯಕರಾಗಿದ್ದಾರೆ. ಡಿಜೆಗಳಿಂದ ಆಗುತ್ತಿರುವ ಶಬ್ದಮಾಲಿನ್ಯವನ್ನು ನಾವು ಗಂಭೀರವಾಗಿ ಪರಿಗಣಿಸಬೇಕು ಎಂದು ಸಲಹೆ ನೀಡಿದರು.

## ದೇವೇಗೌಡ, ಖರ್ಗೆಗೆ ಶ್ಲಾಘನೆ

ಸಂಸತ್ತಿನ ಉಭಯ ಸದನಗಳ ಮಹತ್ವವನ್ನು ವಿವರಿಸಿದ ಮೋದಿ, ಯಾವುದೇ ನಿರ್ಧಾರಕ್ಕೆ ಎರಡನೇ ಅಭಿಪ್ರಾಯ ಪಡೆಯುವುದು ಮುಖ್ಯ. ಇದರಿಂದ ಪ್ರಜಾಪ್ರಭುತ್ವದ ನಿರ್ಧಾರಗಳನ್ನು ಬಲಪಡಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ತಮಿಳಿನ ಒಂದು ಗಾದೆಯನ್ನು ಉಲ್ಲೇಖಿಸಿದ ಸಭಾಪತಿ ಸಿ.ಪಿ. ರಾಧಾಕೃಷ್ಣನ್, ಮನುಷ್ಯ ನಿವೃತ್ತನಾಗಬಹುದು, ಆದರೆ ಅವರು ಮಾಡಿದ ಸತ್ಕಾರ್ಯಗಳು ಎಂದಿಗೂ ಜೀವಂತವಾಗಿರುತ್ತವೆ ಎಂದು ಹೇಳಿದರು.

# ಟೀಕೆಗಳಿಗೆ ಕೆಲಸದ ಮೂಲಕವೇ ಉತ್ತರ

## ಎಚ್.ಸಿ.ಬಾಲಕೃಷ್ಣ ಹೇಳಿಕೆ । 40 ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಬಿಡದಿ: ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿಲ್ಲ ಎಂಬ ವಿರೋಧಿಗಳ ಟೀಕೆಗಳಿಗೆ ಕೆಲಸದ ಮೂಲಕವೇ ಉತ್ತರ ನೀಡಲಾಗುತ್ತಿದೆ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ತಿಳಿಸಿದರು.

ಬಿಡದಿ ಹೋಬಳಿ ಬನ್ನಿಕುಪ್ಪೆ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಸುಮಾರು 40 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ/ಉದ್ಘಾಟನೆ ನೆರವೇರಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಹಣದ ಕೊರತೆ ಇಲ್ಲ. ಗ್ಯಾರಂಟಿ ಯೋಜನೆಗಳ ಜತೆಜತೆಗೆ ಅಭಿವೃದ್ಧಿಯೂ ನಡೆಯುತ್ತಿದೆ. ಇದರಿಂದ ಹತಾಶರಾಗಿರುವ ವಿಪಕ್ಷಗಳ ಮುಖಂಡರು ಜನರ ದಿಕ್ಕುತಪ್ಪಿಸಲು ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದರು.

ಬನ್ನಿಕುಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ 40 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ರಸ್ತೆ, ಮೂಲಭೂತ ಸೌಕರ್ಯ ಸೇರಿದಂತೆ ವಿಶೇಷವಾಗಿ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ಮಾಣಕ್ಕೆ ವಿಶೇಷ ಒತ್ತು ನೀಡಲಾಗಿದೆ. ವಂಡರ್ ಲಾ, ಟೊಯೋಟಾ ಕಂಪೆನಿಗಳ ಸಹಯೋಗದಲ್ಲಿ ಘಟಕಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಹೇಳಿದರು.



### ಸಚಿವ ಸಂಪುಟ ಪುನರ್ ರಚನೆ ಮಾತುಕತೆ ನಡೆದಿತ್ತು

**ಎರಡೂವರೆ ವರ್ಷದ ನಂತರ ಸಚಿವ ಸಂಪುಟ ಪುನರ್ ರಚನೆ ಮಾಡುವುದಾಗಿ ಈ ಹಿಂದೆಯೇ ಮಾತುಕತೆ ನಡೆದಿತ್ತು. ರಾಜ್ಯ ನಾಯಕರಿಗೆ ಇದೀಗ ಅದನ್ನು ಜ್ಞಾಪಿಸಿದ್ದೇವೆ. ಅದರಂತೆ ಸಚಿವ ಸ್ಥಾನ ಸಿಗುವ ಆಶಯವನ್ನು ಅವರು ವ್ಯಕ್ತಪಡಿಸಿದರು. ಮೊದಲ ಬಾರಿ ಗೆದ್ದಿರುವ ಶಾಸಕರು ಮಂತ್ರಿ ಸ್ಥಾನಕ್ಕೂ ಮಿಗಿಲಾಗಿ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಮಂತ್ರಿ ಸ್ಥಾನ ನೀಡಿದರೆ ಯಾರಾದರೂ ಬೇಡ ಎನ್ನುತ್ತಾರೆಯೇ ಎಂದ ಅವರು, ಮಂತ್ರಿ ಸ್ಥಾನ ನೀಡಲು ಕೆಲವೊಂದು ಮಾನದಂಡಗಳಿವೆ. ಅದರ ಪ್ರಕಾರ ಯಾರು ಅರ್ಹರೋ ಅವರಿಗೆ ಮಂತ್ರಿ ಸ್ಥಾನ ಸಿಗುವ ಭರವಸೆ ಇದೆ ಎಂದರು.**

ಮೂರ್ನಾಕು ಬಾರಿ ಶಾಸಕರಾಗಿರುವವರು ಸುಮಾರು 40ಕ್ಕೂ ಹೆಚ್ಚು ಶಾಸಕರಿದ್ದೇವೆ. ಹಾಲಿ ಇರುವ 20 ಸಚಿವರನ್ನು ಬದಲಿಸಿ 20 ಮಂದಿ ಹೊಸ ಮುಖಗಳಿಗೆ ಅವಕಾಶ ನೀಡಿದರೆ ಮತ್ತಷ್ಟು ಹುಮ್ಮಸ್ಸಿನಿಂದ ಕೆಲಸ ಮಾಡುತ್ತಾರೆ. ಇದರಿಂದ ಪಕ್ಷಕ್ಕೆ ಮತ್ತಷ್ಟು ಒಳ್ಳೆ ಹೆಸರು ಬರುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ನಾಯಕರ ಮೂಲಕ ಹೈಕಮಾಂಡ್‌ಗೆ ಮನವಿ ಸಲ್ಲಿಸಿದ್ದೇವೆ ಎಂದರು.



ನಮ್ಮ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಎರಡು ಕ್ಷೇತ್ರಗಳ ಉಪ ಚುನಾವಣೆ ನಂತರ ಹೈಕಮಾಂಡ್ ಗಮನಕ್ಕೆ ತಂದು ಅರ್ಹರಿಗೆ ಸಚಿವ ಸ್ಥಾನ ನೀಡುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ನಾಯಕತ್ವ ಬದಲಾವಣೆ ಆಗಬೇಕೆಂಬುದು ನಮ್ಮ ವ್ಯಾಪ್ತಿಯನ್ನು ಮೀರಿದ ವಿಚಾರ. ನಾಯಕತ್ವ ಬದಲಾಗಬೇಕೆ, ಬೇಡವೇ ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ. ನಮಗೆ ಸಚಿವ ಸ್ಥಾನ ನೀಡಬೇಕೆಂಬುದು ಮಾತ್ರವೇ ನಮ್ಮ ಬೇಡಿಕೆಯಾಗಿದೆ ಎಂದು ಪ್ರಶ್ನೆಯೊಂದಕ್ಕೆ ಬಾಲಕೃಷ್ಣ ಪ್ರತಿಕ್ರಿಯಿಸಿದರು. ಹೆಚ್ಚಿನ ಅನುದಾನ ಕೇಳುತ್ತಿದ್ದಾರೆಯೇ ಹೊರತು ಅನುದಾನವೇ ಬರುತ್ತಿಲ್ಲ ಎಂದಲ್ಲ. ಮೊದಲ ಬಾರಿ ಗೆದ್ದಿರುವವರು ಹೆಚ್ಚಿನ ಉತ್ಸಾಹದಲ್ಲಿದ್ದಾರೆ. ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿ ಮಾಡಿ ಹಿಡಿತದಲ್ಲಿಟ್ಟುಕೊಂಡು, ಇನ್ನೂ ಮೂರ್ನಾಕು ಬಾರಿ ಶಾಸಕರಾಗಬೇಕೆಂಬ ಆಸೆ, ಆಕಾಂಕ್ಷೆ ಅವರಲ್ಲಿದೆ. ಹಾಗಾಗಿ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಇಡುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜ್, ನಿರ್ದೇಶಕ ಪುಟ್ಟಯ್ಯ, ಮುಖಂಡರಾದ ಚಂದ್ರಶೇಖರ್, ಅಬ್ಬನಕುಪ್ಪೆ ರಮೇಶ್, ಚಿಕ್ಕ ಬ್ಯಾಟಪ್ಪ, ಹೊಂಬೇಗೌಡ, ಕಾಕರಾಮನಹಳ್ಳಿ ರಮೇಶ್, ಬಸವರಾಜು, ಸತೀಶ್, ಕೃಷ್ಣ, ಗೋಪಾಲ್ ರಾಜ್, ಹೇಮಂತ್, ವಾಸು, ಅಂಜನಪ್ಪ ಸೇರಿದಂತೆ ಹಲವರಿದ್ದರು.

### ನೀರಾವರಿ ವಿಚಾರ ರಾಜ್ಯಕ್ಕೆ ಅನ್ಯಾಯ

**ನೀರಾವರಿ ವಿಚಾರವಾಗಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಅದನ್ನು ಸರಿಪಡಿಸಲು ಎಲ್ಲಾ ಪಕ್ಷಗಳ ಸಂಸದರ ನಿಯೋಗದೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಂಬಂಧಪಟ್ಟ ಕೇಂದ್ರ ಸಚಿವರನ್ನು ಭೇಟಿ ಮಾಡಿದ್ದಾರೆ. ಅಸ್ಸಾಂ ಚುನಾವಣಾ ಉಸ್ತುವಾರಿಯೂ ಆಗಿದ್ದಾರೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವುದರಿಂದ ಅವರು ಆಗಾಗ್ಗೆ ದೆಹಲಿಗೆ ಭೇಟಿ ನೀಡುತ್ತಿರುತ್ತಾರೆ. ಇದಕ್ಕೆ ಬೇರೆ ಅರ್ಥ ಕಲ್ಪಿಸುವುದು ಬೇಡ ಎಂದು ಹೇಳಿದರು.**

# ಮಾ.21ರಂದು ಶಿವಕುಲತಿಲಕ ಆಚಾರ್ಯ ಶ್ರೀ ರೇವಣಸಿದ್ದೇಶ್ವರ ಕೃತಿ ಬಿಡುಗಡೆ

ರಾಮನಗರ: ಶ್ರೀ ಬಸವೇಶ್ವರ ಸಾರ್ವಜನಿಕ ವಿದ್ಯಾರ್ಥಿ ನಿಲಯ ಟ್ರಸ್ಟ್ (ಎಸ್‌ಬಿಎಸ್‌ವಿಎನ್ ಟ್ರಸ್ಟ್) ವತಿಯಿಂದ ವಿದ್ವಾನ್ ಚಂದ್ರಶೇಖರಯ್ಯ ಅವರ 'ಶಿವಕುಲತಿಲಕ ಆಚಾರ್ಯ ಶ್ರೀ ರೇವಣಸಿದ್ದೇಶ್ವರ' ಕೃತಿ ಲೋಕಾರ್ಪಣೆ ಸಮಾರಂಭವನ್ನು ಮಾ.21ರಂದು ಬೆಳಿಗ್ಗೆ 10.30 ಗಂಟೆಗೆ ತಾಲ್ಲೂಕಿನ ಅವ್ವೇರಹಳ್ಳಿಯ ಶ್ರೀ ರೇವಣಸಿದ್ದೇಶ್ವರಸ್ವಾಮಿ ಬೆಟ್ಟದಲ್ಲಿರುವ ಶ್ರೀ ರೇವಣಸಿದ್ದೇಶ್ವರಸ್ವಾಮಿ ದಾಸೋಹ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿವಗಂಗಾ ಕ್ಷೇತ್ರದ ಮೇಲಣಗವಿ ಮಠದ ಶ್ರೀ ಮಲಯಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ನಿವೃತ್ತ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಎಲ್. ರೇವಣಸಿದ್ದಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಕೃತಿಯನ್ನು ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜಶೇಖರ್ ಬಿಡುಗಡೆ ಮಾಡಲಿದ್ದಾರೆ. ಕೃತಿ ಕುರಿತು ಸಾಹಿತಿ ಡಾ.ಸಿ. ಶಿವಕುಮಾರಸ್ವಾಮಿ ಮಾತನಾಡಲಿದ್ದಾರೆ. ಶ್ರೀ ರೇವಣಸಿದ್ದೇಶ್ವರ ಕ್ಷೇತ್ರಾಭಿವೃದ್ಧಿ ಸೇವಾ ಸಮಿತಿ ಟ್ರಸ್ಟಿನ ರೇಣುಕಾನಂದಸ್ವಾಮಿ, ಚನ್ನಬಸಪ್ಪನವರು ಸಮಾರಂಭದಲ್ಲಿ ಉಪಸ್ಥಿತರಿರುವರು. ಇದೇ ಸಂದರ್ಭದಲ್ಲಿ ವಿದ್ವಾನ್ ಚಂದ್ರಶೇಖರಯ್ಯವರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



**ವಿದ್ವಾನ್ ಚಂದ್ರಶೇಖರಯ್ಯ ಪರಿಚಯ :**

ರಾಮನಗರ ತಾಲ್ಲೂಕಿನ ದೊಡ್ಡ ಗಂಗವಾಡಿ ಗ್ರಾಮದ ಮೂಲದವರಾದ ದಿ.ಚಿಕ್ಕವೀರಯ್ಯ ಹಾಗೂ ಶಿವಮ್ಮನವರ ಪುತ್ರರಾದ ಚಂದ್ರಶೇಖರಯ್ಯ ರಾಮನಗರದಲ್ಲಿ 1956 ರಲ್ಲಿ ಜನಿಸಿದರು. ಇವರ ಪ್ರಾಥಮಿಕ ವಿದ್ಯಾಭ್ಯಾಸವು ರಾಮನಗರದಲ್ಲಿ ಮುಗಿಸಿ ಪ್ರೌಢ ಶಿಕ್ಷಣವನ್ನು ಕುಣಿಗಲ್ ತಾಲ್ಲೂಕಿನ ಅಂಕನಹಳ್ಳಿ ಮಠದಲ್ಲಿ ಮುಂದುವರೆಸಿದರು. ನಂತರ ಪಿಯುಸಿ ವಿದ್ಯಾಭ್ಯಾಸವನ್ನು ರಾಮನಗರದಲ್ಲಿ ಮುಗಿಸಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಗಳಿಸಿ ಆ ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರೊ. ಸರಗು ಕೃಷ್ಣಮೂರ್ತಿರವರ ಮಾರ್ಗದರ್ಶನದಲ್ಲಿ ಎಂ.ಎ (ಹಿಂದಿ) ಸ್ನಾತಕೋತ್ತರ ಪದವಿಯನ್ನು ಗಳಿಸಿದರು. ಆದಿಚುಂಚನಗಿರಿ ಶ್ರೀ ಕಾಲಭೈರವೇಶ್ವರ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಅಲಂಕಾರ ಶಾಸ್ತ್ರದಲ್ಲಿ ಸಂಸ್ಕೃತ ವಿದ್ವತ್ ಮಧ್ಯಮ ಹಾಗೂ ವಿದ್ವತ್ ಸಂಸ್ಕೃತ ಉತ್ತಮ ಪದವಿಯನ್ನು ಗಳಿಸಿದ್ದಾರೆ.

ಕುಣಿಗಲ್ ತಾಲ್ಲೂಕು ಅಂಕನಹಳ್ಳಿ ಮಠದಲ್ಲಿರುವ ಸಂಸ್ಕೃತ ಪಾಠಶಾಲೆಯಲ್ಲಿ ಶಿಕ್ಷಕರಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿ ಆ ನಂತರ ಪಾಠಶಾಲೆಯ ಮುಖ್ಯಶಿಕ್ಷಕರಾಗಿ ಸೇವೆ ಸಲ್ಲಿಸಿದರು. 2010 ರಿಂದ 2018 ರವರೆಗೆ ಶ್ರೀ ಮಠದ ಸಂಸ್ಕೃತ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾಗಲೇ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಬೆಂಗಳೂರು ಇಲ್ಲಿಗೆ ಸೆನೆಟ್ ಮೆಂಬರ್ ಆಗಿ ಆಯ್ಕೆಯಾಗಿ 2 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

1997 ರಿಂದ 2014 ರವರೆಗೆ ಕರ್ನಾಟಕ ರಾಜ್ಯದ ಸಂಸ್ಕೃತ ಪಾಠ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಸತತವಾಗಿ 18 ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದಾರೆ. ಈ ಅವಧಿಯಲ್ಲಿ ರಾಜ್ಯ ಮಟ್ಟದ ಹದಿನೇಳು ಸಂಸ್ಕೃತ ಸಮಾವೇಶಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ನಡೆಸಿದ್ದಾರೆ.

2016ರಲ್ಲಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ ನವದೆಹಲಿ ಇವರು ಚಂದ್ರಶೇಖರಯ್ಯನವರನ್ನು "ಶಾಸ್ತ್ರ ಚೂಡಾಮಣಿ" ಎಂದು ಗುರುತಿಸಿ ಗೌರವಿಸಿದ್ದಾರೆ.

2006ರಲ್ಲಿ ಶ್ರೀಯುತರು ಶಿವಮೊಗ್ಗದಲ್ಲಿ ನಡೆದ ರಾಜ್ಯಮಟ್ಟದ ಸಂಸ್ಕೃತ ಸಮಾರಂಭದಲ್ಲಿ ವಿದ್ವಾಂಸರ ಸಭೆಯಲ್ಲಿ ಉಪನ್ಯಾಸ ನೀಡಿದ್ದಾರೆ. 2009ರಲ್ಲಿ ಆರ್ಟ್ ಆಫ್ ಲಿವಿಂಗ್ ರವಿಶಂಕರ್ ಗುರೂಜಿ ಆಶ್ರಮದಲ್ಲಿ ನಡೆದ ಸಮಾರಂಭದಲ್ಲಿ ಉಪನ್ಯಾಸ ನೀಡಿರುತ್ತಾರೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಸಂಸ್ಕೃತ ಶಿಕ್ಷಕರು ಹಾಗೂ ವಿದ್ವಾಂಸರ ಸಭೆಯಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ.

ಸುತ್ತೂರು ಶ್ರೀ ಮಠದ ಆಶ್ರಯದಲ್ಲಿ ಕಾರ್ಯ ಮಾಡುತ್ತಿರುವ ಅಖಿಲ ಭಾರತ ಶರಣ ಸಾಹಿತ್ಯ ಪರಿಷದ್ ನ ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಅಖಿಲ ಭಾರತೀಯ ಸಾಹಿತ್ಯ ಪರಿಷದ್ ನ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಾವೇ ಸ್ವತಃ ಅನೇಕ ಪೌರಾಣಿಕ, ಐತಿಹಾಸಿಕ ನಾಟಕಗಳನ್ನು ರಚಿಸಿ, ನಿರ್ದೇಶಿಸಿ, ರಂಗಭೂಮಿಯಲ್ಲಿ ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ.

ಮೊದಲ ಪುಟದಿಂದ

## ದೇವಾಲಯದ ಹುಂಡಿ ಹಣ ಲೂಟಿ

ಈಗ 10 ರೂಪಾಯಿ ಮಾಡಲಾಗಿದೆ. ಜನರಲ್ ಆಸ್ಪತ್ರೆಗೆ 5 ರೂಪಾಯಿ ಇದ್ದ ಶುಲ್ಕವನ್ನು ಹೆಚ್ಚಿಸಲಾಗಿದೆ. ಆಸ್ಪತ್ರೆಯಲ್ಲಿದ್ದ ಸುಮಾರು 60 ಲಕ್ಷ ರೂಪಾಯಿ ಹಣ ಎಲ್ಲಿ ಖರ್ಚಾಗಿದೆ ಎಂಬ ಮಾಹಿತಿಯೇ ಇಲ್ಲ. ಸಾಲಿಗ್ರಾಮ ಗ್ರಾಮ ಪಂಚಾಯತ್ ಪಿಡಿಒ ಒಬ್ಬರನ್ನು ರಜೆಯ ಮೇಲೆ ಕಳುಹಿಸಿ ಕೇವಲ 15 ದಿನಗಳಲ್ಲಿ ಹಳೆಯ ಡೇಟ್ ಹಾಕಿ ಗ್ರಾಮ ಪಂಚಾಯತ್ ಖಾತೆಯಿಂದ 44 ಲಕ್ಷ ರೂಪಾಯಿ ಹಣ ಡ್ರಾ ಮಾಡಲಾಗಿದೆ. ಇದು ಈ ಸರ್ಕಾರದ ಭ್ರಷ್ಟಾಚಾರಕ್ಕೆ ಹಿಡಿದ ಕೈಗನ್ನಡಿ ಎಂದು ದೂರಿದರು.

ದಿವಾಳಿಯತ್ತ ರಾಜ್ಯ ಸರ್ಕಾರ: 17 ಬಾರಿ ದಾಖಲೆಯ ಬಜೆಟ್ ಮಂಡಿಸಿದ್ದೇನೆ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯ ರಾಜ್ಯವನ್ನು ದಿವಾಳಿಯತ್ತ ಕೊಂಡೊಯ್ಯುತ್ತಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಸರ್ಕಾರ ದಿವಾಳಿಯಾಗಿರುವುದು ತಿಳಿಯುತ್ತದೆ. 2018-19ರಲ್ಲಿ ಎಚ್.ಡಿ.ಕುಮಾರಸ್ವಾಮಿ ಸಿಎಂ ಆಗಿದ್ದಾಗ ಬಜೆಟ್‌ನ ಶೇ.24 ರಷ್ಟು ಹಣವನ್ನು ಅಭಿವೃದ್ಧಿ ಕೆಲಸಗಳಿಗೆ (ಬಂಡವಾಳ ವೆಚ್ಚ) ಮೀಸಲಿಡಲಾಗುತ್ತಿತ್ತು. ಆದರೆ, 2026-27ರ ಬಜೆಟ್‌ನಲ್ಲಿ ಇದು ಕೇವಲ ಶೇ.16.7ಕ್ಕೆ ಕುಸಿದಿದೆ. ಅಂದರೆ ಅಭಿವೃದ್ಧಿ ಕೆಲಸಗಳಿಗೆ ಶೇ.10ರಷ್ಟು ಹಣ ಕಡಿತವಾಗಿದೆ. ಹಿಂದಿನ ಎಲ್ಲಾ ಸಿಎಂಗಳು ಸೇರಿ ಮಾಡಿದ್ದ ಒಟ್ಟು ಸಾಲ 3.27 ಲಕ್ಷ ಕೋಟಿ. ಇದನ್ನು ಸಿದ್ದರಾಮಯ್ಯ 8.24 ಲಕ್ಷ ಕೋಟಿಗೆ ಏರಿಸಿದ್ದಾರೆ. ಹಿಂದೆ ಪ್ರತಿ ವ್ಯಕ್ತಿಯ ಮೇಲೆ 50 ಸಾವಿರ ರೂ. ಸಾಲವಿದ್ದರೆ, ಇಂದು ಹುಟ್ಟುವ ಮಗುವಿನ ತಲೆಯ ಮೇಲೂ 1.18 ಲಕ್ಷ ರೂ. ಸಾಲವಿದೆ. ಸಿದ್ದರಾಮಯ್ಯ ವೋಟಿನ ದುರಾಸೆಗೆ ರಾಜ್ಯವನ್ನು ದಿವಾಳಿ ಮಾಡುತ್ತಿದ್ದಾರೆ. ಇನ್ನಾದರೂ ಎಚ್ಚೆತ್ತುಕೊಳ್ಳಿ. ವೋಟ್ ಬ್ಯಾಂಕ್ ರಾಜಕಾರಣ ಬಿಟ್ಟು ಅಭಿವೃದ್ಧಿ ಮಾಡಿ. ದೂರದೃಷ್ಟಿಯ ಯೋಜನೆಗಳನ್ನು ಜಾರಿಗೆ ತನ್ನಿ. ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವ ಕಡೆ ಗಮನಹರಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್‌ಕುಮಾರ್, ಮಾಜಿ ಮೇಯರ್‌ಗಳಾದ ಎಂ.ಜೆ.ರವಿಕುಮಾರ್, ಆರ್.ಲಿಂಗಪ್ಪ, ಸೋಮಣ್ಣ ಇತರರು ಇದ್ದರು.

## ಅಧಿಕಾರಿಗಳ ವಿರುದ್ಧ ಕಿಡಿ

ತನಿಖೆ ನಡೆಸುವಂತೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸುವುದಾಗಿ ದೇವರಾಜೇಗೌಡ ತಿಳಿಸಿದರು.

ಡಿ.ಕೆ.ಶಿವಕುಮಾರ್ ಪ್ರಕರಣದಲ್ಲಿ ಮೊದಲನೇಯವರಾಗಿದ್ದರು. ಖಾಸಗಿ ಚಾನೆಲ್‌ಗೆ ಪೆನ್‌ಡ್ರೈವ್ ಹೇಗೆ ತಲುಪಿತು ಎಂಬುದರ ಕುರಿತು ಯಾರೂ ಪ್ರಶ್ನಿಸಿಲ್ಲ. ಹಾಸನದಲ್ಲಿ ಪೆನ್‌ಡ್ರೈವ್ ತಯಾರಿ ಹಾಗೂ ಹಂಚಿಕೆ ಬಗ್ಗೆ ಎಲ್.ಆರ್. ಶಿವರಾಮೇಗೌಡ ಮಾತನಾಡಿದ ಆಡಿಯೋ ವೈರಲ್ ಆಗಿದ್ದರೂ, ತನಿಖೆಯಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಆರೋಪಿಸಿದರು.

ರಾಜ್ಯ ಸರ್ಕಾರ ಎಸ್‌ಐಟಿ ರಚನೆ ಮಾಡಿದ್ದರೂ, ಒಂದು ಕುಟುಂಬವನ್ನು ರಾಜಕೀಯವಾಗಿ ಮುಗಿಸಲು ಪ್ರಯತ್ನ ನಡೆದಿದೆ. ತಪ್ಪಿತಸ್ಥರು ಯಾರೇ ಇದ್ದರೂ ಕಾನೂನು ಮುಂದೆ ತಲೆಬಾಗಬೇಕು. ನನ್ನಿಂದ ಯಾರಿಗೂ ಪೆನ್‌ಡ್ರೈವ್ ಅಥವಾ ವಿಡಿಯೋ ಹೋಗಿದ್ದರೆ ಅದನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಲಿ. ನನ್ನ ಮೊಬೈಲ್ ಮತ್ತು ಕಂಪ್ಯೂಟರ್ ವಶಕ್ಕೆ ಪಡೆದಿದ್ದು, ಅದರಲ್ಲಿ ಏನನ್ನಾದರೂ ಸೇರಿಸುವ ಸಾಧ್ಯತೆ ಇದೆ ಎಂಬ ಅನುಮಾನ ವ್ಯಕ್ತಪಡಿಸಿದರು.

ಈ ಪ್ರಕರಣದಲ್ಲಿ ಕಾರ್ತಿಕ್ ಗೌಡ ಕಿಂಗ್‌ಪಿನ್. ಪ್ರಮುಖ ಆರೋಪಿಗಳ ಪಟ್ಟಿಯಲ್ಲಿ ಪ್ರೀತಂ ಗೌಡ ಸೇರಿದಂತೆ ಕೆಲವರ ಹೆಸರುಗಳು ಕಾಣೆಯಾಗಿವೆ. ಹೋಟೆಲ್ ಅಶೋಕದಲ್ಲಿ ಪೆನ್‌ಡ್ರೈವ್ ಹಂಚಿಕೆ ನಡೆದ ಮಾಹಿತಿ ಇದ್ದರೂ ಆ ಸ್ಥಳವನ್ನು ಕಸ್ಟಡಿಗೆ ಪಡೆಯಲಿಲ್ಲ. ಸಂಸದ ಶ್ರೇಯಸ್ ಪಟೇಲ್ ಅವರಿಗೆ ನೋಟಿಸ್ ನೀಡದಿರುವುದು, ಅಂದಿನ ಎಸ್‌ಪಿ ಮೊಹಮ್ಮದ್ ಸುಜೀತಾ ಅವರ ಪಾತ್ರದ ಕುರಿತು ತನಿಖೆ ನಡೆಸದಿರುವುದು ಸೇರಿದಂತೆ ಹಲವು ಅಂಶಗಳನ್ನು ಪ್ರಶ್ನಿಸಿದರು.

## ಹೊಸ ಶಾಸಕರ 'ಡಿನ್ನರ್ ಪಾರ್ಟಿ'

ಕಾಂಗ್ರೆಸ್ ಶಾಸಕರು ಸಿಎಂ ಭೇಟಿ ಮಾಡಿ ಸಚಿವ ಸ್ಥಾನ ನೀಡುವಂತೆ ಬೇಡಿಕೆ ಇಟ್ಟರು. ಮೂರು ನಾಲ್ಕು ಬಾರಿ ಗೆದ್ದ ಶಾಸಕರು ಸಿಎಂ ಭೇಟಿ ಮಾಡಿ ಮಾತುಕತೆ ನಡೆಸಿದರು. ಸಚಿವ ಸಂಪುಟ ಪುನಾರಚನೆ ವೇಳೆ ನಮ್ಮನ್ನು ಪರಿಗಣಿಸಿ. ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ಈಗಾಗಲೇ ಕಿರಿಯ ಕಾಂಗ್ರೆಸ್ ಶಾಸಕರು ಸಚಿವ ಸಂಪುಟ ಪುನಾರಚನೆ ವೇಳೆ ತಮಗೆ ಸಚಿವ ಸ್ಥಾನ ನೀಡುವಂತೆ ಕೋರಿ ಹೈಕಮಾಂಡ್ ಗೆ ಪತ್ರ ಬರೆದಿದ್ದರು. ಇದೀಗ ಹಿರಿಯ ಶಾಸಕರು ಸಚಿವ ಸ್ಥಾನದ ಬೇಡಿಕೆ ಇಟ್ಟಿದ್ದಾರೆ. ಉಪ ಚುನಾವಣೆ ಮುಗಿದ ಬಳಿಕ ದೆಹಲಿಗೆ ಹೋಗಿ ಹೈಕಮಾಂಡ್ ಗಮನಕ್ಕೆ ತರುವುದಾಗಿ ಸಿಎಂ ಭರವಸೆ ನೀಡಿದರು. ನೀವು ಹೈಕಮಾಂಡ್ ನಾಯಕರ ಭೇಟಿ ಮಾಡಿ ಮನವಿ ಸಲ್ಲಿಸಿ ಎಂದು ಇದೇ ವೇಳೆ ಸಿಎಂ ಸಿದ್ದರಾಮಯ್ಯ ಸಲಹೆ ನೀಡಿದರು.

## ಪ್ರಜ್ವಲ್ ಅಶ್ಲೀಲ ವಿಡಿಯೋ ವೈರಲ್: 39 ಮಂದಿ ವಿರುದ್ಧ ಚಾರ್ಜ್‌ಶೀಟ್

ತನಿಖೆ ವೇಳೆ ಬಹಿ ರಂಗವಾಗಿದೆ. ಈ ಸಂಬಂಧ 277 ಸಾಕ್ಷಿ ಗಳ ಹೇಳಿಕೆಯನ್ನು ಎಸ್‌ಐಟಿ ದಾಖಲಿಸಿದೆ. ತಾಂತ್ರಿಕ ವರದಿ, ಎಫ್‌ಎಸ್‌ಎಲ್

ಸಾಕ್ಷಿಗಳ ವರದಿ ಆಧರಿಸಿ ದೋಷಾರೋಪ ಪಟ್ಟಿ ಸಲ್ಲಿಕೆ ಮಾಡಲಾಗಿದೆ. ಆರೋಪಿಗಳಾದ ನವೀನ್, ಪ್ರಜ್ವಲ್ ಕಾರು ಚಾಲಕ ಎನ್.ಕಾರ್ತಿಕ್ ಸೇರಿದಂತೆ ಪ್ರಕರಣದಲ್ಲಿ 52 ಮಂದಿ ಹೆಸರು ಉಲ್ಲೇಖ ಮಾಡಲಾಗಿತ್ತು. 52 ಮಂದಿಯಲ್ಲಿ 39 ಮಂದಿ ವಿರುದ್ಧ ಆರೋಪ ಸಾಬೀತಾಗಿದೆ. ವಕೀಲ ಪೂರ್ಣಚಂದ್ರ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿತ್ತು. ಲೋಕಸಭೆ ಚುನಾವಣೆ ವೇಳೆ ಅಶ್ಲೀಲ ವಿಡಿಯೋ ವೈರಲ್ ಆಗಿತ್ತು. ಎಸ್‌ಐಟಿ ತನಿಖೆ ವೇಳೆ ಮಹತ್ವದ ವಿಚಾರಗಳು ಬೆಳಕಿಗೆ ಬಂದಿವೆ. ಪ್ರಕರಣದಲ್ಲಿ ಎರಡು ಪಕ್ಷದ ಕಾರ್ಯಕರ್ತರ ವಿರುದ್ಧ ಆರೋಪ ಕೇಳಿಬಂದಿದೆ. ವಿಡಿಯೋ ವೈರಲ್ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಹೆಸರು ಕೈಬಿಡಲಾಗಿದೆ. ತನಿಖೆ ಪೂರ್ಣಗೊಳಿಸಿ ಹಾಸನ ಕೋರ್ಟ್‌ಗೆ ಎಸ್‌ಐಟಿ ದೋಷಾರೋಪ ಪಟ್ಟಿ ಸಲ್ಲಿಸಿದೆ.

### ಸದನ ಸಮಿತಿ ರಚನೆ

ಈ ಬಗ್ಗೆ ಪರೀಕ್ಷಾ ಕೊಠಡಿಯಲ್ಲಿ ಇದ್ದ ಸಿಸಿಟಿವಿ ಪರಿಶೀಲನೆ ಆಗಿದೆ. ಆ ರೀತಿಯ ಅನುಮಾನಾಸ್ಪದ ಏನೂ ತಪ್ಪು ನಡೆದಿಲ್ಲ ಎಂದು ಕೆಪಿಎಸ್‌ಸಿ ತಿಳಿಸಿದೆ ಎಂದು ಹೇಳಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಚೈತ್ರದ ಸಂಭ್ರಮ: ಯುಗಾದಿಗೆ ಪ್ರಕೃತಿಯ ಸ್ವಾಗತ

ದಕ್ಷಿಣ ಭಾರತದಲ್ಲಿ ಆಳಿದ ಶಾತವಾಹನರು ಚೈತ್ರ ಶುದ್ಧ ಪಾಡ್ಯದಂದು ,ಶಾಲಿವಾಹನ ರಾಜ ಸಿಂಹಾಸನಾರೂಢನಾದನೆಂದೂ ಆಗಿನಿಂದ ಶಾಲಿವಾಹನ ಶಕೆ ಆರಂಭವಾಯಿತೆಂದೂ ಹೇಳಲಾಗುತ್ತದೆ.ಹಿಂದೂಗಳು ಶಾಲಿವಾಹನ ಶಕೆಯ ಸಂವತ್ಸರವನ್ನಾಧರಿಸಿ ಆಯಾ ಸಂವತ್ಸರವನ್ನು ಚೈತ್ರಮಾಸದ ಪ್ರತಿಪದೆಯಿಂದ ಆರಂಭಿಸುವರು.

**ಯುಗಾದಿಯು ಚಂದ್ರಮಾನಸ ಸಂವತ್ಸರದ ಆರಂಭದ ದಿನ**

ವರಾಹಮಿಹಿರಾಚಾರ್ಯನು ವರ್ಷಾರಂಭವನ್ನು ಚೈತ್ರಮಾಸವೆಂದು ಹೇಳಿರುವನು.ಪಂಚಾಂಗ ಮತ್ತು ಶಾಸ್ತ್ರ ಪ್ರಕಾರ ಶುಭದಿನ ಅತ್ಯಂತ ಶುಭಮುಹೂರ್ತದ ಮೂರುವರೆ ದಿನಗಳೆಂದರೆ ಯುಗಾದಿ, ವಿಜಯದಶಮಿ, ಬಲಿಪಾಡ್ಯಮಿ ಮತ್ತು ಅಕ್ಷಯತದಿಗೆ.ಅದರಲ್ಲಿ ಯುಗಾದಿ ಅತೀ ಶ್ರೇಷ್ಠ ಮುಹೂರ್ತವೆಂದು ಭಾರತೀಯರು ನಂಬುತ್ತಾರೆ. ವರ್ಷದ ಶುಭದಿನವಾದ ಯುಗಾದಿ ಮಂಗಳ ಕಾರ್ಯವನ್ನು ಮಾಡಲು ಯೋಗ್ಯ ದಿನವೆಂದು ಹೇಳುವರು.

**ಚೈತ್ರ ಮಾಸಾರಂಭ ಚೈತ್ರ ಶುದ್ಧ ಪಾಡ್ಯ**

ಯುಗಾದಿಯನ್ನು ಚಂದ್ರಮಾನ ,ಸೌರಮಾನ ಹೀಗೆ ಎರಡು ಬಗೆಯಲ್ಲಿ ಆಚರಿಸುವ ಪದ್ಧತಿ ನಮ್ಮಲ್ಲಿದೆ. ಚಂದ್ರನ ಚಲನೆಯನ್ನು ಗುರುತಿಸಿ ಮಾಎಉವ ಪದ್ಧತಿಗೆ ಚಾಂದ್ರಮಾನ ಯುಗಾದಿಯೆಂದೂ ,ಸೂರ್ಯ ಮೇಷ ರಾಶಿಗೆ ಬಂದಾಗ ಸೌರಮಾನ ಯುಗಾದಿಯೆಂದು ಆಚರಿಸುವರು.ಕರ್ನಾಟಕ, ಆಂದ್ರಪ್ರದೇಶ,ಮಹಾರಾಷ್ಟ್ರ,ಗುಜರಾತ್ ಗಳಲ್ಲಿ ಚಾಂದ್ರಮಾನ ಯುಗಾದಿ ಆಚರಿಸಿದರೆ ತಮಿಳನಾಡು,ಕೇರಳ,ಉತ್ತರಭಾರತದ ಕೆಲವು ಸ್ಥಳಗಳಲ್ಲಿ ಸೌರಮಾನ ಯುಗಾದಿ ಆಚರಿಸುತ್ತಾರೆ.ಉತ್ತರಭಾರತದಲ್ಲಿ ಕಾರ್ತಿಕ ಶುದ್ಧ ಪಾಡ್ಯವನ್ನು ಯುಗಾದಿಯೆನ್ನುವರು.

**ಮೈದುಂಬುವ ನಿಸರ್ಗ**

ಯುಗಾದಿ ಬಂದಿತೆಂದರೆ ಎಲ್ಲೆಡೆಯಲ್ಲಿ ಸಂತೋಷ, ಸಂಭ್ರಮ,ತುಂಬಿತುಳುಕುವದು.ಚೈತ್ರಮಾಸದಿಂದ ವಸಂತ ಋತು ಆರಂಭವಾಗುವದು.ವನಗಳೆಲ್ಲ ಹೂವುಗಳು ಅರಳಿ ಯುಗಾದಿಯ ಹರ್ಷವನ್ನು ಬೀರುವವು.ಎಲ್ಲಿ ನೋಡಿದರೂ ಮರಗಿಡಬಳ್ಳಿಗಳು ಹಸಿರಾಗಿ ನಳನಳಿಸುತ್ತಿರುವದು ಬೇಂದ್ರೆಯವರ ಯುಗಾದಿ ಕವನದಲ್ಲಿ ಹೊಂಗೆ ಹೂವ ತೊಂಗಲಲ್ಲಿ

**ಭೃಂಗದ ಸಂಗೀತ ಕೇಳಿ**

ಮತ್ತೆ ಕೇಳಿ ಬರುತಿದೆ.ಎಂದು ಪ್ರಾರಭವಾಗುವ ಈ ಕವನದಲ್ಲಿ ಎಲ್ಲ ಜೀವ ಸೆಲೆಯೊಡನೆ ಆಗಮಿಸಿದ ವಸಂತದಲ್ಲಿ ಬಂದ ಯುಗಾದಿ ಸಂಭ್ರಮ ಸಂವೇದನೆಯನ್ನು ಸೂಚಿಸುವವು.

**ಆಚರಣೆ**

ಯುಗಾದಿ ದಿನ ಮುಂಜಾನೆ ಬೇವು ಮಿಶ್ರಿತ ನೀರಿನಿಂದ ಸ್ನಾನ ಮಾಡಿ ,ಹೊಸಬಟ್ಟೆ ಧರಿಸಿ ,ತಮ್ಮ ತಮ್ಮ ದೇವರನ್ನು ಪೂಜಿಸಿ ಬೇವುಬೆಲ್ಲವನ್ನು ಸೇವನೆ ಮಾಡುತ್ತಾರೆ. ಬೇವು ಬೆಲ್ಲ ಸುಖ- ದುಃಖ,ರಾತ್ರಿ- ಹಗಲು ಇವುಗಳ ಸಂಕೇತವಾಗಿವೆ.ಮಾನವನ ಬದುಕಿನಲ್ಲಿ ಸುಖ-ದುಃಖಗಳು ಅವಿಭಾಜ್ಯ ಅಂಶಗಳಾಗಿವೆ.ಇವೆಲ್ಲವು ಗಳೊಂದಿಗೆ ಸಮತೋಲನ ಕಾಯ್ದುಕೊಂಡೇ ಮನುಷ್ಯ ಬದುಕಬೇಕು. ಜೀವನವು ಕಷ್ಟ-ಸುಖ,ನೋವು-ನಲಿವುಗಳ ಸಂಮಿಶ್ರಣವಾಗಿದೆ. ಇವೆರಡನ್ನೂ ಸಮದೃಷ್ಟಿ ಯಿಂದ ಸವಿಯುವದನ್ನು ಕಲಿಯಲೆಂದೇ ಯುಗಾದಿಂ ಮಂದು ಬೇವು-ಬೆಲ್ಲವನ್ನು ತಿನ್ನಿಸುವರು.ನೋವು-ನಲಿವಿನಲ್ಲಿ ನಾವು ಪ್ರಪಂಚದಲ್ಲಿದ್ದರೂ ಬೆಲ್ಲದ ಸಿಹಿ ಸಮಾನವಾದ ಶಾಂತಿ, ಅತೀಂದ್ರಿಯ ಸುಖ,ಆತ್ಮೀಯತೆ,ಸ್ನೇಹ,ಮಧುರತೆಯನ್ನು ಅನುಭವಿಸುವದು ಎಂಬ ನಿಜಾರ್ಥ ಇದರಲ್ಲಡಗಿದೆ.

**ಆರೋಗ್ಯದ ಮಹತ್ವ**

ಶತಾಯುಃ ವಜ್ರದೇಹಾಯ
ಸರ್ವ ಸಂಪತ್ಕರಾಯಚ।
ಸರ್ವಾರಿಷ್ಟ ವಿನಾಶಾಯ
ನಿಂಬ ಕಂದಳ ಭಕ್ಷಣಮ್॥

ಅರ್ಥ- ನೂರುವರ್ಷಗಳ ಆಯಸ್ಸು,ಸದೃಢ,ಆರೋಗ್ಯ,ಸಕಲ ಸಂಪತ್ತುಗಳ ಪ್ರಾಪ್ತಿಗಾಗಿಯೂ ,ಸಕಲ ಅರಿಷ್ಟ ನಿವಾರಣೆಗಾಗಿಯೂ ಬೇವು,ಬೆಲ್ಲ ಸೇವನೆ ಮಾಡುತ್ತೇವೆ.

**ವೈಜ್ಞಾನಿಕ ಮಹತ್ವ**

ಬೇವು ಉತ್ತಮ ನಿರೋಧಕ ಶಕ್ತಿ ಹೊಂದಿದ್ದು ಔಷಧೀಯ ಸಸ್ಯವಾಗಿದೆ.ತ್ವಚೆಯ ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.ಬೆಲ್ಲ ಉತ್ತಮ ಪ್ರೋಟಿನ್ ಖನಿಜಾಂಶವನ್ನು ಹೊಂದಿದ್ದುಅಗತ್ಯ ಪೋಷಕಾಂಶ ಒದಗಿಸುತ್ತದೆ.

ಯುಗಾದಿಯಂದು ಇಷ್ಟ ದೇವತೆಯ ಪೂಜೆ ಮಾಡುವರಲ್ಲದೇ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಕೆಲವು ದೇವಸ್ಥಾನಗಳಲ್ಲಿ ಪಂಚಾಂಗ ಶ್ರವಣ ಏರ್ಪಡಿಸುತ್ತಾರೆ.ಪಂಚಾಂಗ ಕೇಳುವದರಿಂದ ಮಾನವನ ಆಯಸ್ಸು ವೃದ್ಧಿಯಾಗುವದು.ರೋಗ,ಪಾಪ ನಾಶವಾಗಿ ಗಂಗಾಸ್ನಾನದ ಫಲ ದೊರೆಯುವದೆಂಬ ಪ್ರತೀತಿಯಿದೆ.

**ವಿವಿಧ ರಾಜ್ಯಗಳಲ್ಲಿ ಯುಗಾದಿ ಪರ್ವ**

ಗುಜರಾತ್ ,ಮಹಾರಾಷ್ಟ್ರದಲ್ಲಿ ಯುಗಾದಿಯ ದಿನ ಯುಗಾದಿಯನ್ನು ಗುಡಿಪಾಡ್ಯವೆಂದು ಕರೆಯುವರು.ಗುಡಿ ಎಂದರೆ ಧ್ವಜ.ಒಂದು ಕೋಲಿನ ತುದಿಗೆ ರೇಶ್ಮೆ ಬಟ್ಟೆ ಸೇರಿಸಿ ಅದರ ಮೇಲೆ ಬೆಳ್ಳಿ ಅಥವಾ ಹಿತ್ತಾಳೆಯ ಸಣ್ಣ ಬಿಂದಿಗೆ ಕಟ್ಟಿ ಬೇವು ಮತ್ತು ಮಾವಿನ ಎಲೆಗಳಿಂದ ಅಲಂಕರಿಸುವರು. ಮಹಾಭಾರತದಲ್ಲಿ ಇದರ ಪ್ರಸ್ತಾಪವಿದೆ.

**ವರ್ಷದ ತೊಡಕು ಬಿದಿಗೆ ಚಂದ್ರನ ದರ್ಶನ**

ಅಂದಿನ ದಿನ ವರ್ಷದ ತೊಡಕು ಎಂದು ಆಚರಿಸಲಾಗುತ್ತದೆ.ಅಂದರೆ ಸತ್ಕಾರ್ಯಗಳಿಗೋಸ್ಕರ ನಮ್ಮನ್ನು ತೊಡಗಿಸಿಕೊಳ್ಳುವ ದಿನವಾಗಿದೆ.ವರ್ಷವಿಡೀ ಸುಖನೀಡುವಂತೆ ಆರೋಗ್ಯ ಭಾಗ್ಯ ನೀಡುವಂತೆ ದೇವರಲ್ಲಿ ಕೇಳಿಕೊಳ್ಳುವ ದಿನ.ಅಂದಿನ ದಿನ ಬಿದಿಗೆ ಚಂದ್ರನ ದರ್ಶನ ಮಾಡುವದು ಬಹಳ ಒಳ್ಳೆಯದು ಎಂಬ ಪ್ರತೀತಿಯಿದೆ.

**ಅಜ್ಞಾನದಿಂದ ಸುಜ್ಞಾನದೆಡೆಗೆ 'ತಮಸೋಮಾಜ್ಯೋತಿರ್ಗಮಯಾ**

ವರ್ತಮಾನ ಸಮಯ ಕಲಿಯುಗದ ಕೊನೆಯ ಹಾಗೂ ಸತ್ಯಯುಗದ ಸಂಗಮ.ಕಲಿಯುಗದ ಅಂಧಕಾರದ ರಾತ್ರಿಯನ್ನು ಸತ್ಯಯುಗದ ಸುಜ್ಞಾನದ ಬೆಳಕನ್ನಾಗಿ ಪರಿವರ್ತಿಸುವ ಉದಯಕಾಲವೇ ಯುಗಾದಿ.ಈ ಯುಗಾದಿಯ ಸಮಯದಲ್ಲಿ ನಿರಾಕಾರ ಶಿವನು ಪ್ರಜಾಪಿತ ಬ್ರಹ್ಮನ ಶರೀರದಲ್ಲಿ ಪ್ರವೇಶ ಮಾಡಿ ,ಹೊಸ ಸೃಷ್ಟಿಯ ಸ್ಥಾಪನೆ ಮಾಡುವನು.ಕಲಿಯುಗದ ತಮೋಪ್ರಧಾನ ಮನುಷ್ಯಾತ್ಮನಿಗೆ ಸತ್ಯ ಜ್ಞಾನವನ್ನು ನೀಡಿ ಅವರಿಗೆ ಸಹಜ ರಾಜಯೋಗನ್ನು ಕಲಿಸಿ ಅವರನ್ನು ಸ್ವರ್ಗ ಅಥವಾ ರಾಮರಾಜ್ಯಕ್ಕಾಗಿ ಬೇಕಾಗುವ ಶ್ರೀ ಲಕ್ಷ್ಮೀನಾರಾಯಣ,ಶ್ರೀರಾಮ ರಾಮಾಯಣದಲ್ಲಿ ಇಂದ್ರನು ವೈಜಯಂತಿ ಮಾಲೆಯನ್ನು ಹಾಗೂ ಚಿನ್ನದ ಕಳಶವನ್ನು ವಸುವಿಗೆ ನೀಡಿದ ದಿನವೆಂದು ಹೇಳಲಾಗುತ್ತದೆ. ಈ ರೀತಿಯಾಗಿ ಯುಗಾದಿಯು ನಾಡಿಗೆ ಮಾತ್ರವಲ್ಲದೇ ಇಡೀ ವಿಶ್ವಕ್ಕೆ ಉಜ್ವಲತೆಯನ್ನು,ಜನತೆಗೆ ಸುಖಶಾಂತಿಯನ್ನು ನೀಡುವ ವಜ್ರ ಸಮಾನವಾದ ಸಮಯವಾಗಿದೆ. ಹೀಗೆ ಯುಗಾದಿಯು ಭಕ್ತರಿಗಾಗಿ,ವಿಶಾಲಹೃದಯದ ಶಿವಶರಣೆಯರಿಗಾಗಿ,ಮುಕ್ತಿ ಬಯಸುವ ಆರಾಧಕರಿಗಾಗಿ ,ಶಿವನು ಭಕ್ತರಿಗೆ ಓಗೊಟ್ಟು ಅವರ ಭಕ್ತಿಯ ಫಲವನ್ನು ನೀಡಲು ಧರೆಗೆ ಬಂದಿದ್ದಾನೆ ಎಂಬ ಪರಮ ಸಂದೇಶವನ್ನು ನೀಡುವ ಮಹಾನ್ ಪರ್ವವಾಗಿದೆ. ಯುಗಾದಿ ಹಬ್ಬವನ್ನು ನಾವೂ ಆಚರಿಸಿ ಸಂಭ್ರಮಿಸೋಣ.ಸರ್ವೇ ಜನ ಸುಖಿನೋ ಭವಂತು.

# ವಿಶ್ವಕರ್ಮ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ

## ಕೆ.ಪಿ.ನಂಜುಂಡಿ ಆಗ್ರಹ | ಪ್ರತಿ ಹೋಬಳಿ ಮಟ್ಟದಲ್ಲಿ ಸಮುದಾಯದ ಸಂಘಟನೆ

ರಾಮನಗರ: ವಿಶ್ವಕರ್ಮ ಸಮುದಾಯವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಿ ಮೀಸಲಾತಿ ಕಲ್ಪಿಸಬೇಕು ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಪಿ.ನಂಜುಂಡಿ ಸರ್ಕಾರವನ್ನು ಆಗ್ರಹಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಮೂಲವನ್ನು ಗುರುತಿಸದೆ ವಿಶ್ವ ಕರ್ಮ ಸಮುದಾಯವನ್ನು 2ಎ ಪಟ್ಟಿಗೆ ಸೇರಿಸಲಾಗಿದೆ. ವಿಶ್ವಕರ್ಮ ಸಮುದಾಯ ಬ್ರಾಹ್ಮಣರು ಎಂಬ ಭಾವನೆ ಅನೇಕರಿಗಿದೆ. ಆದರೆ ಇದು ಸರಿಯಲ್ಲ. ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಬೇಕು, ಇದು ಸೇರಿದಂತೆ ಹಲವಾರು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸರ್ಕಾರದ ಗಮನ ಸೆಳೆಯಲಾಗುವುದು ಎಂದರು.

**ಬೀದರ್‌ನಿಂದ ಬೆಂಗಳೂರಿಗೆ ಪಾದಯಾತ್ರೆ**

ತಮ್ಮ ಸಮುದಾಯದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸೆಪ್ಟೆಂಬರ್ ತಿಂಗಳಲ್ಲಿ ಬೀದರ್ ನಿಂದ ಬೆಂಗಳೂರು ವರೆಗೆ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು, ಇದೇ ವಿಚಾರದಲ್ಲಿ ತಮ್ಮ ಸಮುದಾಯವನ್ನು ಸಂಘಟಿಸಬೇಕಾಗಿದೆ, ರಾಜ್ಯದ ಪ್ರತಿ ಹೋಬಳಿ, ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ವಿಶ್ವಕರ್ಮರನ್ನು ಒಗ್ಗೂಡಿಸಿ ಸಮಾಜಕ್ಕೆ ಆಗುತ್ತಿರುವ ಅನ್ಯಾಯದ ಕುರಿತು ಅರಿವು ಮೂಡಿಸಲಾಗುವುದು ಎಂದರು. ಬೀದರ್ ನಿಂದ ಬೆಂಗಳೂರಿಗೆ 750 ಕಿಮಿ ದೂರವನ್ನು ನಡಿಗೆ ಯಲ್ಲಿ ಕ್ರಮಿಸಿಬೇಕು. ಇದಕ್ಕೆ 40 ದಿನಗಳ ಕಾಲವಧಿ ಬೇಕು ಎಂದರು.

**ಸಮುದಾಯಕ್ಕೆ ಅನ್ಯಾಯವಾಗುತ್ತಿದೆ**

2ಎ ಮೀಸಲಾತಿಯಲ್ಲಿ 102 ಜಾತಿಗಳಿದ್ದು, ಈ ಜಾತಿಗಳಿಗೆ ಶೇ. 15ರಷ್ಟು ಮೀಸಲಾತಿ ನೀಡಲಾಗಿದೆ. ಇದರಿಂದಾಗಿ ಪ್ರಬಲ ಜಾತಿಗಳನ್ನು ಎದುರಿಸಿ ವಿಶ್ವಕರ್ಮರಿಗೆ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

ಎಲ್ಲ ಜಾತಿಗಳನ್ನು ಮೀರಿ ಅಧಿಕಾರ ಪಡೆಯಲು ಆಗುತ್ತಿಲ್ಲ. ತಾಪಂ – ಜಿಪಂ ಸದಸ್ಯರಾಗಿ ಆಯ್ಕೆಯಾದ ಉದಾಹರಣೆಗಳು ಇಲ್ಲ. ಆದ್ದರಿಂದ ನಮ್ಮ ಮಕ್ಕಳ ಭವಿಷ್ಯಕ್ಕಾಗಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬುದು ಸಮಾಜದ ಒತ್ತಾಸೆಯಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವಿಶ್ವಕರ್ಮ ಸಮಾಜದ ರಾಜ್ಯ ಉಪಾಧ್ಯಕ್ಷ ಬಸವರಾಜು, ಕುಮಾರ್, ಜನಾರ್ಧನ್, ಲಿಂಗರಾಜು, ಸಿದ್ದರಾಜು, ರಾಮಾಚಾರಿ, ಲೋಕೇಶ್ , ಕುಮಾರ್ , ರಾಜೇಶ್ ಇದ್ದರು.



### ಅಪಪ್ರಚಾರಕ್ಕೆ ಕಿವಿಗೊಡಬೇಡಿ

ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದರಿಂದ ನಮ್ಮ ಆಚಾರ– ವಿಚಾರ, ಸಂಸ್ಕೃತಿ ಬದಲಾಗುವುದಿಲ್ಲ. ಈ ವಿಷಯದಲ್ಲಿ ಕೆಲವರು ಅಪಪ್ರಚಾರ ಮಾಡುತ್ತಿದ್ದು, ಅದಕ್ಕೆ ಯಾರೂ ಕಿವಿಗೊಡಬಾರದು. ಸಮಾಜ ಸಂಘಟಿತವಾಗದ ಹೊರತು ಸಂವಿಧಾನ ನೀಡಿರುವ ಸೌಲಭ್ಯಗಳನ್ನು ಪಡೆಯಲು ಸಾಧ್ಯವಿಲ್ಲ ಎಂದು ತಿಳಿಸಿದರು. ಐದು ಕುಲ ಕಸುಬು ಮಾಡುತ್ತಿರುವ ವಿಶ್ವಕರ್ಮರು ತಾವುಗಳು ಬ್ರಾಹ್ಮಣರು ಅಂತ ಭ್ರಮಾಲೋಕದಲ್ಲಿ ಬದುಕುತ್ತಿದ್ದಾರೆ. ನಾವುಗಳು ಬ್ರಾಹ್ಮಣರಲ್ಲ, ವಿಶ್ವಕರ್ಮ ಸಮಾಜದವರು. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ 41 ಉಪಪಂಗಡಗಳಲ್ಲಿ ವಿಶ್ವ ಬ್ರಾಹ್ಮಣ ಅಂತ ಸಣ್ಣ ಉಪ ಪಂಗಡ ಇದೆ. ಆ ಹೆಸರನ್ನು ಇಟ್ಟುಕೊಂಡು ವಿಶ್ವಕರ್ಮದವರನ್ನು ಬ್ರಾಹ್ಮಣರ ಸಂಖ್ಯೆಯಲ್ಲಿ ಸೇರಿಸಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಈಗ ಕೇಂದ್ರ ಸರ್ಕಾರ ಜಾತಿ ಸಮೀಕ್ಷೆ ನಡೆಸಲು ಮುಂದಾಗಿದೆ. ಜಾತಿ ಗಣತಿ ಬಂದಾಗ ಶೋಷಿತ ವರ್ಗಗಳಲ್ಲಿರುವ ಉಪಜಾತಿಗಳು ಎಚ್ಚೆತ್ತುಕೊಳ್ಳದಿದ್ದರೆ ಆ ಸಮಾಜದ ಜನಸಂಖ್ಯೆಯೇ ಕಡಿಮೆಯಾಗುತ್ತದೆ. ಹೀಗಾಗಿ, ಎಲ್ಲ ಸಮಾಜಗಳು ಜಾಗೃತರಾಗಬೇಕು. ಇಲ್ಲದಿದ್ದರೆ, ಧ್ವನಿ ಇಲ್ಲದ ಸಮಾಜಗಳಿಗೆ ಅನ್ಯಾಯವಾಗುತ್ತದೆ. ರಾಜಕೀಯ ಪ್ರಜ್ಞೆ ಇರುವ ಸಮಾಜಗಳು ಮಾತ್ರ ಪ್ರಬಲವಾಗುತ್ತವೆ ಎಂದು ಎಚ್ಚರಿಸಿದರು.

### ರಾಜಕೀಯವಾಗಿಯೂ ಪ್ರಬಲರಾಗಲಿಲ್ಲ

ವಿಶ್ವಕರ್ಮ ಸಮಾಜಕ್ಕೆ ರಾಜಕೀಯ ಮತ್ತು ಸಾಮಾಜಿಕವಾಗಿ ಯಾರೂ ಸಹಾಯ ಮಾಡುತ್ತಿಲ್ಲ. ರಾಜ್ಯ ಜಾತಿಗಣತಿ ಸಂದರ್ಭದಲ್ಲಿ 30–35 ಲಕ್ಷ ಇದ್ದಂತಹ ಜನಸಂಖ್ಯೆ ಕೇವಲ 8 ಲಕ್ಷಕ್ಕಿಂತಲೂ ಕಡಿಮೆ ಇರುವುದಾಗಿ ನಮೂದಾಗಿದೆ. ಯಾವ ಸಮಾಜ ರಾಜಕೀಯವಾಗಿ ಪ್ರಬಲವಾಗಿ ಇರುವುದಿಲ್ಲವೊ ಆ ಸಮಾಜದ ಜನಸಂಖ್ಯೆಯೂ ಕಡಿಮೆಯಾಗುತ್ತದೆ. ಆದ್ದರಿಂದ ಶೋಷಿತ ಸಮಾಜಗಳು ಹೋರಾಟದ ಮೂಲಕ ಅಧಿಕಾರ ಪಡೆದು, ಕುಲಕಸುಬು ಉಳಿಸಿಕೊಳ್ಳಬೇಕಿದೆ ಎಂದು ಹೇಳಿದರು.

### ಜಾತಿ ಜನಗಣೆತಿ ವೇಳೆಯಲ್ಲಿ ವಿಶ್ವಕರ್ಮ ಎಂದೇ ಬರೆಯಲು ಸಲಹೆ

ಜಾತಿ ಜನಗಣತಿ ಸಂದರ್ಭದಲ್ಲಿ ವಿಶ್ವಕರ್ಮ ಸಮಾಜ ಬಾಂಧವರು ಜಾತಿ ಕಾಲಂನಲ್ಲಿ ಯಾವುದೇ ಉಪಜಾತಿಯನ್ನು ನಮೂದಿಸದೇ ಕೇವಲ ವಿಶ್ವಕರ್ಮ ಎಂದು ನಮೂದಿಸಬೇಕಿದೆ. ಸಮಾಜದಲ್ಲಿ ವಿಶ್ವ ಬ್ರಾಹ್ಮಣ ಎಂಬುದು ವಿಶ್ವಕರ್ಮ ಜಾತಿಯ ಉಪಜಾತಿಯಾಗಿದೆ. ಇದಕ್ಕೂ ಬ್ರಾಹ್ಮಣ ಜಾತಿಗೂ ಸಂಬಂಧವಿಲ್ಲ. ವಿಶ್ವಕರ್ಮದ ಅಡಿಯಲ್ಲಿ ವಿಶ್ವ ಬ್ರಾಹ್ಮಣ, ಕಮ್ಮಾರ, ಬಡಿಗೇರ, ಹಿಂದೂ ವಿಶ್ವಕರ್ಮ ಎಂಬ ಹಲವಾರು ಉಪಜಾತಿಗಳಿವೆ. ರಾಜ್ಯದಲ್ಲಿ ಪ್ರಮುಖ ಐದು ಕಸುಬುಗಳನ್ನು ಮಾಡುವವರು ವಿಶ್ವಕರ್ಮ ಸಮಾಜದವರೇ ಆಗಿದ್ದಾರೆ. ಆದರೆ, ಜಾತಿಗಣತಿ ಕಾಲಂನಲ್ಲಿ ಉಪಜಾತಿ ಬದಲು, ವಿಶ್ವಕರ್ಮ ಸಮಾಜ ಎಂದೇ ನಮೂದಿಸಬೇಕು ಎಂದು ಹೇಳಿದರು.

ಆಯಾಯ ಸಮಾಜಗಳನ್ನು ವೃತ್ತಿ ಮೂಲಕ ಗುರುತಿಸಿ ಬಲಿಷ್ಠಗೊಳಿಸಿ ದೇಶದ ಸಂಸ್ಕೃತಿಗೆ ಶಕ್ತಿ ತುಂಬುವ ಕೆಲಸವನ್ನು ಸರ್ಕಾರಗಳು ಮಾಡುತ್ತಿಲ್ಲ. ಹೀಗಾಗಿ ರಾಜಕೀಯ ಪ್ರಜ್ಞೆ ಇಲ್ಲದ ಸಮಾಜಗಳು ದೇಶಕ್ಕೆ ಏನೇ ಕೊಡುಗೆ ನೀಡಿದ್ದರು ಸಹ ಅವುಗಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತವೆ. ಕಾಯಕ ಸಮಾಜಗಳು ಒಗ್ಗಟ್ಟಾಗಿ ವಾಸ್ತವತೆ ಅರಿಯದಿದ್ದರೆ ಬೀದಿಯಲ್ಲಿ ನಿಲ್ಲಬೇಕಾಗುತ್ತದೆ ಎಂದು ಕೆ.ಪಿ.ನಂಜುಂಡಿ ಎಚ್ಚರಿಸಿದರು.

### ಚಾಮರಾಜನಗರದಲ್ಲಿ ವರುಣಾರ್ಭಟ

# ರಸ್ತೆಗಳ ತುಂಬೆಲ್ಲಾ ಆಲಿಕಲ್ಲು: ಆತಂಕದಲ್ಲಿ ರೈತರು

ಚಾಮರಾಜನಗರ, ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಮಂಗಳವಾರ ಮಧ್ಯಾಹ್ನ ಒಂದು ತಾಸಿಗೂ ಅಧಿಕ ಕಾಲ ಭಾರಿ ಆಲಿಕಲ್ಲು ಮಳೆ ಸುರಿದಿದ್ದು, ರಸ್ತೆ ತುಂಬಾ ಆಲಿಕಲ್ಲು ಬಿದ್ದಿರುವುದು ಕಂಡುಬಂದಿದೆ.


ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ ತಾಲೂಕಿನ ಉಡಿಗಾಲ, ನಂಜೇದೇವನಪುರ, ಮರಿಯಾಲ, ಉತ್ತುವಳ್ಳಿ ಭಾಗದಲ್ಲಿ ಒಂದು ತಾಸಿಗೂ ಅಧಿಕ ಕಾಲ ಗುಡುಗು–ಸಿಡಿಲು ಗಾಳಿ ಸಹಿತ ಉಂಟಾದ ಜೋರು ಮಳೆಯ ಅವಾಂತರದಿಂದ ರೈತರು ಫಸಲುಗಳನ್ನು ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ.

ಆಲಿಕಲ್ಲು ಮಳೆಯಿಂದಾಗಿ ವಿವಿಧೆಡೆ ಜಮೀನಿನ ಆವರಣವೆಲ್ಲಾ ಬಿಳಿ ಹೊದಿಕೆ ಹೊದ್ದಂತೆ ಭಾಸವಾಗುತ್ತಿದೆ. ಮರಿಯಾಲದಲ್ಲಿ ಆಲಿಕಲ್ಲಿನ ಮಳೆ ಆಲಿಕಲ್ಲಿನ ನದಿಯಂತೆ ಕಂಡುಬಂದಿದೆ. ಮರಿಯಾಲ, ಕೊತ್ತಲವಾಡಿ, ನಂಜೇದೇವನಪುರ, ಕಾಳನಹುಂಡಿ ಭಾಗದಲ್ಲಿ ಭರ್ಜರಿ ಮಳೆಯಾಗಿದ್ದು, ಟೊಮೆಟೊ, ಕಲ್ಲಂಗಡಿ, ಮಂಗಳೂರು ಸೌತೆಕಾಯಿ, ಬಾಳೆ, ಪಪ್ಪಾಯ ಬೆಳೆಗಾರರಿಗೆ ಫಸಲು ಕೈ ಕೊಡುವ ಭೀತಿ ಎದುರಾಗಿದೆ. ನರ್ಸರಿಗಳು ಕೂಡ ಆಲಿಕಲ್ಲಿನ ಮಳೆಗೆ ತತ್ತರಿಸಿದೆ.



### ವಾಹನ ಸವಾರರ ಪರದಾಟ

ಒಂದು ತಾಸು ಸುರಿದ ಆಲಿಕಲ್ಲು ಮಳೆಯಿಂದಾಗಿ ದ್ವಿಚಕ್ರ ಸವಾರರರು ಬೈಕ್ ಚಲಾಯಿಸಲಾಗದೇ ಪರದಾಡಿದ್ದಾರೆ. ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿ ಹಲವೆಡೆ ದಿಢೀರ್ ಮಳೆಯಿಂದಾಗಿ ಜನ ಜೀವನ ಅಸ್ತವ್ಯಸ್ತಗೊಂಡಿತ್ತು. ವೀರನಪುರ ಗ್ರಾಮದಲ್ಲಿ ಇಂದು ಬಿದ್ದ ಆಲಿಕಲ್ಲು ಮಳೆಯಿಂದ ಗ್ರಾಮದಲ್ಲಿನ ಮನೆಗಳ ಮೇಲಿನ ವಸ್ತುಗಳು ಹಾಳಾಗಿವೆ. ಸೋಲಾರ್ ವಾಟರ್ ಹೀಟರ್ ಸೇರಿ ವಿವಿಧ ವಸ್ತುಗಳು ಆಲಿಕಲ್ಲಿನ ಆರ್ಭಟಕ್ಕೆ ಪೀಸ್ ಗಳಾಗಿವೆ.



### ಕೃಷ್ಣ ವಂದನ

**ಸ್ನೇಹಾ ಆನಂದ್**



#### ಹೇ ಕೃಷ್ಣಾ!

ಕೃಷ್ಣಾ ನಿನ್ನ ಬೇಡುವೆ ಅನುದಿನದಿ,
ಭಕ್ತಿಯ ಕೊಟ್ಟು ಸಲಹೋ ಜತನದಿ!

ಕೆಟ್ಟ ಯೋಚನೆಗಳ ಕಟ್ಟಿ ನೀ ಹಾಕು,
ಕೆಟ್ಟತನದ ಮನಸ ಮಟ್ಟ ಹಾಕು!
ಖೊಟ್ಟಿತನದ ಮಾತ ಸುಟ್ಟು ನೀ ಹಾಕು,
ತಟ್ಟುವ ಮನಸಿನ ಚಂಚಲ ಚಚ್ಚಿ ಹಾಕು!

ಮುಚ್ಚಿಟ್ಟ ಭಾವಕೆ ನೀ ಸುಂದರ ಬಣ್ಣ ಹಚ್ಚು,
ಭಕ್ತಿ ಭಾವವವೆಂಬ ಸೂತ್ರದೊಳು ಕಟ್ಟು!
ಮನವೆಂಬ ಮಂದಿರವ ಶುದ್ಧ ನೀ ಗೊಳಿಸು,
ಅದಿರಲಿ ಬಂದು ಶಾಶ್ವತ ನೆಲೆಸು!

ಕನ್ನಡಿ ಬಿಂಬದೊಳು ನೀನೆ ಕಾಣೋ,
ಕನವರಿಕೆಯೊಳು ಬಂದು ನೀ ಸೇರೋ!
ಸವಿನಿದ್ರೆಯೊಳು ಬಂದು ಸಂತಸ ನೀ ಬೀರೋ
ಹೇಮ ಗಿರೀಶನೇ ಎನ್ನ ಭಕ್ತಿಯ ತೇರು!

## ತಾಲ್ಲೂಕಿನಲ್ಲಿ ಟಿಪ್ಪರ್‌ಗಳ ಅಬ್ಬರ




ಗುಂಡ್ಲುಪೇಟೆ: ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆ, ಅಧಿಕ ಟಿಪ್ಪರ್ ಗಳಿಂದ ಜನಸಾಮಾನ್ಯರ ಜೀವಕ್ಕೆ ಕುತ್ತು ಬರುತ್ತಿದೆ ಇದಕ್ಕೆ ಶಾಸಕರು ಪೊಲೀಸರು ಗಣಿ ಇಲಾಖೆ, ಅರ್ ಟಿಓ ಇಲಾಖೆಗಳು ಕುಮ್ಮಕ್ಕು ನೀಡುತ್ತಿವೆ ಎಂದು ಆರೋಪಿಸಿ ಎಲ್ಲಾರ ವಿರುದ್ಧ ಧಿಕ್ಕಾರ ಕೂಗಿ ಬಿಜೆಪಿ ಯುವ ಮೋರ್ಚಾದಿಂದ ಪ್ರತಿಭಟನೆ ನಡೆಸಲಾಯಿತು.

ಶಾಲಾ ವಾಹನಕ್ಕೆ ಟಿಪ್ಪರ್ ಡಿಕ್ಕಿ ಹಾಗೂ ತಾಲ್ಲೂಕಿನಲ್ಲಿ ಟಿಪ್ಪರ್ ಗಳ ಅಬ್ಬರ ಹೆಚ್ಚಿದ್ದು ಇದಕ್ಕೆ ಕಡಿವಾಣ ಹಾಕದೆ ಸಹಕಾರ ನೀಡುತಿದ್ದಾರೆ ಎಂದು ಸಂಬಂದಪಟ್ಟ ಇಲಾಖೆಗಳ ವಿರುದ್ಧ ಹಾಗೂ ಶಾಸಕರ ವಿರುದ್ಧ ಪ್ರತಿಭಟನೆ ನಡೆಸಿದರು.

ಎಲ್ ಸುರೇಶ್ ಮಾತನಾಡಿ ಸರ್ಕಾರ ಮಹಿಳೆಯರಿಗೆ ಬಾಗ್ಯ ಕೊಡುತ್ತಾರೆ ಅದರೆ ಸ್ಥಳೀಯ ಶಾಸಕರು ಟಿಪ್ಪರ್ ಗಣಿಗಾರಿಕೆಗೆ ಪ್ರೋತ್ಸಾಹ ನೀಡಿ ಜನಸಾಮಾನ್ಯರನ್ನು ಅಪಘಾತದಲ್ಲಿ ಕೊಲ್ಲಿಸಿ ವಿಧವೆ ಭಾಗ್ಯ ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಹಣದ ಅಸೆಗೆ ಗಣಿಗಾರಿಕೆ ಟಿಪ್ಪರ್ ಗಲಿಗೆ ಪ್ರೋತ್ಸಾಹ ನೀಡುತ್ತಿದ್ದು ಇದರಿಂದಲೇ ಅಪಘಾತ ಹೆಚ್ಚಿದೆ ನಿಮ್ಮ ತಂದೆ ಸಾಕಷ್ಟು ಹಣ ಮಾಡಿದ್ದಾರೆ ನೀವು ಅವರಿಗಿ.ತ ಹೆಚ್ಚು ಹಣ ಮಾಡಲು ಹೊರಟಿದ್ದೀರಾ ಎಂದು ಪ್ರಶ್ನಿಸಿದರು ಇನ್ನಾದರು ಜನಸಾಮಾನ್ಯರಿಗೆ ಅನುಕೂಲವಾಗುವಂತೆ ನಡೆದುಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಮಂಡಲ ಹಾಗೂ ಯುವ ಮೋರ್ಚಾ ಪದಾದಿಕಾರಿಗಳಾದ ಎಲ್ ಸುರೇಶ್, ಪ್ರಣಯ್, ಮಂಜು, ಶಿವಕುಮಾರ್, ಶಶಿಕುಮಾರ್, ಸುಬ್ಬು, ಸುನೀಲ್, ಜಗ, ನಾಗೇಂದ್ರ, ಸಾಗರ್, ಮಹದೇವಸ್ವಾಮಿ, ಮಹೇಂದ್ರ ಮತ್ತಿತರರಿದ್ದರು.

## ನೀರು ಸರಬರಾಜಿನಲ್ಲಿ ವ್ಯತ್ಯಯ: ಪಾಲಿಕೆ ವಿರುದ್ಧ ಪ್ರತಿಭಟನೆ



ಮೈಸೂರು: ಮಹಾನಗರಪಾಲಿಕೆ ವಾರ್ಡ್ ನಂ. 28ರ ಗಾಂಧಿನಗರಕ್ಕೆ ಕಳೆದ ಹಲವು ದಿನಗಳಿಂದ ನೀರು ಸರಬರಾಜು ವ್ಯತ್ಯಯ ಮಾಡುತ್ತಿರುವುದನ್ನು ಖಂಡಿಸಿ ಸ್ಥಳೀಯ ನಿವಾಸಿಗಳು ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದರು.

ಗಾಂಧಿನಗರ ನಾಗರಿಕರ ಹಿತರಕ್ಷಣ ಸಮಿತಿ ವತಿಯಿಂದ ಎನ್ ಆರ್ ಮೊಹಲ್ಲಾದ ಶಿವಾಜಿ ಉದ್ಯಾನವನದಲ್ಲಿರುವ ನೀರು ಸರಬರಾಜು ವಿತರಣಾ ಕೇಂದ್ರದ ಮುಂದೆ ನಾನಾ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ಯಪಡಿಸಿದರು. ಈ ವೇಳೆ ಗಾಂಧಿನಗರ ನಾಗರಿಕ ಹಿತ ರಕ್ಷಣಾ ಸಮಿತಿಯ ಅಧ್ಯಕ್ಷ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ನ ಮಾಜಿ ಸದಸ್ಯ ಶರತ್ ಸತೀಶ್ ಮಾತನಾಡಿ, ಮಹಾನಗರ ಪಾಲಿಕೆಯ ವಾಣಿವಿಲಾಸ ನೀರು ಸರಬರಾಜು ಮಂಡಳಿಯ ಎನ್.ಆರ್.ಕ್ಷೇತ್ರಕ್ಕೆ ಒಳಪಡುವ ಕಾರ್ಯಪಾಲಕ ಅಭಿಯಂತರಾದ ಶಿಲ್ಪಾ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರ ನಾಗರಾಜೇಗೌಡ ಗಾಂಧಿನಗರದ ಕೆಲವು ಭಾಗಗಳಿಗೆ ನೀರಿನ ಸಮಸ್ಯೆ ಆಗಿ ಹಲವಾರು ದಿನ ಕಳೆದರೂ ಬಗೆಹರಿಸದೆ ದಿವ್ಯ ನಿರ್ಲಕ್ಷಯನ್ನು ತೋರಿದ್ದಾರೆಂದರು ಕಿಡಿಕಾರಿದರು. ಕುಡಿಯುವ ನೀರಿನ ಸಮಸ್ಯೆ ಬಗೆ ಸರಿಯಾದ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟವನ್ನು ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಯುವ ಮುಖಂಡರಾ ವಿಜಯ್, ರಾಜೇಶ್, ಭಾರಿ, ಕರ್ಣ, ಚೇತನ್, ಪೈಲ್ವಾನ್ ರೂಪೇಶ್, ರಾಕೇಶ್, ರಾಕಿ, ಅನಿಲ್, ವಿನೋದ್ ಸುನಿಲ್ ಬೈರಾ ಹೇಮಂತ್, ಕುಮಾರ್, ಹರೀಶ್, ರಾಜು, ಕ್ಯಾಪ್ಟನ್ ಶಿವಣ್ಣ ಮುಂತಾದವರು ಭಾಗವಹಿಸಿದ್ದರು.

## ಮಾ.23ಕ್ಕೆ ಶೇಷಾದ್ರಿಪುರಂ ಕಾಲೇಜು ಕಟ್ಟಡ ಉದ್ಘಾಟನೆ

ಮೈಸೂರು: ಕಡಕೊಳ ಕೈಗಾರಿಕಾ ಪ್ರದೇಶದಲ್ಲಿರುವ ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ನ ಶೇಷಾದ್ರಿಪುರಂ ತಾಂತ್ರಿಕ ಶಿಕ್ಷಣ ಸಂಸ್ಥೆಯ ನೂತನ ಕಟ್ಟಡ ಉದ್ಘಾಟನೆ ಮಾ. 23 ರಂದು ಬೆಳಗ್ಗೆ 10ಕ್ಕೆ ನಡೆಯಲಿದೆ ಎಂದು ಜಂಟಿ ಕಾರ್ಯದರ್ಶಿ ಶೇಷ ನಾರಾಯಣ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸುವರು, ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಸಾನ್ನಿಧ್ಯ ವಹಿಸುವರು, ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಕುಲಪತಿ ಡಾ.ಎಸ್. ವಿದ್ಯಾಶಂಕರ್ ಅತಿಥಿಗಳಾಗಿರುವರು, ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ ಅಧ್ಯಕ್ಷತೆ ವಹಿಸುವರು. ಶಿಕ್ಷಣ ಸಂಸ್ಥೆ ಗೌರವಯುತ ಪರಂಪರೆ ಮುಂದುವರಿಸಿಕೊಂಡು ಗುಣಮಟ್ಟದ ಎಂಜಿನಿಯರಿಂಗ್ ಶಿಕ್ಷಣ ನೀಡುತ್ತಿದೆ. ಇಲ್ಲಿ ಉತ್ತಮ ಮೂಲ ಸೌಕರ್ಯ, ಪ್ರಯೋಗಾಲಯ, ಅನುಭವಿ ಅಧ್ಯಾಪಕರು, ಪೂರಕವಾದ ಅಧ್ಯಯನ ವಾತಾರವರಣವಿದೆ ಎಂದರು. ಟ್ರಸ್ಟಿ ಅನಂತಾಂ, ಪ್ರೊ. ರಾಜಾರಾವ್, ಡಾ. ಸುರೇಶ್ ಮನೋಜ್, ಪ್ರಾಚಾರ್ಯ ಡಾ. ಪ್ರಹ್ಲಾದ್ ರಾವ್ ಇದ್ದರು.




## ಹಲವೆಡೆ ಆಲಿಕಲ್ಲು ಮಳೆ

ಯಳಂದೂರು: ತಾಲ್ಲೂಕಿನ ಕೆಸ್ತೂರು, ಹೊನ್ನೂರು, ಮದ್ದೂರು, ಯರಿಯೂರು, ಹೊಸೂರು, ಬಳೇಪೇಟೆ, ಯಳಂದೂರು ಪಟ್ಟಣ ಸೇರಿದಂತೆ ಮಂಗಳವಾರ ನಾಲ್ಕರ ಸಮಯದಲ್ಲಿ ಆಲಿಕಲ್ಲು ಮಳೆಯಾಗಿದೆ.

ಈ ವರ್ಷದ ಮೊದಲನೇಯ ಮಳೆಯಾಗಿದೆ ಇದರಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ರಸ್ತೆ, ಜಮೀನು, ಗ್ರಾಮೀಣ ರಸ್ತೆಗಳಲ್ಲಿ ಆಲಿಕಲ್ಲು ಬಿದ್ದಿದ್ದರಿಂದ ಜನರು ತಮ್ಮ ಮೊಬೈಲ್ ಗಳಲ್ಲಿ ಪೋಟೋ ಮತ್ತು ವಿಡಿಯೋ ಮಾಡಿಕೊಂಡು ಸಾಮಾಜಿಕ ಜಾಲತಾಣಕ್ಕೆ ಬಿಟ್ಟು ಸಂತಸ ಪಟ್ಟರು ಒಟ್ಟಾರೆ ಹಿಮ ರಸ್ತೆಗೆ ಬಿದ್ದಂತೆ ಊಹಿಸಿದರು. ಕೆಲವು ಕಡೆ ವಿಪರೀತ ಗಾಳಿಗೆ ಬಾಳೆ ಮತ್ತು ಮರಗಳು ನೆಲಕ್ಕೆರುಳಿದೆ. ಕೆಸ್ತೂರು ಗ್ರಾಮದ ಅಂಬೇಡ್ಕರ್ ಬಡಾವಣೆಯಲ್ಲಿ ಮರವೊಂದು ನೆಲಕ್ಕೆ ಬಿದ್ದಿದೆ ಇದರಿಂದ ವಿದ್ಯುತ್ ತಂತಿ ತುಂಡಾಗಿ ಕೆಳಗೆ ಬಿದ್ದಿದೆ ಇದರಿಂದ ಯಾವುದೇ ಅನಾಹುತ ಸಂಭವಿಸಲಿಲ್ಲ ಕೂಡಲೇ ಯಳಂದೂರು ಚೆಸ್ಕಾಂ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿದರು.



### ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮತ್ತು ಉಪನ್ಯಾಸಕ ಸುರೇಶ್ ಎನ್.ಋಗ್ವೇದಿ ಹೇಳಿಕೆ

# ಮಂಕುತಿಮ್ಮನ ಕಗ್ಗ ವಿಶ್ವದ ಮಾನವರೆಲ್ಲರಿಗೂ ಜೀವನ ಮೌಲ್ಯ

ಚಾಮರಾಜನಗರ: ಡಿವಿಜಿಯವರ ಮಂಕುತಿಮ್ಮನ ಕಗ್ಗ ಕನ್ನಡ ಸಾಹಿತ್ಯ ಲೋಕವಲ್ಲದೆ ವಿಶ್ವದ ಮಾನವರೆಲ್ಲರಿಗೂ ಪ್ರತೀ ಕ್ಷಣ ಚಿಂತನೆಗೆ ಒಳಪಡಿಸಿರುವ ಜೀವನದ ಮೌಲ್ಯ ಗಳಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮತ್ತು ಉಪನ್ಯಾಸಕ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಅವರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಡಿವಿಜಿ ಹಾಗೂ ಪುತಿನ ಕೊಡುಗೆಗಳ ಕುರಿತು ಮಾತನಾಡುತ್ತಾ ಸಾಹಿತಿಗಳಾಗಿ, ಪತ್ರಕರ್ತರಾಗಿ ,ತತ್ವಜ್ಞಾನಿಯಾಗಿ, ವಿದ್ವಾಂಸರಾಗಿ, ಕವಿಯಾಗಿ ಪ್ರತಿ ಕ್ಷೇತ್ರದಲ್ಲೂ ಅತ್ಯುತ್ತಮ ಸೇವೆಯನ್ನು ಸಲ್ಲಿಸಿ ಕನ್ನಡಿಗರ ಶ್ರೇಷ್ಠ ವ್ಯಕ್ತಿಯಾಗಿದ್ದಾರೆ. ಇವರ ಕನ್ನಡದ ಭಗವದ್ಗೀತೆ ಎಂದೇ ಪರಿಗಣಿಸಲ್ಪಟ್ಟಿರುವ ಮಂಕುತಿಮ್ಮನ ಕಗ್ಗ ಜೀವನದ ವಿಶಿಷ್ಟ ಆಯಾಮಗಳನ್ನು ಪರಿಪೂರ್ಣತೆಯ ಸಾಹಿತ್ಯವನ್ನು ರಚಿಸಿ ಮಾದರಿಯಾಗಿದ್ದಾರೆ. ಮಂಕುತಿ ಮ್ಮನ ಕಗ್ಗ ಇಂದಿಗೂ ನೂರಾರು ವಿದ್ವಾಂಸರು ಸದಾ ಕಾಲ ಚರ್ಚಿಸುವ ಮೂಲಕ ಸಾಹಿತ್ಯ, ಸಂಗೀತ, ಗಮಕ, ಭಾಷಣಕ್ಕೆ ಅಪಾರವಾದ ಸಾಹಿತ್ಯವನ್ನೇ ನೀಡಿದೆ. ಡಿವಿಜಿಯವರ ಸಾಹಿತ್ಯದಲ್ಲಿ ಇತಿಹಾಸ ,ರಾಜನೀತಿ, ಪ್ರಜಾಪ್ರಭುತ್ವ, ಸಾರ್ವಜನಿಕ ಜೀವನ ,ಸಮಾಜದ ಚಿಂತನೆ ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಮಾನವನ ಅಂತರಂಗ ಮತ್ತು ಬಹಿರಂಗ ಜೀವನ ಸೌಂದರ್ಯವನ್ನು ಬೆಳೆಸಿಕೊಳ್ಳುವ ಬಗ್ಗೆ ಮಹತ್ವದ ವಿಚಾರಧಾರೆಗಳನ್ನು ನೀಡಿದ್ದಾರೆ. ಡಿವಿಜಿಯವರ ಮಂಕುತಿಮ್ಮನ ಕಗ್ಗ ಪ್ರತಿಯೊಬ್ಬ ಕನ್ನಡಿಗನ ಮನೆಯಲ್ಲಿ ಇರಬೇಕು. ಭವಿಷ್ಯದ ವಿದ್ಯಾರ್ಥಿಗಳಿಗೆ ಮಂಕುತಿಮ್ಮನ ಕಗ್ಗ ನೀಡಿ ಅವರ ವ್ಯಕ್ತಿತ್ವವನ್ನು ರೂಪಿಸಲು ಕನ್ನಡಿಗರು ಆಲೋಚಿಸಬೇಕು ಎಂದರು.



ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರು ನಿವೃತ್ತ ಮುಖ್ಯ ಶಿಕ್ಷಕರು ಆದ ಸರಸ್ವತಿ ಅವರು ಪುತಿ ನರಸಿಂಹಾಚಾರ್ ಬಗ್ಗೆ ಮಾತನಾಡಿ ಸಾಹಿತ್ಯ ನಿಂತ ನೀರಾಗದೆ ಮುಂದಿನ ಪೀಳಿಗೆಗೂ ತಲುಪಬೇಕು ಎಂಬ ದಿವ್ಯ ವಾಣಿಯನ್ನು ನುಡಿದ ಪುತಿನ ನವೋದಯ ಸಾಹಿತಿಗಳಾಗಿ ಪ್ರಕೃತಿ ಮತ್ತು ದೈವತ್ವದ ಹುಡುಕಾಟವನ್ನು ತಮ್ಮ ಸಾಹಿತ್ಯದಲ್ಲಿ ನೀಡಿದ್ದಾರೆ. ಇವರ ಜನ್ಮಸ್ಥಳ ಮೇಲುಕೋಟೆ ಇಂದಿಗೂ ಅವರ ಹುಟ್ಟಿದ ಮನೆ ಸ್ಮಾರಕವಾಗಿ ಇರುವುದು ನೋಡಬಹುದು ಎಂದು ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ರವಿಚಂದ್ರಪ್ರಸಾದ್ ಮತ್ತು ಶಿವಲಿಂಗ ಮೂರ್ತಿರವರು ಕನ್ನಡ ಗೀತೆ ಹಾಗೂ ಮಂಕುತಿಮ್ಮನ ಕಗ್ಗ ಗೀತೆಗಳನ್ನು ಹಾಡಿದರು. ಕಾರ್ಯಕ್ರಮವನ್ನು ಮುಖಂಡರಾದ ಶ್ರೀಮತಿ.ಪದ್ಮ ಪುರುಷೋತ್ತಮ್ ಉದ್ಘಾಟಿಸಿ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬಿಕೆ ಆರಾಧ್ಯ, ಸುರೇಶ್ ಗೌಡ, ನಿವೃತ್ತ ಶಿಕ್ಷಕರಾದ ಗೀತಾ, ಮಂಜುನಾಥ್ ,ಜಗದೀಶ್, ಅಜಯ್ ,ಚಂದ್ರು, ಮುಂತಾದವರು ಉಪಸ್ಥಿತರಿದ್ದರು

## ಅಪೋಲೋಯಿಂದ ಕ್ಲಬ್‌ಫೂಟ್ ಚಿಕಿತ್ಸೆ

ಮೈಸೂರು: ನಗರದ ಅಪೋಲೊ ಬಿಜಿಎಸ್ ಆಸ್ಪತ್ರೆಯ ಸಹಯೋಗದೊಂದಿಗೆ ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್‌ನಿಂದ ಸೌಲಭ್ಯ ವಂಚಿತರ ಮಕ್ಕಳಿಗೆ 19 ಕ್ಲಬ್ ಫೂಟ್ (ಪಾದದ ವಿರೂಪ) ನಿವಾರಣಾ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು.

ಆಟೋಮೋಟಿವ್ ಅಕ್ಸೆಲ್ಸ್ ಲಿಮಿಟೆಡ್ ಮತ್ತು ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ (ಸಿಎಸ್‌ಆರ್) ಬದ್ರತೆಗೆ ಅನುಗುಣವಾಗಿ 20 ಸರ್ಜರಿಗಳನ್ನು ಕೈಗಳುವ ಗುರಿ ಹೊಂದಲಾಗಿತ್ತು. ಅದರಂತೆ ಕ್ಲಟ್ ಫೋಟ್ ಸಮಸ್ಯೆ ಹೊಂದಿದ್ದ ಮಕ್ಕಳಿಗೆ ಈ ಸರ್ಜರಿ ಮಾಡಲಾಗಿದೆ. ಈ ಕಾರ್ಯಕ್ರಮವು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯಲ್ಲಿ ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್ನ ಪ್ರತಿನಿಧಿಗಳ ಸಮ್ಮುಖದಲ್ಲಿ ನಡೆಯಿತು. ಆಟೋಮೋಟಿವ್ ಅಕ್ಸೆಲ್ ನ ಅಧ್ಯಕ್ಷ ಮತ್ತು ಪೂರ್ಣಾವಧಿ ನಿರ್ದೇಶಕ ನಾಗರಾಜ್ ಗರ್ಣೇಶ್ವರಿ, ಇಆರ್ ಮತ್ತು ಕಾಲರ್ ಹಿರಿಯ ಪ್ರಧಾನ ವ್ಯವಸ್ಥಾಪಕ ವಿನಾಯಕ್ ಭಟ್, ಕಾನೂನು ಕಾರ್ಯದರ್ಶಿ ದೇಬದಾಸ್ ಪಾಂಡಾ ಮತ್ತು ವೈದ್ಯಾಧಿಕಾರಿ ಡಾ.ಎಚ್.ಪ್ರಫುಲ್ ಅಂಜನ್ ಆಸ್ಪತ್ರೆಯ ತಂಡ ಮತ್ತು ವೈದ್ಯರ ಸಮ್ಮುಖದಲ್ಲಿ ಈ ಕಾರ್ಯಕ್ರಮ ನಡೆಯಿತು.ಆಸ್ಪತ್ರೆಯ ಕನ್ಸಂಟ್ ಪೀಡಿಯಾಟ್ರಿಕ್ ಆರ್ಥೋಪೆಡಿಕ್ ಸರ್ಜನ್ ಡಾ.ಶ್ರೇಯಸ್ ಅಳ್ವಾ ಅವರನ್ನು ಆಟೋಮೋಟಿವ್ ಆಕ್ಸೆಲ್ಸ್ ಲಿಮಿಟೆಡ್ ನಾಗರಾಜ್



## ಕೆಆರ್‌ಎಸ್ ಪದಾಧಿಕಾರಿಗಳ ಆಯ್ಕೆ





ಸರಗೂರು: ಕೆ.ಅರ್.ಎಸ್ ಪಕ್ಷದ ತಾಲೂಕು ಘಟಕ ರಚನೆಯಾಗಿದ್ದು, ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಎಚ್.ಎಂ.ರವೀಂದ್ರ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ತಾಲೂಕು ಘಟಕಕ್ಕೆ ಅಧ್ಯಕ್ಷರಾಗಿ ಮನುಗನಹಳ್ಳಿ ಗುರುಸ್ವಾಮಿ, ಉಪಾಧ್ಯಕ್ಷರಾಗಿ ವೆಂಕಟರಾಜು, ಪ್ರಧಾನ ಕಾರ್ಯದರ್ಶಿಯಾಗಿ ಗೋವಿಂದರಾಜು, ಕಾರ್ಯದರ್ಶಿಯಾಗಿ ಉಮಾಪತಿ, ಗಣೇಶ್, ಚಿಕ್ಕಣ್ಣ, ಮಹದೇವಮ್ಮ, ನಾಗರಾಜು, ಸಂಘಟನಾ ಕಾರ್ಯದರ್ಶಿಯಾಗಿ ಸುಂದರ್ ರಾಜು ಆಯ್ಕೆಯಾಗಿದ್ದಾರೆ.

ತಾಲೂಕು ಅಧ್ಯಕ್ಷ ಮನುಗನಹಳ್ಳಿ ಗುರುಸ್ವಾಮಿ ಮಾತನಾಡಿ, ಪಕ್ಷ ನೀಡಲಾದ ಜವಾಬ್ದಾರಿಯನ್ನು ಪ್ರಾಮಾಣಿಕತೆಯಿಂದ ನಿಬಾಯಿಸುತ್ತೇನೆ. ಗ್ರಾಮಾಂತರ ಭಾಗದಲ್ಲಿ ಪಕ್ಷವನ್ನು ಸಂಘಟಿಸಿ, ಭ್ರಷ್ಟಾಚಾರ ನಿರ್ಮೂಲನೆಗೆ ಮುಂದಾಗುತ್ತೇನೆ. ಸಮಾಜದ ಏಳಿಗೆಗಾಗಿ ದುಡಿದು ಉತ್ತಮ ಸಮಾಜವನ್ನು ಕಟ್ಟುವ ಕೆಲಸ ಮಾಡುತ್ತೇನೆ ಎಂದು ಹೇಳಿದರು. ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹರೀಶ್, ಎಸ್.ಸಿ, ಎಸ್.ಟಿ ಘಟಕದ ಕಾರ್ಯದರ್ಶಿ ಅನುಸ್ವಾಮಿ ಸೇರಿದಂತೆ ಇನ್ನಿತರರು ಇದ್ದರು.

## ಬಹುಮಾನ ಗೆದ್ದ ವಿದ್ಯಾರ್ಥಿಗಳಿಗೆ ಅಭಿನಂದನೆ



ಮೈಸೂರು: ಭಾರತದ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾನಿಲಯವು ಕಾಂಚಿಪುರಂನ ಶ್ರೀ ಚಂದ್ರಶೇಖರೇಂದ್ರ ಸರಸ್ವತಿವಿಶ್ವಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ, ಅಖಿಲ ಭಾರತೀಯ ಶಾಸ್ತ್ರೋತ್ರದಲ್ಲಿ ಭಾಗವಹಿಸಿ ಚಿನ್ನ ಮತ್ತು ಕಂಚಿನ ಪದಕ ಹಾಗೂ ನಗದು ಬಹುಮಾನ ವಿಜೇತರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರಿನ ಸೋಸಲೆ ವ್ಯಾಸರಾಜರಮಠದ ಶ್ರೀ ವ್ಯಾಸತೀರ್ಥ ವಿದ್ಯಾಪೀಠದ ವಿದ್ಯಾರ್ಥಿಗಳಾದ ಡಿ.ಪ್ರಣವಾಚಾರ್ಯ, ತ್ರಿವಿಕ್ರಮ ರಾಮಭಾರಿ ಮತ್ತು ಮಹೀಧರ ವಿದ್ಯಾರ್ಥಿಗಳಿಗೆ ಮೈಸೂರಿನ ಸೋಸಲೆ ಶ್ರೀ ವ್ಯಾಸರಾಜಮಠದ ಪೂಜ್ಯ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರ ಸಮ್ಮುಖದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠ ಕುಮಾರ್, ಮೈಸೂರು ಜಿಲ್ಲಾ ಪ್ರತಿನಿಧಿ ಡಾ. ಕೆ.ವಿಲಕ್ಷ್ಮಿ ದೇವಿ ಗೌರವಿಸಿದರು. ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ.ಆರ್ ಬಾಲಕೃಷ್ಣ, ಕಲ್ಕೆರೆ ನಾಗರಾಜ್, ಟಿ.ಎಸ್ ಅರುಣ್, ಶ್ರೀನಿವಾಸ್ ಪ್ರಸಾದ್, ಚಂಚಲಾಕ್ಷಿ, ವನಜಾ ಮತ್ತಿತರರಿದ್ದಾರೆ.


**ಕರ್ನಾಟಕ ಸರ್ಕಾರ**
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,**
**ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ**
**ಸಂ: 32/2025–2026** **ದಿನಾಂಕ: 16–03–2026**

**ಮಂಡ್ಯ ಜಿಲ್ಲೆಯ ಕಾಮಗಾರಿಗಳಿಗಾಗಿ ಟೆಂಡರ್ ಪ್ರಕಟಣೆ**

ಐಟಂವಾರು ದರದ ಟೆಂಡರ್ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW–1/2/3/4 ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https:// kppp.karnataka.gov.in ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್, ರವರ ಕಛೇರಿ ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯ, ರವರ ಕಛೇರಿಯಲ್ಲಿ ದಿನಾಂಕ: 20–03–2026 ರಂದು ಬೆಳಿಗ್ಗೆ 11–00 ಗಂಟೆಗೆ ಕರೆಯಲಾಗಿದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ 17–03–2026 ರಿಂದ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್‌ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ; 25–03–2026 ಸಂಜೆ 5.30 ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 26–03–2026 ಸಂಜೆ 4.30 ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 27–03–2026 ಸಂಜೆ 4.31 ಗಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ ದಿನಾಂಕ: 30–03–2026 ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 2/4/12 ತಿಂಗಳು, ಒಟ್ಟು 22 (ಇಪ್ಪತ್ತೆರಡು) ಕಾಮಗಾರಿ, ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.140.00 ಲಕ್ಷಗಳು ಕನಿಷ್ಠ ಅಂದಾಜು ಮೊತ್ತ ರೂ.3.00 ಲಕ್ಷಗಳು ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ಟಿಪ್ಪಣಿ:– (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

**ಸಹಿ/–ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ**



**ನಗರಸಭಾ ಕಾರ್ಯಾಲಯ ಚಾಮರಾಜನಗರ**
**ಸಂಖ್ಯೆ:ನ.ಸ.ಚಾ./ತಾಂ.ವಿ/ಕಿ.ಅ/ಮಾನ್ಯುವಲ್ ಟೆಂಡರ್/2025–26** **ದಿ: 16.03.2026**

**ಟೆಂಡರ್ ಪ್ರಕಟಣೆ**

ಚಾಮರಾಜನಗರ ನಗರಸಭಾ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕ ಕಾಯ್ದೆ 1999ರಂತೆ ಅರ್ಹತೆ ಹೊಂದಿರುವ ಸಿಎಲ್/ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ಸೀಲ್ ಮಾಡಿದ ಏಕ ಲಕೋಟೆ (ಇ.ಎಂ.ಡಿ ಯೊಂದಿಗೆ) ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. ವೇಳಾ ಪಟ್ಟಿ:– (1) ಖಾಲಿ ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ:23..03.2026 ಸಂಜೆ 5.30ರವರೆಗೆ. (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:25.03.2026 ಸಂಜೆ 4.00 ಗಂಟೆವರೆಗೆ. (3) ಟೆಂಡರ್ ತೆರೆಯುವ ದಿನಾಂಕ:26.03.2026 ಬೆಳಿಗ್ಗೆ 11.00 ಗಂಟೆಗೆ.

| ಕ್ರ ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ | ಕಾಲಾವಧಿ |
|---|---|---|---|---|
| 1 | ಚಾಮರಾಜನಗರ ನಗರಸಭಾ ವ್ಯಾಪ್ತಿಯ ವಾರ್ಡ್ ನಂ–22ರ ವಿಜಯವಾಣಿ ಕಛೇರಿಯಿಂದ ವೃಷಭೇಂದ್ರಪ್ಪರವರ ಮನೆವರೆಗೆ ರಸ್ತೆ ಅಭಿವೃದ್ಧಿಪಡಿಸುವುದು. | 0.99 | 2475.00 | 30 ದಿನಗಳು |
| 2 | ಚಾಮರಾಜನಗರ ನಗರಸಭಾ ವ್ಯಾಪ್ತಿಯ ವಾರ್ಡ್ ನಂ 22ರ 2ನೇ ಮುಖ್ಯರಸ್ತೆಯ ಕನ್ನರ್ವೆನ್ಸಿ ಗಲ್ಲಿಯಲ್ಲಿನ ಚೈನೇಜ್ 155.00ಮೀ ನಿಂದ 175.60ಮೀ ವರೆಗಿನ ಕಾಂಕ್ರೀಟ್ ರಸ್ತೆಯ ಉಳಿಕೆ ಕಾಮಗಾರಿ. | 0.97 | 2425.00 | 30 ದಿನಗಳು |
| 3 | ಚಾಮರಾಜನಗರ ನಗರಸಭಾ ವ್ಯಾಪ್ತಿಯ ಗುಂಡ್ಲುಪೇಟೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವುದು ಹಾಗೂ ಅನ್ವರ್‌ಪಾಷ ಕಲ್ಯಾಣ ಮಂಟಪದ ಮುಂಭಾಗ ಹಾಲಿ ಇರುವ ಬೋರ್‌ವೆಲ್‌ಗೆ ಚೇಂಬರ್ ನಿರ್ಮಾಣ ಮಾಡುವುದು. | 0.83 | 2075.00 | 30 ದಿನಗಳು |
| 4 | ಚಾಮರಾಜನಗರ ನಗರಸಭಾ ವ್ಯಾಪ್ತಿಯ ಗಾಳಿಪುರಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿ. | 0.98 | 2450.00 | 30 ದಿನಗಳು |

ಷರಾ:– (1) ಷರತ್ತುಗಳು ಟೆಂಡರ್ ದಸ್ತಾವೇಜಿನಲ್ಲಿ ಲಭ್ಯವಿರುತ್ತದೆ. (2) ಕಾಮಗಾರಿಗೆ ತಗುಲುವ ವೆಚ್ಚವನ್ನು ನಗರಸಭಾ ನಿಧಿಯಡಿ ಹಣದ ಲಭ್ಯತೆಯ ಮೇರೆಗೆ ಪಾವತಿಸಲಾಗುವುದು.

**ಸಹಿ/–ಪೌರಾಯುಕ್ತರು, ನಗರಸಭೆ, ಚಾಮರಾಜನಗರ**

ಸಂ:ವಾಸಾಸಂಇ:ಚಾನಗರ:794:2025–26


# ಜಾತಿ: ಲಿಂಗ ಅಸಮಾನತೆ

## ಪ್ರಾಂಶುಪಾಲ ದೇವರಾಜು ಹೇಳಿಕೆ | ಲಿಂಗಸಮನ್ವತಾ ಮೇಳ




ಚಾಮರಾಜನಗರ, ಸಮಾಜದಲ್ಲಿ ಪುರುಷ, ಮಹಿಳೆಯರ ನಡುವೆ ಇರುವ ಲಿಂಗ ಅಸಮಾನತೆಗೆ ಜಾತಿಪದ್ಧತಿಯೇ ಮೂಲಕಾರಣವಾಗಿದ್ದು, ಇದರ ನಿವಾರಣೆಗಾಗಿ ಕಾರಣ ಪರಿಣಾಮಗಳ ಚಿಂತನೆ ನಡೆಸಬೇಕಾಗಿದೆ ಎಂದು ಭೋಗಾಪುರ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಪಿ. ದೇವರಾಜು ಅವರು ತಿಳಿಸಿದರು.

ತಾಲೂಕಿನ ಭೋಗಾಪುರದಲ್ಲಿರುವ ಸರ್ಕಾರಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜಿನ ಸಾವಿತ್ರಿ ಬಾಯಿಪುಲೆ ಸಭಾಂಗಣದಲ್ಲಿಂದು ಚಾಮರಾಜನಗರದ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಸಹಯೋಗದೊಂದಿಗೆ 'ಮಹಿಳಾ ದಿನಾಚರಣೆ' ಅಂಗವಾಗಿ ಆಯೋಜಿಸಲಾಗಿದ್ದ "ಲಿಂಗಸಮನ್ವತಾ ಮೇಳ" ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ದೇಶ ಇಂದು ವಿಜ್ಞಾನ, ತಂತ್ರಜ್ಞಾನದಲ್ಲಿ ಸಾಕಷ್ಟು ಮುಂದಿದೆ. ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದರೂ ಆಗಾಗ್ಗೆ ಮಹಿಳೆಯರ ಮೇಲೆ ದೌರ್ಜನ್ಯ, ದಬ್ಬಾಳಿಕೆಗಳು ನಿರಂತರವಾಗಿ ನಡೆಯುತ್ತಲೆ ಇವೆ. ಬಡತನ, ನಿರುದ್ಯೋಗ, ಮಹಿಳೆಯರ ಮೇಲಿನ ದೌರ್ಜನ್ಯದಂತಹ ಯಾವುದೇ ಸಮಸ್ಯೆಗೆ ಲಿಂಗ ಅಸಮಾನತೆ, ಜಾತಿಪದ್ಧತಿ ಮೂಲವಾಗಿದೆ. ಪ್ರತಿ ದಿನ ಮಹಿಳಾ ದೌರ್ಜನ್ಯ ಪ್ರಕರಣಗಳು ದಾಖಲಾ ಗುತ್ತಿವೆ. ಇದರ ನಿವಾರಣೆಗಾಗಿ ಲಿಂಗ ಅಸಮಾನ ತೆಯ ಕಾರಣ, ಪರಿಣಾಮಗಳನ್ನು ಚರ್ಚಿಸಿ, ಚಿಂತನೆಗೊಳಪಡಿಸಬೇಕಾಗಿದೆ ಎಂದರು. ಕಾಲೇಜಿನ ಉಪನ್ಯಾಸಕರಾದ ನಂಜುಂಡಯ್ಯ, ರಮೇಶ್ ಬಾಬು, ರಂಗಸ್ವಾಮಿ ಹಾಗೂ ಭೋಗಾಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಾನಸ ಅವರು ಕಾರ್ಯಕ್ರಮದಲ್ಲಿ ಮಹಿಳಾ ದಿನಾಚರಣೆಯ ಅಗತ್ಯ ಹಾಗೂ ಮಹತ್ವದ ಕುರಿತು ಮಾತನಾಡಿದರು. ಕಾಲೇಜಿನ ಅಧ್ಯಾಪಕ ವೃಂದ, ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಹೆಣ್ಣುಮಕ್ಕಳ ಮದುವೆ ಮಾಡದೇ ಉನ್ನತ ಶಿಕ್ಷಣ ನೀಡಿ

ಕಾರ್ಯಕ್ರಮ ಉದ್ಘಾಟಿಸಿದ ನಗರದ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಜಿಲ್ಲಾ ಸಂಯೋಜಕರಾದ ಎನ್. ಸೌಮ್ಯ ಅವರು ಮಾತನಾಡಿ ಮಹಿಳೆಯರು ಕಾರ್ಯನಿರ್ವಹಿಸುವ ಸ್ಥಳದಲ್ಲಿ ಇಂದು ಹಲವು ಸಮಸ್ಯೆ ಹಾಗೂ ಒತ್ತಡದ ಪರಿಸ್ಥಿತಿ ಎದುರಿಸುತ್ತಿರುವುದು ಕಂಡುಬಂದಿದೆ. ಎಸ್.ಎಸ್. ಎಲ್.ಸಿ, ಪಿಯುಸಿಯಲ್ಲಿ ಮುಂದಿರುವ ಹೆಣ್ಣುಮಕ್ಕಳು ಪಿಯುಸಿ ನಂತರ ಐಟಿ, ತಾಂತ್ರಿಕ ಕ್ಷೇತ್ರಗಳಿಗೆ ಮುನ್ನುಗ್ಗಬೇಕು. ಪಿಯುಸಿ ಬಳಿಕ ಪೋಷಕರು ಹೆಣ್ಣುಮಕ್ಕಳ ಮದುವೆ ಮಾಡದೇ ಉನ್ನತ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಬೇಕು. ಮಹಿಳೆಯರು ಸಹ ಉನ್ನತ ಶಿಕ್ಷಣದ ಜೊತೆಗೆ ಕೌಶಲ್ಯಾಧಾರಿತ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಮಹಿಳೆಯರಿಗೆ ಕುಟುಂಬ ನಿರ್ವಹಣೆ ಜೊತೆಗೆ ತಾಳ್ಮೆ, ಸಹನೆಯು ಅಗತ್ಯವಾಗಿದೆ ಎಂದರು.

ಲಿಂಗ ಸಮಾನತೆ ಮತ್ತು ಸಾಂವಿಧಾನಿಕ ಪ್ರಾತಿನಿಧ್ಯ ಕುರಿತು ಉಪನ್ಯಾಸ ನೀಡಿದ ಯಳಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ವೇತ ಅವರು ಮಾತನಾಡಿ ಹೆಣ್ಣೆಂದರೇ ಪ್ರಕೃತಿ, ಪ್ರಕೃತಿಗೆ ಎಲ್ಲವನ್ನು ಸಹಿಸುವ ತಾಳ್ಮೆ ಇದೆ. ಹಾಗೆಯೇ ಮಹಿಳೆಯರು ಎಲ್ಲವನ್ನು ಸಹಿಸಿಕೊಳ್ಳುವ ಶಕ್ತಿ, ಸಾಮರ್ಥ್ಯ ಹೊಂದಿದ್ದಾರೆ. ಪ್ರತಿ ಪುರುಷನ ಯಶಸ್ಸಿನ ಹಿಂದೆ ಮಹಿಳೆ ಇರುವಂತೆ ಮಹಿಳೆಯರ ಯಶಸ್ಸಿನ ಹಿಂದೆ ಸಾಕಷ್ಟು ಪುರುಷರು ಇದ್ದಾರೆ. ಪ್ರಕೃತಿದತ್ತವಾಗಿ ಇಬ್ಬರೂ ಸಮಾನರು. ಇಬ್ಬರು ಪರಸ್ಪರ ಅರಿವು, ಗೌರವ, ಹೊಂದಾಣಿಕೆಯಿಂದ ನಡೆದುಕೊಳ್ಳಬೇಕು. ಅವಕಾಶಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಮಹಿಳೆಗೆ ನೀಡಬೇಕಾಗಿದೆ ಎಂದರು.

ಹಿಂದಿನ ಕಾಲದ ಸಾಂಪ್ರದಾಯಿಕ ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ಎಂದರೆ ತಾತ್ಸಾರ ಮನೋಭಾವವಿತ್ತು. ಅಡುಗೆ ಮನೆಗೆ ಸೀಮಿತವಾಗಿದ್ದ ಮಹಿಳೆ ಅಂದು ಅಬಲೆಯಾಗಿದ್ದಳು. ದೇಶ ಸ್ವಾತಂತ್ರ್ಯಗೊಂಡು ಸಂವಿಧಾನ ಜಾರಿ ಬಳಿಕ ಮಹಿಳೆಯರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಸೇರಿದಂತೆ ಎಲ್ಲಾ ರಂಗದಲ್ಲಿಯೂ ತನ್ನದೇ ಛಾಪು ಮೂಡಿಸಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಡಿ ಹತ್ತು–ಹಲವು ಹಕ್ಕುಗಳನ್ನು ಅಡಕಗೊಳಿಸಿ ಮಹಿಳೆಯರಿಗೆ ಕಾನೂನಾತ್ಮಕ ರಕ್ಷಣೆ ನೀಡಿದ್ದಾರೆ. ಮೌಢ್ಯತೆ, ಕಂದಾಚಾರಗಳಿಗೆ ಸಿಲುಕಿದ್ದ ಮಹಿಳೆಯರು ಇಂದು ಮುಖ್ಯವಾಹಿನಿಗೆ ಬಂದಿದ್ದಾರೆ. ಪ್ರಜ್ಞಾವಂತ ನಾಗರಿಕರು ಲಿಂಗ ಸಮಾನತೆ ಬಗ್ಗೆ ಧನಾತ್ಮಕ ಚಿಂತನೆ ನಡೆಸಬೇಕಾಗಿದೆ ಎಂದು ಸಹಾಯಕ ಪ್ರಾಧ್ಯಾಪಕರಾದ ಶ್ವೇತ ಅವರು ಹೇಳಿದರು.

## ಹುಲಿ ದಾಳಿಗೆ ನಾಲ್ಕು ಕುರಿ ಬಲಿ

ಗುಂಟ್ಲುಪೇಟೆ: ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ಸೋಮವಾರ ಮತ್ತು ಮಂಗಳವಾರ ಹುಲಿ ದಾಳಿಗೆ ಪ್ರತ್ಯೇಕ ನಾಲ್ಕು ಹುಲಿ ಸಾವನ್ನಪ್ಪಿರುವ ಘಟನೆ ನಡೆದಿದೆ



ಗ್ರಾಮದ ಮಹದೇವಶೆಟ್ಟಿ ಎಂಬುವವರು ಕುರಿ ಮೇಯಿಸುವ ಸಂದರ್ಭದಲ್ಲಿ ಹುಲಿ ದಾಳಿ ನಡೆಸಿ ಎರಡು ಕುರಿಗಳನ್ನು ಸೋಮವಾರ ಸಂಜೆ ಕೊಂದುಹಾಕಿತ್ತು ಮಂಗಲವಾರ ಹಕ್ಕಳಪುರ ಕೆರೆ ಸಮಿಒದಲ್ಲಿ ಪುಟ್ಟ ಎಂಬುವವರು ಕುರಿಮೇಯಿಸುವ ಸಂದರ್ಭದಲ್ಲಿ ದಾಳಿ ನಡೆಸಿಕೊಂದುಹಾಕಿರುವ ಘಟನೆ ನಡೆದಿದೆ.

**ಅರಣ್ಯ ಇಲಾಖೆಯ ವೈಪಲ್ಯ ಮುಖಂಡ ಮಹೇಶ್ ಆಕ್ರೋಶ:**
ನಮ್ಮ ಗ್ರಾಮದಲ್ಲಿ ಜಾನುವಾರುಗಳು, ಕುರಿಗಳ ಮೇಲೆ ಸತತವಾಗಿ ಹುಲಿ ದಾಳಿ ನಡೆಸುತಿದ್ದು ಸೂಕ್ತ ಪರಿಹಾರ ಸಿಗೊತ್ತಿಲ್ಲ ಜೊತೆಗೆ ಜನರು ಓಡಾಡಲು ಭಯಪಡುತಿದ್ದು ಜಮೀನಿಗೆ ತೆರಳಲು ಅತಂಕ ಪಡುತಿದ್ದಾರೆ ,ಕೂಲಿ ಕಾರ್ಮಿಕರು ಸರಿಯಾಗಿ ಸಿಗುತ್ತಿಲ್ಲ ಸೂಕ್ತ ಪರಿಹಾರ ನೀಡುವುದರ ಜೊತೆಗೆ ಹುಲಿ ಸೆರೆ ಹಿಡಿಯುವಂತೆ ಒತ್ತಾಯಿಸಿದರು.

## ಪಾಲುದಾರರ ಸಮಾಲೋಚನ ಕಾರ್ಯಾಗಾರ

ಮೈಸೂರು: ಇಂದು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಕರ್ನಾಟಕ ಎಂಎಸ್‌ಎಂಇ ನೀತಿ 2025ರ ಅಡಿಯಲ್ಲಿ ಮೈಸೂರಿನ ವಿಭಾಗ ಮಟ್ಟದ ಪಾಲುದಾರರ ಸಮಾಲೋಚನ ಕಾರ್ಯಾಗಾರವನ್ನು ಎಸ್ ಡಿ ಎಮ್ ಇನ್ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು.

ಕಾರ್ಯಾಗಾರದಲ್ಲಿ ಮಂಡ್ಯ, ಮೈಸೂರು ಹಾಗೂ ಚಾಮರಾಜನಗರ ಸೇರಿದಂತೆ 8 ಜಿಲ್ಲೆಗಳ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಸಹದ್ಯೋಗಿಗಳು ಪಾಲ್ಗೊಂಡಿದ್ದರು. ನಂತರ ಕರ್ನಾಟಕ ಕೈಗಾರಿಕಾ ನೀತಿ 2025ರ ಅಡಿಯಲ್ಲಿ ಎಂ.ಎಸ್.ಎಂ.ಇ ಪ್ರೋತ್ಸಾಹ ಮತ್ತು ಸೌಲಭ್ಯಗಳು, ಹಣಕಾಸು ಸೌಲಭ್ಯ, ತಂತ್ರಜ್ಞಾನ ಬಳಕೆ ಹಾಗೂ ಡಿಜಿಟಲೀಕರಣಕ್ಕೆ ಆದ್ಯತೆ, ಮಾರುಕಟ್ಟೆ, ಮೂಲಸೌಕರ್ಯ ಹಾಗೂ ನಿಯಂತ್ರಣಾತ್ಮಕ ನಿಯಮಾವಳಿಗೆ ನೆರವು ಕೌಶಲ್ಯಾಭಿವೃದ್ಧಿ, ನವೀನತೆ ಮತ್ತು ಹಸಿರು ತಂತ್ರಜ್ಞಾನಗಳ ಪ್ರವೇಶಕ್ಕೆ ಆದ್ಯತೆಯ ಕುರಿತು ಚರ್ಚಿಸಲಾಯಿತು. ಕಾರ್ಯಾಗಾರದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ



ನಿರ್ದೇಶಕ ಡಾ.ಬಿ.ಸಿ.ಸತೀಶ್, ಮೈಸೂರು ಚೇಂಬರ್ ಆಫ್ ಕಾಮರ್ಸ್ ನ ಅಧ್ಯಕ್ಷ ಕೆ.ಬಿ.ಲಿಂಗರಾಜು, ಚಾಮರಾಜನಗರ ಚೇಂಬರ್ ಆಫ್ ಕಾಮರ್ಸ್ ನ ಅಧ್ಯಕ್ಷ ಪ್ರಭಾಕರ, ಮಂಡ್ಯ ಚೇಂಬರ್ ಆಫ್ ಕಾಮರ್ಸ್ ನ ಅಧ್ಯಕ್ಷ ಪ್ರಭಾಕರ್, ಎಸ್ಸಿ,ಎಸ್.ಟಿ ಅಸೋಸಿಯೇಟ್ ನ ಅಧಕ್ಷ ವಿಜಯಶಂಕರ್, ಎಸ್.ಡಿ.ಎಂ ಕಾಲೇಜ್ ಫಾರ್ ಮ್ಯಾನೇಜ್ಮೆಂಟ್ ನ ಡೀನ್ ವ ಮೌಸಮಿ ಸೇಮ್ ಗುಪ್ತ, ಮೈಸೂರು ಇಂಡಸ್ಟ್ರೀಸ್ ಅಸೋಸಿಯೇಟ್ಸ್ ನ ಸಂತೋಷ್ ಕುಮಾರ್ ಜೈನ್ ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

## ಮೊದಲ ದಿನದ ಪರೀಕ್ಷೆ ಸುಗಮ



### ತಾಯಿ ಸಾವಿನ ನೋವಿನ ನಡುವೆ ಪರೀಕ್ಷೆ

ನಗರದ ಕ್ರಡಸೆಂಟ್ ಅಕಾಡೆಮಿ ಶಾಲೆಯ ಅಬ್ದುಲ್ ಅಹವಾನ್ ಎಂಬ ವಿದ್ಯಾರ್ಥಿ ತಾಯಿಯ ಸಾವಿನ ದುಃಖದ ನಡುವೆಯೂ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ಪರೀಕ್ಷೆ ಬರೆದಿದ್ದು ವಿಶೇಷವಾಗಿತ್ತು. ನಗರದ ಗಾಳಿಪುರ ಬಡಾವಣೆಯಲ್ಲಿ ವಾಸವಿರುವ ವಿದ್ಯಾರ್ಥಿ ಅಬ್ದುಲ್ ಅಹವಾನ್ ಬೆಳಗ್ಗೆ ಸರಕಾರಿ ಪದವಿಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ಪರೀಕ್ಷೆ ಬರೆದರು.

ಚಾಮರಾಜನಗರ, ಜಿಲ್ಲೆಯಾದ್ಯಂತ ಬುಧವಾರ ಆರಂಭವಾಗಿರುವ ಎಸ್.ಎಸ್.ಎಲ್.ಸಿ.ಪರೀಕ್ಷೆ ಮೊದಲ ದಿನ ಸುಗಮವಾಗಿ ನಡೆಯಿತು.

ಮಕ್ಕಳು ಪರೀಕ್ಷೆ ಬರೆಯಲು ನೆರವಾಗುವಂತೆ ಜಿಲ್ಲೆಯಾದ್ಯಂತ 47 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿತ್ತು. ಮೊದಲ ದಿನ ಪ್ರಥಮ ಭಾಷೆಗೆ ಜಿಲ್ಲೆಯಾದ್ಯಂತ ಒಟ್ಟು 11,027 ವಿದ್ಯಾರ್ಥಿಗಳು ನೋಂದಣಿ ಮಾಡಿಸಿ ಕೊಂಡಿದ್ದರು. ಈ ಪೈಕಿ 10,911 ವಿದ್ಯಾರ್ಥಿಗಳು ಪರೀ ಕ್ಷೆಗೆ ಹಾಜರಾಗಿದ್ದರು. 116 ವಿದ್ಯಾರ್ಥಿಗಳು ಗೈರಾಗಿದ್ದರು. ಪರೀಕ್ಷಾ ಕೇಂದ್ರಗಣಲ ಸುತ್ತಾಮುತ್ತಾ ಬಿಗಿ ಪೊಲೀಸ್ ಬಂದೋ ಬಸ್ತ್ ಮಾಡಲಾಗಿತ್ತು. ಪರೀಕ್ಷಾ ಕೇಂದ್ರಗಳಿಗೆ ಹೋಗಲು ಅನುಕೂಲವಾಗುವಂತೆ ಕೆ.ಎಸ್.ಆರ್.ಟಿಸಿ ಬಸ್ ನಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಪರೀಕ್ಷೆ ಆರಂಭದ ದಿನ ವಿದ್ಯಾರ್ಥಿಗಳು ನಗು ಮುಖ ದಿಂದಲೇ ಹೆಜ್ಜೆ ಹಾಕಿದರು. ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಗುಲಾಬಿ ಹೂವು ನೀಡಿ, ಸಿಹಿ ವಿತರಿಸಿ ಸ್ವಾಗತ ಕೋರಿದರು. ಜಿ.ಪ.ಸಿ.ಇ.ಓ ಮೋನಾರೋತ್, ಡಿಡಿಪಿಐ ಚಂದ್ರಪಾಟೀಲ, ಬಿಇಓ ಹನುಮಂತಶೆಟ್ಟಿ ವಿದ್ಯಾರ್ಥಿಗಳಿಗೆ ಗಹವು ಕೊಟ್ಟು, ಸಿಹಿ ಹಂಚಿ ಶುಭಕೋರಿದರು. ಜಿಲ್ಲಾಧಿಕಾರಿ ಶ್ರೀ ರೂಪ ತಾಲೂಕಿನ ಹರದನಹಳ್ಳಿ, ವೆಂಕಟಯ್ಯನಛತ್ರ ಸೇರಿದಂತೆ ಇತರೆ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

### ಡಾ.ಬಾಬು ಜಗಜೀವನ್ ರಾಮ್ ಭವನದ ಹೆಚ್ಚುವರಿ ಕಾಮಗಾರಿ ಪರಿಶೀಲನೆ

## ಅಧಿಕಾರಿಗಳೊಟ್ಟಿಗೆ ಭವನ ವೀಕ್ಷಿಸಿದ ಮುಖಂಡರು



ಎಚ್.ಡಿ.ಕೋಟೆ: ಪಟ್ಟಣದ ಹೃದಯ ಭಾಗದಲ್ಲಿರುವ ಡಾ.ಬಾಬು ಜಗಜೀವನ್ ರಾಮ್ ಭವನದ ಹೆಚ್ಚುವರಿ ಕಾಮಗಾರಿಯ ಬಗ್ಗೆ ಸಮಾಜ ಕಲ್ಯಾಣಾಧಿಕಾರಿಗಳು ಹಾಗೂ ಸರಗೂರು–ಕೋಟೆ ಮಾದಿಗ ಜನಾಂಗದ ಮುಖಂಡರು ವೀಕ್ಷಣೆ ಮಾಡಿ ಚರ್ಚಿಸಿದರು.

ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆ ಅಧ್ಯಕ್ಷ ಸಿ.ತಿಮ್ಮಯ್ಯ ಮಾತನಾಡಿ, ತಾಲೂಕಿನ ಹೃದಯ ಭಾಗದಲ್ಲಿರುವ ಹೈಟೆಕ್ ಭವನವಿದು. ರಾಷ್ಟ್ರೀಯ ನಾಯಕ ಡಾಕ್ಟರ್ ಬಾಬು ಜಗಜೀವನ್ ರಾಮ್ ಈ ಸ್ಥಳಕ್ಕೆ ಭೇಟಿ ನೀಡಿದ್ದರು ಅದರ ನೆನಪಿಗಾಗಿ ಹಿಂದಿನ ಶಾಸಕ ಶಾಸಕ ಎಂ.ಪಿ.ವೆಂಕಟೇಶ್ ಈ ಜಾಗವನ್ನು ನಮ್ಮ ಸಮುದಾಯಕ್ಕೆ ಮೀಸಲಿಟ್ಟಿದ್ದಾರೆ. ಅವರಿಗೂ ಧನ್ಯವಾದ ಹೇಳಿ ಹೆಚ್ಚುವರಿ ಹಣದಲ್ಲಿ ಇನ್ನಷ್ಟು ಕಾಮಗಾರಿಗಳನ್ನು ನಡೆಸಿಕೊಡುವಂತೆ ಸಮಾಜ ಕಲ್ಯಾಣಾಧಿಕಾರಿ ರಮೇಶ್, ಲ್ಯಾಂಡ್ ಆರ್ಮಿ ಅಧಿಕಾರಿ ಅಭಿಷೇಕ್ ಅವರಿಗೆ ಮನವಿ ಮಾಡಿದರು.

ಮಾಜಿ ಅಧ್ಯಕ್ಷ ಪಿ.ನಾಗರಾಜು ಮಾತನಾಡಿ, ಶಾಸಕ ಅನಿಲ್ ಚಿಕ್ಕಮಾದು ಅವರ ಗಮನಕ್ಕೆ ಭವನದ ವಿಚಾರ ತಿಳಿಸಿದಾಗ, ಸಮುದಾಯ ಭವನಕ್ಕೆ ಹೆಚ್ಚುವರಿಯಾಗಿ ಎರಡು ಕೋ.ರೂ.ನೀಡಿದ್ದಾರೆ. ಭವನದ ಕಾಮಗಾರಿ ನೀಲನಕ್ಷೆಯನ್ನು ಸಮುದಾಯದ ಮುಖಂಡರು ಅಧಿಕಾರಿಗಳಿಗೆ ತಿಳಿಸಿದ್ದಾರೆ. ಶೀಘ್ರದಲ್ಲಿಯೇ ಭವನದ ಕೆಲಸವನ್ನು ಪ್ರಾರಂಭಿಸಬೇಕು ಎಂದು ಹೇಳಿದರು. ಹೀರಳ್ಳಿ ಪ್ರಕಾಶ್, ಶಿವಯ್ಯ, ವೆಂಕಟೇಶ್, ಡಿ. ನಾಗರಾಜು, ದೇವನಾಥ್, ಸಿ. ಕಾಳಪ್ಪಾಜಿ, ಸುಭಾಷ್, ನಾಗರಾಜು, ಮಟಕೆರೆ ಶಿವರಾಜ್, ಶಿವಾಜಿ, ಚೇತನ್, ಶೇಖರ್, ಶಿವರಾಜ್ ಇದ್ದರು.

# ಮೈಸೂರಲ್ಲಿ ಯುಗಾದಿ ಸಂಭ್ರಮ

## ಬೆಳಿಗ್ಗೆ ಬಿಸಿಲು, ಸಂಜೆ ಮಳೆಯಲ್ಲೂ ಭರ್ಜರಿ ವ್ಯಾಪಾರ



**ಮೈಸೂರು:** ಹಿಂದೂಗಳ ಸಂಪ್ರದಾಯಿಕ ಹಬ್ಬಗಳಲ್ಲಿ ಪ್ರಮುಖ ಹಬ್ಬವಾದ ಯುಗಾದಿ ಹಬ್ಬಕ್ಕೆ ಸಾಂಸ್ಕೃತಿಕ ನಗರಿ ಮೈಸೂರು ಸಕಲ ರೀತಿಯಲ್ಲೂ ಸಜ್ಜಾಗಿ ನಗರದೆಲ್ಲೆಡೆ ಭರ್ಜರಿ ವ್ಯಾಪಾರ ನಡೆಯಿತು.

ನಗರದ ದೇವರಾಜ ಮಾರುಕಟ್ಟೆಯಲ್ಲಿ ಹೂವು, ಹಣ್ಣು, ಮಾವು, ಬೇವಿನ ಎಲೆಗಳ ಖರೀದಿಗೆ ಭಕ್ತರು ಮುಗಿಬಿದ್ದಿದ್ದಾರೆ. ಚಾಮುಂಡಿ ಬೆಟ್ಟ ಸೇರಿ ಪ್ರಮುಖ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯುತ್ತಿದ್ದು, ಮನೆಗಳಲ್ಲಿ ಬೇವು–ಬೆಲ್ಲ ಹಂಚಿ ಹೊಸ ವರ್ಷವನ್ನು ಸ್ವಾಗತಿಸಲಾಗುತ್ತಿದೆ. ಮೈಸೂರು ಅರಮನೆ ಆವರಣದಲ್ಲಿ ಮಾ.19ರಿಂದ 21 ರವರೆಗೆ ಯುಗಾದಿ ಸಂಗೀತೋತ್ಸವ ನಡೆಯಲಿದೆ.

ನಗರದ 101 ಗಣಪತಿ ದೇವಸ್ಥಾನ, ಕಾಮಕಾಮೇಶ್ವರಿ ದೇವಸ್ಥಾನ ಮತ್ತು ಚಾಮುಂಡಿ ಬೆಟ್ಟದಲ್ಲಿ ವಿಶೇಷ ಪೂಜೆ ಮತ್ತು ದರ್ಶನ ನಡೆಯಲಿದೆ. ಟಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಜನರು ಪುಣ್ಯಸ್ನಾನ ಮಾಡಿ ಗಂಗಾಪೂಜೆ ಸಲ್ಲಿಸುತ್ತಾರೆ. ಮನೆಗಳಲ್ಲಿ ಬಾಗಿಲಿಗೆ ಮಾವಿನ ಎಲೆಯ ತೋರಣ ಕಟ್ಟಿ, ಬೇವಿನ ಎಲೆ ಮತ್ತು ಬೆಲ್ಲವನ್ನು (ಬೇವು–ಬೆಲ್ಲ) ಹಂಚಿ ಹೊಸ ವರ್ಷದ ಆರಂಭವನ್ನು ಸಂಭ್ರಮಿಸಲಾಗುತ್ತಿದೆ. ಮಾರುಕಟ್ಟೆ, ಸಂತೇಪೇಟೆ, ಶಿವರಾಂಪೇಟೆ, ಅರಸು ರಸ್ತೆ ಸಯ್ಯಾಜಿರಾವ್ ರಸ್ತೆಗಳಲ್ಲಿ ಖರೀದಿ ಭರ್ಜರಿಯಾಗಿಯೇ ಇತ್ತು. ಚೆಂಡು ಹೂವು ಮಾರಿಗೆ 100 ರಿಂದ 150, ಮಲ್ಲಿಗೆ 150 ರಿಂದ 200,ಕನಕಾಂಬರ 200, ಸೇವಂತಿಗೆ 150 ಕೊಟ್ಟು ಖರೀದಿ ಮಾಡುವ ದೃಶ್ಯ ಕಂಡು ಬಂತು. ಇದರ ಜೊತೆಗೆ ಮಾವು,ಬೇವಿನ ಎಲೆಗಳ ಮಾರಾಟವೂ ಕಂಡು ಬಂತು.ಈ ಹಬ್ಬದ ವಿಶೇಷ ಅಂದರೆ ಬೇವು ಬೆಲ್ಲ.ಬೇವು,ಬೆಲ್ಲ,ಹಣ್ಣು ತರಕಾರಿ, ದವಸ ಧಾನ್ಯಗಳ ಖರೀದಿ ಮಾಡಲು ಮಾರುಕಟ್ಟೆಗೆ ಜನ ಮುಗಿಬಿದ್ದಿದ್ದರು.

### ಬೆಳಿಗ್ಗೆ ಬಿಸಿಲು, ಸಂಜೆ ಮಳೆ

ಬೆಳಿಗ್ಗೆ ಬಿರು ಬಿಸಿಲಿನಲ್ಲೂ ಅನೇಕರು ಕಾವೇರಿದ ದರದಲ್ಲೂ ಅನಿವಾರ್ಯವಾಗಿ ಹಬ್ಬದ ಖರೀದಿಯಲ್ಲಿ ತೊಡಗಿದ್ದರು. ಸಂಜೆ ನಗರದ ಅನೇಕ ಕಡೆಗಳಲ್ಲಿ ಧಾರಾಕಾರ ಮಳೆ ಸುರಿಯಿತು ಇದರಿಂದಾಗಿ ಕೆಲ ಅವ್ಯವಸ್ಥೆಯುಂಟಾಯಿತು. ಸಂಜೆ ಮಳೆಯಾಗಿದ್ದರಿಂದ ಕೆಲಸಕ್ಕೆ ಹೋಗುವವರು ಹಾಗೂ ಮನೆಗೆ ಮರಳುವವರಿಗೂ ತೊಂದರೆಯಾಯಿತು. ಅಲ್ಲದೆ, ಸಂಜೆ ಕೆಲಸ ಮುಗಿಸಿ ಮಳೆಯಲ್ಲೂ ವ್ಯಾಪಾರ ಮಾಡಿಕೊಂಡು ಹೋಗುತ್ತಿದ್ದ ದೃಶ್ಯ ಮಾರುಕಟ್ಟೆಯಲ್ಲಿ ಕಾಣಿಸಿತು.

# ಪರಿಶಿಷ್ಟ ಜಾತಿ/ ವರ್ಗದವರಿಗೆ ನಿವೇಶನ, ಹಕ್ಕುಪತ್ರ ವಿತರಿಸಲು ಅಗತ್ಯ ಕ್ರಮ: ಯಶವಂತ್ ವಿ. ಗುರುಕರ್



**ರಾಮನಗರ:** ಪರಿಸರ ರಾಯಭಾರಿ ಸಾಲುಮರದ ತಿಮ್ಮಕ್ಕ ಅವರು ವಾಸವಿದ್ದ ಮಾಗಡಿ ತಾಲೂಕಿನ ಹುಲಿಕಲ್ ಗ್ರಾಮದಲ್ಲಿ ವಾಸವಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ನಿವೇಶನಗಳು ಹಾಗೂ ಹಕ್ಕುಪತ್ರಗಳನ್ನು ನೀಡುವ ಸಂಬಂಧ ಹುಲಿಕಲ್ ಗ್ರಾಮದ ಸರ್ವೆ ನಂಬರ್ 127 ರಲ್ಲಿ 1.13 ಎಕರೆ/ಗುಂಟೆ ಜಮೀನನ್ನು ಆಶ್ರಯ ಯೋಜನೆಯಡಿ ಕಾಯ್ದಿರಿಸಲು ಮಾಗಡಿ ತಹಶೀಲ್ದಾರರು ಸಲ್ಲಿಸಿರುವ ಪ್ರಸ್ತಾವನೆಗೆ ಈಗಾಗಲೇ ಅಧಿಕೃತ ಜ್ಞಾಪನ ಹೊರಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ತಿಳಿಸಿದರು.

ಅವರು ಮಾ. 18ರ ಬುಧವಾರ ನಗರದ ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ (ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ (ದೌರ್ಜನ್ಯ ಪ್ರತಿಬಂಧ) ತಿದ್ದುಪಡಿ ಕಾಯ್ದೆ–2015ರ ಅನುಷ್ಠಾನ ಸಂಬಂಧ)ಯ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹುಲಿಕಲ್ ಗ್ರಾಮದ ಸರ್ವೆ ನಂಬರ್ 127 ರಲ್ಲಿ 1.13 ಎ/ಗು ಜಮೀನನ್ನು ಆಶ್ರಯ ಯೋಜನೆಯಡಿ ಮಂಜೂರು ಮಾಡುವ ಸಮಯದಲ್ಲಿ ಹುಲಿಕಲ್ ಗ್ರಾಮದ ಪರಿಶಿಷ್ಟ ಹಾಗೂ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ನಿವೇಶನ ಒದಗಿಸಲು ಈ ಕ್ರಮ ವಹಿಸಲಾಗಿದೆ ಎಂದವರು ತಿಳಿಸಿದರು.

ರಾಮನಗರ ತಾಲೂಕಿನ ಕುಂಭಾಪುರ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯ ಪರಿಶಿಷ್ಟ ಜಾತಿಯವರು ವಾಸಿಸುತ್ತಿದ್ದಾರೆ, ಅಲ್ಲಿ 2026–27ನೇ ಸಾಲಿನ ತಾಲೂಕು ಪಂಚಾಯತ್ ಅನುದಾನದಲ್ಲಿ ರಸ್ತೆ ನಿರ್ಮಾಣ ಮಾಡಿಕೊಡುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಚಿಕ್ಕಸುಬ್ಬಯ್ಯ ಅವರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಸೇರಿದಂತೆ ಇತರೆ ನಿಗಮಗಳಿಂದ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆಯುವ ಯೋಜನೆಯಲ್ಲಿ ಸಾರ್ವಜನಿಕರಿಂದ ವ್ಯಕ್ತವಾಗಿರುವ ಆಕ್ಷೇಪಣೆಗಳ ಕುರಿತಂತೆ ನಡೆದ ಚರ್ಚೆಯಲ್ಲಿ ಜಿಲ್ಲೆಗೆ ಬಿಡುಗಡೆಯಾದ ಅನುದಾನ, ಫಲಾನುಭವಿಗಳ ಆಯ್ಕೆ ಹಾಗೂ ಅರ್ಹತೆ ಮಾನದಂಡಗಳ ಬಗ್ಗೆ ಹಾಗೂ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರಿಗೆ ಲಿಖಿತವಾಗಿ ಮಾಹಿತಿ ನೀಡುವಂತೆ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಿಗೆ ಜಿಲ್ಲಾಧಿಕಾರಿಯವರು ಸೂಚನೆ ನೀಡಿದರು.

ಸಭೆಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಯಿತು.

ಉಪ ವಿಭಾಗಾಧಿಕಾರಿ ಬಿನೋಯ್, ಅಪರ ಪೊಲೀಸ್ ವರಿಷ್ಠಾಧಿಕಾರಿ ರಾಜೇಂದ್ರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಶಿವಕುಮಾರ್ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಭೂ ಸ್ವಾಧೀನ ಕೈ ಬಿಡದಿದ್ದರೆ ಉಗ್ರ ಹೋರಾಟ

**ಮೈಸೂರು:** ನಂಜನಗೂಡು ತಾಲೂಕಿನ ಮುದ್ದಹಳ್ಳಿ, ಯಲಚಗೆರೆ, ಸಿಂಧುವಳ್ಳಿ ಗ್ರಾಮಗಳಲ್ಲಿನ ಫಲವತ್ತಾದ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕಾಗಿ ನಿಯಮ ಬಾಹಿರವಾಗಿ ಸ್ವಾಧೀನ ಪಡಿಸಿಕೊಳ್ಳುವುದನ್ನು ಸರ್ಕಾರ ಕೈಗಬಿಡಬೇಕು. ಇಲ್ಲದಿದ್ದರೆ ತೀವ್ರ ಹೋರಾಟ ನಡೆಸಲಾಗುವುದೆಂದು ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘದ ಪದಾಧಿಕಾರಿ ಮಂಜುಕಿರಣ್ ಎಚ್ಚರಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಗ್ರಾಮಗಳ 448 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಮೊದಲಿನಿಂದಲೂ ರೈತರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇವು ಫಲವತ್ತಾದ ಭೂಮಿಗಳಾಗಿವೆ. ಇದರ ಅರಿವಿದ್ದ ಕಾರಣ ಶಾಸಕರು ಮೊದಲು ರೈತರ ನೆರವಿಗೆ ಬರುವುದಾಗಿ ತಿಳಿಸಿ ಭರವಸೆ ನೀಡಿದ್ದರೂ, ಈಗ ಯಾರದೋ ಒತ್ತಡಕ್ಕೆ ಮಣಿದು ಅಸಹಾಯಕರಾಗಿರುವುದು ಸರಿಯಲ್ಲ ಎಂದರು.

2003 ರಲ್ಲಿಯೇ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಇಷ್ಟೊಂದು ಎಂದರೆ ಸುಮಾರು 19 ವರ್ಷಗಳ ವಿಳಂಬ ನಡೆದಿದೆ. ಇದು ಸಹಾ ನಿಯಮ ಬಾಹಿರ.

ಈ ಅವಧಿಯಲ್ಲಿ ರೈತರ ತಮ್ಮ ಜಮೀನು ಸ್ವಾಧೀನ ಪಡಿಸಿಕೊಳ್ಳುವುದಿಲ್ಲ ಎಂಬ ನಿರೀಕ್ಷೆಯಿಂದ ಪಂಪ್‌ಸೆಟ್, ದೀರ್ಘ ಕಾಲದ ಬೆಳೆಗಳನ್ನು ಕೈಗೊಂಡಿದ್ದಾರೆ ಇದರಿಂದಾಗಿ ಇವರಿಗೆ ಈಗ ಭಾರೀ ಆತಂಕವುಂಟಾಗಿದೆ. ಹೀಗಾಗಿ ಎಲ್ಲ ನಿಯಮ ಗಾಳಿಗೆ ತೂರಿ ಸ್ವಾಧೀನಕ್ಕೆ ಮುಂದಾಗಿರುವ ಸರ್ಕಾರ ತನ್ನ ನಿರ್ಧಾರ ಕೈಬಿಡದಿದ್ದರೆ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಗುರುಸ್ವಾಮಿ, ವೆಂಕಟೇಶ್, ವರಕೋಡು ಕೃಷ್ಣೇಗೌಡ, ವಿಜಯಲಕ್ಷ್ಮಿ ಹಾಗೂ ಇನ್ನಿತರರು ಇದ್ದರು.




# ವರ್ಷದ ಮೊದಲ ಜಾತ್ರೆ ಯುಗಾದಿ ಜಾತ್ರಾ ಮಹೋತ್ಸವಕ್ಕೆ ಪ್ರಾರಂಭ



**ಹನೂರು:** ತಾಲೂಕಿನ ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರ ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ನಾಲ್ಕು ದಿನಗಳ ಕಾಲ ಜರುಗುವ ವರ್ಷದ ಮೊದಲ ಜಾತ್ರೆಯಾದ ಯುಗಾದಿ ಜಾತ್ರಾ ಮಹೋತ್ಸವಕ್ಕೆ ಜಾತ್ರೆ ಮಾರ್ಚ್ 16 ರ ಸೋಮವಾರ ದಂದು ಧಾರ್ಮಿಕ ವಿಧಿವಿಧಾನಗಳೊಂದಿಗೆ ಚಾಲನೆ ದೊರೆಯಿತು.

ದಿನಾಂಕ:– 17 ರ ಮಂಗಳವಾರ ಸಂಜೆ 6–20 ರಿಂದ ರಾತ್ರಿ 8–30 ರವರೆಗೆ ಸ್ವಾಮಿಗೆ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ಭಕ್ತಿಯ '?ಎಣ್ಣೆಮಜ್ಜನ? ಸೇವೆ ನಡೆಯಿತು. ಸಂಜೆ ವೇಳೆಗೆ ಮಲೆ ಮಾದಪ್ಪನ ಚಿನ್ನದ ರಥೋತ್ಸವ ಜರುಗಿತು. ಹರಕೆ ಹೊತ್ತ ಭಕ್ತರು ಪಂಜಿನ ಸೇವೆ, ಉರುಳು ಸೇವೆ, ವಿವಿಧ ಸೇವಾ ಉತ್ಸವಾದಿಗಳನ್ನು ನೇರವೇರಿಸಿದರು.

ದಿನಾಂಕ:– 18 ರ ಬುಧವಾರ ಮತ್ತು ಗುರುವಾರ ಫಾಲ್ಗುಣ ಮಾಸದ ಕೊನೆಯ ದಿನವಾದ ಅಮಾವಾಸ್ಯೆಯ ವಿಶೇಷ ಪೂಜೆಗಳು ಮತ್ತು ಉತ್ಸವಗಳು ಜರುಗಲಿವೆ. 19 ರ ಶುಕ್ರವಾರ (ಯುಗಾದಿ) :– ಬೆಳಿಗ್ಗೆ 3–00 ಗಂಟೆಗೆ ವಿಶೇಷ ಪೂಜೆ ಸಲ್ಲಿಸಲಾಗಿದ್ದು, ಬೆಳಿಗ್ಗೆ 9–45 ರಿಂದ 11–00 ಗಂಟೆಯ ಶುಭ ಮುಹೂರ್ತದಲ್ಲಿ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ಮಹಾರಥೋತ್ಸವ ವಿಜೃಂಭಣೆಯಿಂದ ನೆರವೇರಲಿದೆ.

ನಂತರ ಗುರುಬ್ರಹ್ಮೋತ್ಸವ, ಅನ್ನಬ್ರಹ್ಮೋತ್ಸವ ಮತ್ತು ಭಕ್ತರಿಗೆ ಬೇವು–ಬೆಲ್ಲದ ಪ್ರಸಾದ ವಿನಿಯೋಗ ನಡೆಯಲಿದೆ. ಈ ಬಾರಿಯ ವಿಶೇಷವೆಂದರೆ ಅಮಾವಾಸ್ಯೆ ಮತ್ತು ಯುಗಾದಿ ಸಂಗಮ ಈ ವರ್ಷದ ಯುಗಾದಿಯ ಮತ್ತೊಂದು ವಿಶೇಷವೆಂದರೆ ಫಾಲ್ಗುಣದ ಅಮಾವಾಸ್ಯೆ ಮತ್ತು ಚೈತ್ರದ ಪಾಡ್ಯಮಿ ಹತ್ತಿರವಾಗಿರುವುದು. ಅಮಾವಾಸ್ಯೆಯಂದು ಭಕ್ತರು ಪಿತೃ ತರ್ಪಣ ಸಲ್ಲಿಸುತ್ತಾರೆ ಮತ್ತು ಮರುದಿನ ಹೊಸ ವರ್ಷದ ಹಬ್ಬವನ್ನು ಆಚರಿಸುತ್ತಾರೆ.

# ಬಲಗೈ ಸಮುದಾಯದ ಉಳಿವಿನ ಹೋರಾಟ ಬೆಂಬಲಿಸಿ



**ಮೈಸೂರು:** ನ್ಯಾ.ನಾಗಮೋಹನ್ ದಾಸ್ ಸಮಿತಿ ಸಲ್ಲಿರುವ ಒಳ ಮೀಸಲಾತಿ ವರದಿಯನ್ನು ತಿರಸ್ಕರಿಸುವಂತೆ ಒತ್ತಾಯಿಸಿ ಮಾ. 23ರಂದು ಮೈಸೂರು ಮತ್ತು ಮಾ.25ರಂದು ಬೆಂಗಳೂರಲ್ಲಿ ಹಮ್ಮಿಕೊಂಡಿರುವ ಬೃಹತ್ ಪ್ರತಿಭಟನೆಯೂ ಬಲಗೈ ಸಮುದಾಯದ ಉಳಿವಿನ ಹೋರಾಟವಾಗಿದೆ ಎಂದು ಮುಖಂಡರು ಅಭಿಪ್ರಾಯಪಟ್ಟರು.

ಬುದ್ಧ ವಿಹಾರದಲ್ಲಿ ಬುಧವಾರ ಸಂಜೆ ನಡೆದ ಬೃಹತ್ ಪ್ರತಿಭಟನೆಯ ಪೂರ್ವಭಾವಿ ಸಭೆಯಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಬಲಗೈ ಸಮುದಾಯದ ಜನರು ಶಕ್ತಿ ಪ್ರದರ್ಶನ ಮಾಡಬೇಕು. ಅವೈಜ್ಞಾನಿಕವಾದ ವರದಿಯನ್ನು ತಿರಸ್ಕರಿಸುವಂತೆ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ಹೇಳಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಅವೈಜ್ಞಾನಿಕ, ಅಪೂರ್ಣ, ದೋಷಪೂರಿತ ಹಾಗೂ ಪಕ್ಷಪಾತದಿಂದ ಕೂಡಿರುವ ಒಳ ಮೀಸಲಾತಿಯನ್ನು ತಿರಸ್ಕರಿಸಬೇಕು. ಮತ್ತೊಮ್ಮೆ ಸಮೀಕ್ಷೆ ನಡೆಸುವಂತೆ ಆಗ್ರಹಿಸುವ ಹೋರಾಟವನ್ನು ಯಶಸ್ವಿಗೊಳಿಸುವಂತೆ ಕೋರಿದರು.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಮಾತನಾಡಿ, ಇತ್ತೀಚೆಗೆ ನಿವೃತ್ತ ನ್ಯಾಯ ಮೂರ್ತಿ ನಾಗಮೋಹನ್ ದಾಸ್ ಪರೋಕ್ಷವಾಗಿ ಬಲಗೈ ಸಮುದಾಯವನ್ನು ಟೀಕಿಸುತ್ತಾ ಒಂದು ಸಮುದಾಯದ ಓಲೈಕೆಗಾಗಿ ಅವೈಜ್ಞಾನಿಕ ಮತ್ತು ಅಸಮಾನತೆಯಿಂದ ಕೂಡಿದ ವರದಿಯನ್ನು ಸಿದ್ದಪಡಿಸಿ ಸಾಮಾಜಿಕ ನ್ಯಾಯಕ್ಕೆ ಕೊಳ್ಳಿ ಇಟ್ಟಿದ್ದಾರೆ.

ಒಂದು ಸಮುದಾಯದ ವಿಶ್ವಾಸ ಗಳಿಸಲು ರಾಜಕೀಯ ಪಕ್ಷಗಳ ಏಜೆಂಟರ ನಿಕಟ ಸಂಪರ್ಕದಿಂದ ಸಿದ್ದಪಡಿಸಿದ ವರದಿಯನ್ನು ಜಾರಿಗೆತರುವಂತೆ ಅಸಮಾನತೆಯನ್ನು ಪ್ರಚೋದಿಸುತ್ತಿರುವ ನಾಗಮೋಹನ್ ದಾಸ್ ಬಲಗೈ ಸಮುದಾಯದವರಲ್ಲಿ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದರು.

ಬೆಂಗಳೂರಿನಲ್ಲಿ ನಡೆಯುವ ಪ್ರತಿಭಟನೆಯಲ್ಲಿ ರಾಜ್ಯದ ಎಲ್ಲಾ ವಕೀಲರು ತಮ್ಮ ಸಮವಸ್ತ್ರದಲ್ಲಿ ಬಂದು ಬೆಂಬಲ ವ್ಯಕ್ತಪಡಿಸುವಂತೆ ಕೋರಿದರು.

ಆದಿ ಕರ್ನಾಟಕ ಮಹಾಸಂಸ್ಥೆ ಅಧ್ಯಕ್ಷ ಬಿ.ಸಿದ್ದರಾಜು, ಬಿಜೆಪಿ ಮುಖಂಡರಾದ ಸೋಮಸುಂದರ್, ವಿಶ್ವೇಶ್ವರಯ್ಯ, ಜೆ.ರವಿ, ದೊಡ್ಡಗರಡಿ ಅಧ್ಯಕ್ಷ ಮಹೇಶ್, ಚಿಕ್ಕಗರಡಿ ಅಧ್ಯಕ್ಷ ನಾಗರಾಜು, ಸಾಹಿತಿ ಸಿದ್ದಸ್ವಾಮಿ, ಡಾ.ಪಿ.ಕೆ.ಜ್ಞಾನಪ್ರಕಾಶ್, ಮಣಿಯಯ್ಯ, ವಕೀಲರಾದ ಸೋಮರಾಜು, ತಿಮ್ಮಯ್ಯ, ಪುಟ್ಟಸ್ವಾಮಿ, ಜಯಕುಮಾರ್, ಅಶೋಕಪುರಂ ಪುಟ್ಟರಾಜು, ವಕೀಲರಾದ ಉಮೇಶ್, ರಾಜೇಶ್ವರಿ, ಮೈತ್ರಿ, ವಿಷ್ಣುವರ್ಧನ್, ಶಿವಮೂರ್ತಿ, ಸೋಮಯ್ಯ ಮಲೆಯೂರು, ನಿವೃತ್ತ ಪೊಲೀಸ್ ಅಧಿಕಾರಿ ಸಿದ್ದರಾಜು, ಕೂಡ್ಲೂರು ಶ್ರೀಧರ್ ಮೂರ್ತಿ ಭಾಗವಹಿಸಿದ್ದರು.

## ಸಂಕ್ಷಿಪ್ತ ಸುದ್ದಿ

### ಮಾರ್ಚ್ 23 ರಂದು ದೇವರ ದಾಸಿಮಯ್ಯ ಜಯಂತಿ

**ಮೈಸೂರು:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ದೇವರ ದಾಸಿಮಯ್ಯ ಜಯಂತಿ ಸಮಿತಿ ವತಿಯಿಂದ ದೇವರ ದಾಸಿಮಯ್ಯ ಜಯಂತಿಯನ್ನು ಮಾ.23 ರಂದು ಮಧ್ಯಾಹ್ನ 12 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿರುತ್ತದೆ.

ಬೆಳಗ್ಗೆ 9 ಗಂಟೆಗೆ ಅರಮನೆಯ ಶ್ರೀಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಕರ್ನಾಟಕದ ಕಲಾಮಂದಿರದವರೆಗೂ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ.

ಸಿಎಂ ಸಿದ್ದರಾಮಯ್ಯ ಹಾಗೂ ಉಕ್ಕು ಮತ್ತು ಕೈಗಾರಿಕ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ ಘನ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಅನಿಲ್ ಕುಮಾರ್ ಸಿ., ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿ ಸಿದ್ದೇಗೌಡ ಅವರು ಗೌರವ ಉಪಸ್ಥಿತರಿರಲಿದ್ದಾರೆ.

### ದರಪಟ್ಟಿ ಆಹ್ವಾನ

**ಮೈಸೂರು:** ನಂಜನಗೂಡು ತಾಲ್ಲೂಕು ಕಾರಾಗೃಹದಲ್ಲಿ ಅಳವಡಿಸಿರುವ 15 KVA EICHER (TNTL) ಮಾದರಿ ಜನರೇಟರ್ ದುರಸ್ಥಿಯಾಗಿದ್ದು, ತಾಂತ್ರಿಕ ಸಿಬ್ಬಂದಿಯವರ ಪರಿಶೀಲನೆಯನ್ವಯ ಬ್ಯಾಟರಿ ಅಳವಡಿಕೆ, Engine Oil Service, filter kit, AC Altranator service, Fuel Line pipe kit ಅಳವಡಿಕೆ ಕಾಮಗಾರಿಗಳು ಅಗತ್ಯವಿರುತ್ತದೆ.
ದುರಸ್ಥಿ/ಅಳವಡಿಕೆ ಕಾಮಗಾರಿಗಳಿಗೆ ದ್ವಿ ಪ್ರತಿಯಲ್ಲಿ ದರಪಟ್ಟಿಗಳನ್ನು (Included GST & ಇತರೆ ವೆಚ್ಚಗಳು ಸೇರಿ) ಮಾರ್ಚ್ 22 ರೊಳಗಾಗಿ ನಂಜನಗೂಡು ತಾಲ್ಲೂಕು ಉಪ ಕಾರಾಗೃಹದ ಅಧೀಕ್ಷಕರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬಹುದಾಗಿದೆ

ಹೆಚ್ಚಿನ ಮಾಹಿತಿಗಾಗಿ ಮೊ.9480806435 ನ್ನು ಸಂಪರ್ಕಿಸಬಹುದಾಗಿದೆ ಎಂದು ನಂಜನಗೂಡು ತಾಲ್ಲೂಕು ಉಪ ಕಾರಾಗೃಹ ಅಧೀಕ್ಷಕರು ತಿಳಿಸಿದ್ದಾರೆ.

# ಗ್ರಾಹಕರ ಹಿತರಕ್ಷಿಸುವಲ್ಲಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಹಲವು ಕ್ರಮ



**ಮಡಿಕೇರಿ:** ಗ್ರಾಹಕರು ಮೋಸ, ವಂಚನೆಗೆ ಒಳಗಾಗುವುದು ತಪ್ಪಿಸುವಲ್ಲಿ ರಾಜ್ಯಾದ್ಯಂತ ಗ್ರಾಹಕರ ಕಾಯ್ದೆಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ನ್ಯಾಯವಾದಿಗಳ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ನವೀಕರಣ ಕಟ್ಟಡವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಗ್ರಾಹಕರಾಗಿದ್ದು, ವಂಚನೆಗೆ ಅಥವಾ ಮೋಸಕ್ಕೆ ತುತ್ತಾದರೆ, ಪರಿಹಾರ ಒದಗಿಸುವಲ್ಲಿ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಕ್ರಮವಹಿಸಲಿದೆ ಎಂದು ಗ್ರಾಹಕರ ವ್ಯಾಜ್ಯಗಳ ಪರಿಹಾರ ರಾಜ್ಯ ಆಯೋಗದ ಅಧ್ಯಕ್ಷರು ಹೇಳಿದರು.

ಗ್ರಾಹಕರಿಗೆ ಸರಿಯಾದ ಸೇವೆ ಒದಗಿಸಬೇಕು ಎಂಬುದು ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಉದ್ದೇಶವಾಗಿದೆ. ಆ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ಕಚೇರಿಗೆ ಬೇಕಾದ ಎಲ್ಲಾ ರೀತಿಯ ಮೂಲ ಸೌಲಭ್ಯವನ್ನು ಕಲ್ಪಿಸಲು ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮುಂದಾಗಿದೆ ಎಂದು ಟಿ.ಜಿ.ಶಿವಶಂಕರೇಗೌಡ ಅವರು ವಿವರಿಸಿದರು.

ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಸಲ್ಲಿಕೆಯಾಗುವ ಪ್ರಕರಣಗಳನ್ನು 90 ದಿನಗಳಲ್ಲಿ ವಿಲೇವಾರಿ ಮಾಡಲು ಆಯೋಗ ಶ್ರಮಿಸುತ್ತಿದೆ. ಗ್ರಾಹಕರ ವ್ಯಾಜ್ಯಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ತೀರ್ಪು ನೀಡಲು ಆಯೋಗ ಕ್ರಮವಹಿಸಿದೆ ಎಂದು ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರು ನುಡಿದರು.

ಗ್ರಾಹಕರ ಹಿತರಕ್ಷಣಾ ಕಾಯ್ದೆ ಬಗ್ಗೆ ವಕೀಲರಿಗೆ ಮಾಹಿತಿ ನೀಡಿ ರಾಜ್ಯಾದ್ಯಾಂತ ಕಾಲೇಜುಗಳಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಗ್ರಾಹಕರ ಆಯೋಗ ಮತ್ತು ನ್ಯಾಯಾಂಗ ಸಮನ್ವಯತೆಯಿಂದ ಕೆಲಸ ಮಾಡಲಾಗುತ್ತಿದೆ. ಆ ನಿಟ್ಟಿನಲ್ಲಿ ಎಲ್ಲಾ ಹಂತದ ನ್ಯಾಯಾಲಯಗಳ ಹಾಗೂ ವಕೀಲರ ಸಂಘದ ಸಹಕಾರ ಅತ್ಯಗತ್ಯ ಎಂದು ಹೇಳಿದರು.

ನ್ಯಾಯಾಂಗವು ಗ್ರಾಹಕರ ಆಯೋಗದ ಜೊತೆ ಕೈಜೋಡಿಸಿ ಕೆಲಸ ಮಾಡಬೇಕು ಎಂಬುದಾಗಿದೆ. ಆ ನಿಟ್ಟಿನಲ್ಲಿ ಗ್ರಾಹಕರ ಹಿತರಕ್ಷಣೆ ಕಾಪಾಡುವುದು ಎಲ್ಲರ ಆದ್ಯತೆಯಾಗಬೇಕು ಎಂದು ತಿಳಿಸಿದರು.

ಗ್ರಾಹಕರ ಹಿತರಕ್ಷಣಾ ಸಮಿತಿ ಸಭೆಯನ್ನು ಮೂರು ತಿಂಗಳಿಗೊಮ್ಮೆ ನಡೆಸಿ ಗ್ರಾಹಕರ ಹಕ್ಕುಗಳ ಕಾಯ್ದೆಯನ್ನು ಸಂರಕ್ಷಿಸುವಲ್ಲಿ ಮುಂದಾಗಬೇಕು ಎಂದು ಸಲಹೆ ಮಾಡಿದರು.

ಗ್ರಾಹಕರಿಗೆ ಮಧ್ಯಸ್ಥಿಕೆ ಮೂಲಕ ಪರಿಹಾರ ಕಂಡುಕೊಳ್ಳುವುದು, ಹಾಗೆಯೇ ಗ್ರಾಹಕರ ಹಿತರಕ್ಷಣೆ ಮತ್ತು ಚಿಂತನೆಯನ್ನು ಅರ್ಥ ಮಾಡಿಕೊಂಡು ಆಯೋಗ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ 18 ಕೋಟಿ ಇದ್ದು, ಇದರಲ್ಲಿ 5 ಕೋಟಿ ರೂ.ವನ್ನು ವಿವಿಧ ಅಭಿವೃದ್ಧಿ ಕಾಮಗಾರಿ ಸೇರಿದಂತೆ ಜಾಗೃತಿ ಅಭಿಯಾನಕ್ಕೆ ಬಳಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ರಸ್ತೆ ಅಪಘಾತಗಳು, ಆಸ್ಪತ್ರೆಗಳು, ವ್ಯಾಪಾರ–ವಹಿವಾಟು ಮತ್ತಿತರ ಕಡೆಗಳಲ್ಲಿ ಗ್ರಾಹಕರಿಗೆ ಆಗುವ ಮೋಸ, ವಂಚನೆ ತಪ್ಪಿಸುವಲ್ಲಿ ತಾವು ನೀಡಿರುವ ತೀರ್ಪಿನ ವಿವಿಧ ಪ್ರಕರಣ ಸಂಬಂಧ ಸ್ವಾರಸ್ಯಕರವಾಗಿ ಶಿವಶಂಕರೇಗೌಡ ಅವರು ವಿವರಿಸಿದರು.

ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ಕೊಡಗು ಜಿಲ್ಲೆಯ ನ್ಯಾಯಾಧೀಶರು, ನ್ಯಾಯವಾದಿಗಳು ಸೇರಿದಂತೆ ಹಲವರು ಶ್ರಮಿಸಿದ್ದಾರೆ ಎಂದರು.

ಗ್ರಾಹಕರ ಪರಿಹಾರ ವೇದಿಕೆಯ ಸದಸ್ಯರಾದ ಗೌರಮ್ಮಣಿ ಅವರು ಮಾತನಾಡಿ ಗ್ರಾಹಕರ ಆಯೋಗವು ಗ್ರಾಹಕರ ಹಿತರಕ್ಷಣೆಗಾಗಿ ಕೆಲಸ ಮಾಡುತ್ತಿದ್ದು, ಗ್ರಾಹಕರ ವಿಶ್ವಾಸ ಗಳಿಸುವಲ್ಲಿ ಶ್ರಮಿಸುತ್ತಿದೆ. ಗ್ರಾಹಕರಿಗೆ ನ್ಯಾಯ ಒದಗಿಸುವಲ್ಲಿ ಮುಂದಾಗಲಾಗಿದೆ ಎಂದರು.

ಪ್ರಧಾನ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರಾದ ಹೊಸಮನಿ ಪುಂಡಲಿಕ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಸಿ.ಟಿ.ಜೋಸೆಫ್, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಡಾ.ಸಿ.ರೇಣುಕಾಂಬ ಅವರು ಮಾತನಾಡಿದರು.

ಆಹಾರ ಇಲಾಖೆ ಉಪ ನಿರ್ದೇಶಕರಾದ ಎಂ.ಭೀಮರಾಯ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರರಾದ ಕೆ.ಟಿ.ಪ್ರಭು, ಕುಶಾಲನಗರ ವಕೀಲರ ಸಂಘದ ಅಧ್ಯಕ್ಷರಾದ ನಾಗೇಂದ್ರ ಬಾಬು(ಕುಶಾಲನಗರ), ನ್ಯಾಯಾಧೀಶರು, ನ್ಯಾಯಾವಾದಿಗಳು ಇತರರು ಇದ್ದರು. ಮಹಾಲಿಂಗಸ್ವಾಮಿ ಪ್ರಾರ್ಥಿಸಿದರು, ಡಾ.ಸಿ.ರೇಣುಕಾಂಬ ಸ್ವಾಗತಿಸಿದರು, ಕಾನೂನು ಸೇವಾ ಪ್ರಾಧಿಕಾರದ ಆಡಳಿತ ಸಹಾಯಕರಾದ ಬಿ.ಎಸ್.ಜಯಪ್ಪ ನಿರೂಪಿಸಿ, ವಂದಿಸಿದರು.

# ಆನೆ ಕಂದಕ, ಸೌರಬೇಲಿ ಸಮರ್ಪಕ ನಿರ್ವಹಣೆಗೆ ಈಶ್ವರ ಖಂಡ್ರೆ ಸೂಚನೆ

**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಮಾನವ–ಆನೆ ಸಂಘರ್ಷ ನಿಯಂತ್ರಣಕ್ಕೆ ತೋಡಲಾಗಿರುವ ಆನೆ ಕಂದಕ ಮತ್ತು ಅಳವಡಿಸಿರುವ ತೂಗು ಸೌರಬೇಲಿಯ ಸಮರ್ಪಕ ನಿರ್ವಹಣೆ ಮಾಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ.

ವಿಕಾಸಸೌಧದ ತಮ್ಮ ಕಚೇರಿಯಲ್ಲಿಂದು ಶಾಸಕರುಗಳಾದ ಎ.ಎಸ್. ಪೊನ್ನಣ್ಣ, ಡಾ.ಮಂಥರ ಗೌಡ ಮತ್ತು ದರ್ಶನ್ ಧ್ರುವನಾರಾಯಣ್ ಅವರೊಂದಿಗೆ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಅವರು, ಕೊಡಗಿನಲ್ಲಿ ವನ್ಯಜೀವಿಗಳಿಂದ ಅಮೂಲ್ಯ ಜೀವ ಹಾನಿ ಆಗುತ್ತಿರುವುದು ಆತಂಕದ ವಿಷಯವಾಗಿದ್ದು, ಹಾಲಿ ಇರುವ 422 ಕಿ.ಮೀ ಆನೆ ಕಂದಕ ಮತ್ತು 544 ಕಿ.ಮೀ. ತೂಗು ಸೌರಬೇಲಿಯ ಸಮರ್ಪಕ ದುರಸ್ತಿ ಕಾರ್ಯವನ್ನು ಒಂದು ತಿಂಗಳೊಳಗೆ ಪೂರ್ಣಗೊಳಿಸುವಂತೆ ಸೂಚಿಸಿದರು.

ರಾಜ್ಯದಲ್ಲಿ ವನ್ಯಜೀವಿ–ಮಾನವ ಸಂಘರ್ಷದಲ್ಲಿ ಸಂಭವಿಸುವ ಸಾವುಗಳ ಪೈಕಿ ಶೇ.38ರ?ಷ್ಟು ಕೊಡಗು ಜಿಲ್ಲೆಯಲ್ಲಿ ಆಗುತ್ತಿದ್ದು, ಇದನ್ನು ನಿಯಂತ್ರಿಸಲು ಗಸ್ತು ಹೆಚ್ಚಳ ಮಾಡಬೇಕು. ಆನೆ ಕಾರ್ಯಪಡೆ, ತ್ವರಿತ ಸ್ಪಂದನಾ ಪಡೆ ಸೇರಿದಂತೆ ಮಾನವ ವನ್ಯಜೀವಿ ಸಂಘರ್ಷ ನಿಯಂತ್ರಣ ಘಟಕಗಳನ್ನು ಬಲಪಡಿಸುವಂತೆ ಸೂಚಿಸಿದರು.

ಆನೆ ಸೇರಿದಂತೆ ವನ್ಯಜೀವಿಗಳು ತೋಟಗಳಿಗೆ ಬಂದಾಗ ಅವುಗಳನ್ನು ಕಾಡಿಗೆ ಮರಳಿಸಲು ಸಿಬ್ಬಂದಿ ತ್ವರಿತವಾಗಿ ಸ್ಪಂದಿಸಲು ಹಾಲಿ ಇರುವ 6 ವಾಹನಗಳ ಜೊತೆಗೆ ಈಗಾಗಲೇ 4 ವಾಹನ ಖರೀದಿಸಲಾಗಿದೆ. ಇನ್ನೂ ಹೆಚ್ಚುವರಿಯಾಗಿ 4 ವಾಹನ ಖರೀದಿಸಿ, ಸ್ಥಳೀಯ ಉತ್ಸಾಹಿ ಯುವಕರನ್ನು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯಪಡೆಗೆ ಸೇರ್ಪಡೆ ಮಾಡಿಕೊಂಡು ಹೆಚ್ಚು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಣೆ ಮಾಡುವಂತೆ ಈಶ್ವರ ಖಂಡ್ರೆ ಸೂಚಿಸಿದರು.

ವನ್ಯಜೀವಿಗಳ ಸಂಚಾರ ಮಾಹಿತಿ ರವಾನಿಸಲು, ಅಕ್ರಮ ಮರ ಕಡಿತಲೆ ಮತ್ತು ವನ್ಯಜೀವಿ ಕಳ್ಳಬೇಟೆ ನಿಗ್ರಹಿಸಲು ಬಲಿ?ಠ ನಿಸ್ತುಂತು ಜಾಲ (ವೈರ್‌ಲೆಸ್ ನೆಟ್‌ವರ್ಕ್) ಕಾರ್ಯಾರಂಭಕ್ಕೆ ಎಲ್ಲ ಅಗತ್ಯ ಕ್ರಮ ಕೈಗೊಳ್ಳುವಂತೆಯೂ ಸಚಿವರು ಹಿರಿಯ ಅಧಿಕಾರಿಗಳಿಗೆ ತಿಳಿಸಿದರು.

ಕೊಡಗು ಜಿಲ್ಲೆಯಲ್ಲಿನ ಪ್ರತಿ ವಲಯದಲ್ಲಿರುವ ತೋಟಗಳಲ್ಲಿ ಎಷ್ಟು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ದತ್ತಾಂಶ ಕಲೆ ಹಾಕಿ, ಆಯಾಯ ವಲಯದಲ್ಲಿ ವನ್ಯಜೀವಿಗಳು ಅದರಲ್ಲೂ ಆನೆಗಳು ಜನ ವಸತಿ, ತೋಟಗಳ ಬಳಿ ಬಂದಾಗ ಆ ಕಾರ್ಮಿಕರಿಗೆ ತಕ್ಷಣವೇ ವಾಟ್ಸ್ ಅಪ್ ಮೂಲಕ ಮತ್ತು ಮೈಕ್ ಅಳವಡಿಸಿದ ವಾಹನಗಳ ಮೂಲಕ ಮಾಹಿತಿ ರವಾನಿಸಲು ಕ್ರಮ ವಹಿಸುವಂತೆಯೂ ಸೂಚಿಸಿದರು.

ಮಾರ್ಚ್ ಕೊನೆಯ ವಾರದಿಂದ ಮೇ ತಿಂಗಳವರೆಗೆ ಬಿರು ಬಿಸಿಲು ಇರುವ ಕಾರಣ ಕಾಡಿನಲ್ಲಿ ವನ್ಯಜೀವಿಗಳಿಗೆ ನೀರಿನ ಮತ್ತು ಮೇವಿನ ಕೊರತೆ ಬಾರದಂತೆ ಕ್ರಮ ವಹಿಸಲು ಮತ್ತು ಕಾಡಿನೊಳಗಿರುವ ಜಲಗುಂಡಿಗಳಲ್ಲಿ ಇರುವ ನೀರಿನ ಪ್ರಮಾಣದ ಬಗ್ಗೆ ಸಾರ್ವಜನಿಕರಿಗೆ ಮತ್ತು ಸ್ಥಳೀಯ ಜನ ಪ್ರತಿನಿಧಿಗಳಿಗೆ ಮಾಹಿತಿ ನೀಡಲು ಈಶ್ವರ ಖಂಡ್ರೆ ತಿಳಿಸಿದರು.

ಸ್ಥಳೀಯ ಜನರೊಂದಿಗೆ ಅರಣ್ಯ ಅಧಿಕಾರಿಗಳು ಸೌಹಾರ್ದಯುತವಾಗಿ ವರ್ತಿಸಬೇಕು. ಅವರೊಂದಿಗೆ ಉತ್ತಮ ಬಾಂಧವ್ಯ ಇದ್ದಾಗ, ಅವರ ಸಹಕಾರವೂ ಲಭಿಸುತ್ತದೆ. ಸಮಸ್ಯೆಗಳಿಗೆ ಪರಿಹಾರ ಲಭಿಸುತ್ತದೆ ಎಂದು ಸಚಿವರು ಕಿವಿಮಾತು ಹೇಳಿದರು.

ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕರಾದ ಕುಮಾರ್ ಪು?ಕರ್, ಹಿರಿಯ ಅರಣ್ಯಾಧಿಕಾರಿಗಳಾದ ಮನೋಜ್ ರಾಜನ್, ಮನೋಜ್ ಕುಮಾರ್, ಸೋನಾಲ್ ವ್ರಿಸ್ನಿ ಮತ್ತಿತರರು ಪಾಲ್ಗೊಂಡಿದ್ದರು.





# ಯುಗಾದಿ: ಚೈತ್ರದ ಹೊಸ ಚಿಗುರು : ಕಾಲಚಕ್ರದ ನವ ಪಯಣ

ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳೆಂದರೆ ಕೇವಲ ರಜೆ ಅಥವಾ ಆಚರಣೆಗಳಲ್ಲ; ಅವು ಪ್ರಕೃತಿಯ ಲಯದೊಂದಿಗೆ ಮನುಷ್ಯನ ಬದುಕನ್ನು ಮೇಳೈಸುವ ಕೊಂಡಿಗಳು. ಅಂತಹ ಕೊಂಡಿಗಳಲ್ಲಿ ಅತ್ಯಂತ ಶಕ್ತಿಯುತವಾದುದು 'ಯುಗಾದಿ'. ಹಬ್ಬ. ಮನುಷ್ಯನು ಸೃಷ್ಟಿಸಿದ ಕ್ಯಾಲೆಂಡರ್‌ಗಳು ಕೇವಲ ಅಂಕಿಗಳನ್ನು ಬದಲಾಯಿಸಿದರೆ, ಯುಗಾದಿಯು ಪ್ರಕೃತಿಯೇ ಸಾಕ್ಷಿಯಾಗಿ ತರುವ ಬದಲಾವಣೆ. 'ಯುಗ' ಎಂದರೆ ಒಂದು ಕಾಲಮಾನ, 'ಆದಿ' ಎಂದರೆ ಆರಂಭ. ವಸಂತ ಋತುವಿನ ಆಗಮನದೊಂದಿಗೆ ಚೈತ್ರ ಮಾಸದ ಶುಕ್ಲ ಪಕ್ಷದ ಪಾಡ್ಯಮಿಯಂದು ಈ ಹೊಸ ವರುಷದ ಸಡಗರ ಆರಂಭವಾಗುತ್ತದೆ.

ಧಾರ್ಮಿಕ ಮತ್ತು ದಾರ್ಶನಿಕ ಹಿನ್ನೆಲೆ : ಬ್ರಹ್ಮ ಪುರಾಣದ ಪ್ರಕಾರ, ಈ ಬ್ರಹ್ಮಾಂಡದ ಸೃಷ್ಟಿ ಕಾರ್ಯವು ಪ್ರಾರಂಭವಾಗಿದ್ದೇ ಚೈತ್ರ ಶುದ್ಧ ಪಾಡ್ಯಮಿಯಂದು.

**"ಚೈತ್ರೇ ಮಾಸಿ ಜಗದ್ಬ್ರಹ್ಮಾ ಸಸರ್ಜ ಪ್ರಥಮೇ ಅಹನಿ ।**
**ಶುಕ್ಲಪಕ್ಷೇ ಸಮಗ್ರಂತು ತದಾ ಸೂರ್ಯೋದಯೇ ಸತಿ ॥"**

ಈ ಶ್ಲೋಕವು ಸಾರುವಂತೆ, ಸೂರ್ಯೋದಯದ ಪವಿತ್ರ ಮುಹೂರ್ತದಲ್ಲಿ ಬ್ರಹ್ಮನು ಕಾಲಗಣನೆಯನ್ನು ಪ್ರಾರಂಭಿಸಿದನು. ಸತ್ಯಯುಗವು ಅಂತ್ಯಗೊಂಡು ಹೊಸ ಮನ್ವಂತರದ ಆರಂಭವೂ ಇದೇ ದಿನ ಎಂಬ ನಂಬಿಕೆಯಿದೆ. ಇನ್ನು ತ್ರೇತಾಯುಗದಲ್ಲಿ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರನು ರಾವಣನನ್ನು ಸಂಹರಿಸಿ, ವಿಜಯೋತ್ಸವದೊಂದಿಗೆ ಅಯೋಧ್ಯೆಗೆ ಮರಳಿ ಪಟ್ಟಾಭಿಷೇಕ ಮಾಡಿಸಿಕೊಂಡ ದಿನವೂ ಯುಗಾದಿಯೇ. ಹಾಗಾಗಿ ಇದು ಕೇವಲ ಹೊಸ ವರ್ಷವಲ್ಲ, ಇದು ಧರ್ಮದ ವಿಜಯದ ಸಂಕೇತವೂ ಹೌದು. ಇತಿಹಾಸದ ಪುಟಗಳನ್ನು ತಿರುವಿದಾಗ, ದಕ್ಷಿಣ ಭಾರತದ ಹೆಮ್ಮೆಯ ಅರಸ ಶಾಲಿವಾಹನನು ವಿಕ್ರಮಾದಿತ್ಯನ ಮೇಲೆ ಜಯ ಸಾಧಿಸಿ ತನ್ನದೇ ಆದ 'ಶಾಲಿವಾಹನ ಶಕೆ'ಯನ್ನು ಆರಂಭಿಸಿದ್ದು ಇದೇ ದಿನದಿಂದ. ಇಂದಿಗೂ ನಮ್ಮ ಪಂಚಾಂಗಗಳು ಇದೇ ಶಕೆಯನ್ನು ಆಧರಿಸಿ ಕಾಲ ನಿರ್ಣಯ ಮಾಡುತ್ತವೆ.

**ಪ್ರಕೃತಿಯ ರೂಪಾಂತರ: ವಸಂತನ ಆಗಮನ :** ಯುಗಾದಿಯು ಕೇವಲ ಧಾರ್ಮಿಕ ಹಬ್ಬವಲ್ಲ, ಇದು ಪರಿಸರದ ಹಬ್ಬ. ಶಿಶಿರ ಋತುವಿನಲ್ಲಿ ಎಲೆ ಉದುರಿಸಿ ಬೋಳಾಗಿದ್ದ ಮರಗಳು, ಯುಗಾದಿಯ ವೇಳೆ ಚಿಗುರೊಡೆಯುತ್ತವೆ. ಬಾಹ್ಯ ಜಗತ್ತಿನಲ್ಲಿ ಈ ಬದಲಾವಣೆಗಳು ಅತ್ಯಂತ ಸ್ಪಷ್ಟವಾಗಿರುತ್ತವೆ:

1. **ಮಾವಿನ ಚಿಗುರು:** ಗಾಢ ಹಸಿರು ಮತ್ತು ಕೆಂಪನೆಯ ಮಿಶ್ರಣದ ಮಾವಿನ ಎಳೆ ಚಿಗುರುಗಳು ತೋರಣಗಳಾಗಿ ಮನೆಗಳನ್ನು ಅಲಂಕರಿಸುತ್ತವೆ.
2. **ಬೇವಿನ ಹೂವು:** ಚೈತ್ರದ ಬಿಸಿಲಿಗೆ ತಂಪನ್ನೆರೆಯುವಂತೆ ಬೇವಿನಲ್ಲಿ ಹೂವುಗಳು ಅರಳಿ ಗಾಳಿಯಲ್ಲಿ ಹಿತವಾದ ಕಹಿ ಮಿಶ್ರಿತ ಸುಗಂಧವನ್ನು ಹರಡುತ್ತವೆ.
3. **ಕೋಗಿಲೆಯ ಗಾಯನ:** ವಸಂತನ ದೂತನೆಂದೇ ಕರೆಯಲ್ಪಡುವ ಕೋಗಿಲೆಯ ಕುಹೂ ಕುಹೂ ಗಾನವು ಮುಂಜಾನೆಯ ಮೌನವನ್ನು ಭೇದಿಸಿ ಹೊಸ ಭರವಸೆಯನ್ನು ನೀಡುತ್ತದೆ. ನಿಸರ್ಗದ ಈ ಬದಲಾವಣೆಯು ಮನುಷ್ಯನಿಗೂ ಒಂದು ದೊಡ್ಡ ಪಾಠ ಕಲಿಸುತ್ತದೆ: 'ಹಳೆಯದನ್ನು ಕಳೆದುಕೊಳ್ಳದೆ ಹೊಸತನ್ನು ಪಡೆಯಲು ಸಾಧ್ಯವಿಲ್ಲ'.

**ಆಚರಣೆಯ ವೈವಿಧ್ಯ:** ಭಾರತದ ಏಕತೆಯಲ್ಲಿನ ವಿವಿಧತೆ : ಭಾರತದ ವಿಸ್ತಾರವಾದ ಭೂಪಟದಲ್ಲಿ ಯುಗಾದಿಯನ್ನು ವಿವಿಧ ರೂಪಗಳಲ್ಲಿ ಆಚರಿಸಲಾಗುತ್ತದೆ. ಹೆಸರುಗಳು ಬೇರೆಯಾದರೂ, ಅದರ ಹಿಂದಿನ ಆಶಯ ಒಂದೇ.

* ಕರ್ನಾಟಕ, ಆಂಧ್ರ ಮತ್ತು ತೆಲಂಗಾಣ: ಈ ರಾಜ್ಯಗಳಲ್ಲಿ 'ಯುಗಾದಿ' ಎಂಬ ಹೆಸರಿನಲ್ಲಿ ಆಚರಿಸಲಾಗುತ್ತದೆ. ಮನೆಗಳನ್ನು ಸ್ವಚ್ಛಗೊಳಿಸಿ, ಮಾವಿನ ಎಲೆಗಳ ತೋರಣ ಕಟ್ಟಿ, ಬೇವು-ಬೆಲ್ಲ ಹಂಚುವುದು ಇಲ್ಲಿನ ವಿಶೇಷ.
* ಮಹಾರಾಷ್ಟ್ರ ಮತ್ತು ಗೋವಾ: ಇಲ್ಲಿ ಇದನ್ನು 'ಗುಡಿ ಪಾಡ್ಯ' ಎಂದು ಕರೆಯುತ್ತಾರೆ. ಮನೆಯ ಮುಂದೆ ಒಂದು ಕೋಲಿಗೆ ರೇಷ್ಮೆ ಬಟ್ಟೆ, ಹೂವಿನ ಹಾರ ಮತ್ತು ತಾಮ್ರದ ಬಿಂದಿಗೆಯನ್ನು ಕಟ್ಟಿ 'ಗುಡಿ'ಯನ್ನು ಏರಿಸುತ್ತಾರೆ. ಇದು ವಿಜಯ ಮತ್ತು ಸಮೃದ್ಧಿಯ ಸಂಕೇತ.
* ಕೇರಳ: ಮಲಯಾಳಿಗಳು ಇದನ್ನು 'ವಿಷು' ಎಂದು ಆಚರಿಸುತ್ತಾರೆ. ಮುಂಜಾನೆ ಎದ್ದ ತಕ್ಷಣ ಕಣ್ಣು ಮುಚ್ಚಿಕೊಂಡೇ ಬಂದು 'ವಿಷುಕಣಿ' (ದೇವರೆದುರು ಜೋಡಿಸಿದ ಕನ್ನಡಿ, ಹಣ್ಣುಗಳು, ಧಾನ್ಯ ಮತ್ತು ಚಿನ್ನ) ನೋಡುವುದು ಇವರ ವಿಶಿಷ್ಟ ಸಂಪ್ರದಾಯ.
* ಪಂಜಾಬ್ ಮತ್ತು ಉತ್ತರ ಭಾರತ: ಸಿಖ್ಖರು ಇದನ್ನು 'ಬೈಸಾಖಿ' ಎಂದು ಸುಗ್ಗಿ ಹಬ್ಬವಾಗಿ ಆಚರಿಸಿದರೆ, ಕಾಶ್ಮೀರದ ಪಂಡಿತರು 'ನವ್ರೇಹ್' ಎಂದು ಕರೆಯುತ್ತಾರೆ.

ಆಚರಣೆಯ ವಿವರ: ಅಭ್ಯಂಗದಿಂದ ಪಂಚಾಂಗದವರೆಗೆ :

ಯುಗಾದಿಯ ದಿನವು ಮುಂಜಾನೆ ಸೂರ್ಯೋದಯಕ್ಕೂ ಮುನ್ನವೇ ಆರಂಭವಾಗುತ್ತದೆ.

**ಅಭ್ಯಂಗ ಸ್ನಾನ:** ತಲೆಗೆ ಎಣ್ಣೆ ಹಚ್ಚಿ ಸ್ನಾನ ಮಾಡುವುದು (ಅಭ್ಯಂಗ ಸ್ನಾನ) ದೇಹ ಮತ್ತು ಮನಸ್ಸಿನ ಶುದ್ಧೀಕರಣದ ಸಂಕೇತ. ಇದು ವರ್ಷದ ಆರಂಭದಲ್ಲಿ ಆರೋಗ್ಯವನ್ನು ಕಾಪಾಡಿಕೊಳ್ಳುವ ಒಂದು ವೈಜ್ಞಾನಿಕ ಕ್ರಮವೂ ಹೌದು.

**ದೈವ ಪ್ರಾರ್ಥನೆ:** ಮನೆಯ ದೇವರ ಮುಂದೆ ಕುಳಿತು ಹೊಸ ವರ್ಷದ ಸಂಕಲ್ಪ ಮಾಡುವುದು.

**ಬೇವು-ಬೆಲ್ಲ ಸವಿಯುವುದು:** ಇದು ಯುಗಾದಿಯ ಅತ್ಯಂತ ಪ್ರಮುಖ ಭಾಗ. ಬೇವು ಕಹಿಯ ಸಂಕೇತ, ಬೆಲ್ಲ ಸಿಹಿಯ ಸಂಕೇತ. ಜೀವನವು ಕೇವಲ ಸುಖವಲ್ಲ ಅಥವಾ ಕೇವಲ ದುಃಖವಲ್ಲ; ಇದು ಎರಡರ ಸಮತೋಲನ ಎಂಬ ದಾರ್ಶನಿಕ ಸತ್ಯವನ್ನು ಇದು ಸಾರುತ್ತದೆ.

**"ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ ।**
**ಸರ್ವಾರಿಷ್ಟವಿನಾಶಾಯ ನಿಂಬಕಂದಳ ಭಕ್ಷಣಂ ॥"**

ಎಂಬ ಶ್ಲೋಕವನ್ನು ಹೇಳುತ್ತಾ ಬೇವನ್ನೂ ಸ್ವೀಕರಿಸಲಾಗುತ್ತದೆ.

**ಪಂಚಾಂಗ ಶ್ರವಣ:** ಸಂಜೆ ದೇವಸ್ಥಾನ ಅಥವಾ ಮನೆಯಲ್ಲಿ ಹಿರಿಯರ ಸಮ್ಮುಖದಲ್ಲಿ ಹೊಸ ಪಂಚಾಂಗವನ್ನು ಓದಲಾಗುತ್ತದೆ. ವರ್ಷದ ಮಳೆ-ಬೆಳೆ, ಗ್ರಹಗತಿಗಳ ಪ್ರಭಾವ ಮತ್ತು ನಮ್ಮ ರಾಶಿ ಭವಿಷ್ಯವನ್ನು ಕೇಳುವುದರ ಮೂಲಕ ಮಾನಸಿಕವಾಗಿ ವರ್ಷದ ಸವಾಲುಗಳನ್ನು ಎದುರಿಸಲು ಸಿದ್ಧವಾಗುತ್ತೇವೆ.

**ಕನ್ನಡ ಸಾಹಿತ್ಯದ ಕನ್ನಡಿಯಡಿ ಯುಗಾದಿ**

ಕನ್ನಡ ಸಾಹಿತ್ಯ ಲೋಕದಲ್ಲಿ ಯುಗಾದಿಯು ಕವಿಗಳಿಗೆ ನಿರಂತರ ಸ್ಫೂರ್ತಿಯ ಸೆಲೆ. ವರಕವಿ ದ.ರಾ. ಬೇಂದ್ರೆಯವರು "ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ" ಎಂದು ಹಾಡಿದಾಗ, ಅದು ಕಾಲದ ನಿರಂತರತೆಯನ್ನು ನೆನಪಿಸುತ್ತದೆ. ಇದು ಪ್ರತಿ ಯುಗಾದಿಯಲ್ಲೂ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಲೇ ಇರುತ್ತದೆ .

ಇನ್ನು ದಾರ್ಶನಿಕ ಕವಿ ಡಿ.ವಿ. ಗುಂಡಪ್ಪನವರು ತಮ್ಮ 'ಮಂಕುತಿಮ್ಮನ ಕಗ್ಗ'ದಲ್ಲಿ ಯುಗಾದಿಯ ಆಶಯವನ್ನು ಜೀವನದ ತತ್ವಕ್ಕೆ ಹೋಲಿಸಿದ್ದಾರೆ. ಬದುಕು ಕಹಿಯಾದ ಕಷಾಯವೂ ಹೌದು, ಸಿಹಿಯಾದ ಹಾಲಿನ ಕೆನೆಯೂ ಹೌದು. ಅದನ್ನು 'ಹದವರಿತು ಉಣಬಲ್ಲವನೇ' ಜೀವನದ ನಿಜವಾದ ರಸಿಕ ಎಂಬುದು ಡಿವಿಜಿಯವರ ಅಭಿಮತ. ಅವರ ದೃಷ್ಟಿಯಲ್ಲಿ ಯುಗಾದಿ ಎಂದರೆ ಹಳೆಯ ತತ್ವದ ಸಾರವನ್ನು ಹೊಸ ರೂಪದಲ್ಲಿ ಮರುಜನ್ಮ ನೀಡುವುದು. ಡಿ.ವಿ. ಗುಂಡಪ್ಪನವರ (ಡಿವಿಜಿ) ಅಮರಕೃತಿ 'ಮಂಕುತಿಮ್ಮನ ಕಗ್ಗ' ದಲ್ಲಿ ಜೀವನದ ದರ್ಶನವನ್ನು ಬೋಧಿಸುವ ಕೃತಿಯಾಗಿದ್ದು, ಇದರಲ್ಲಿ 'ಯುಗಾದಿ' ಹಬ್ಬದ ನೇರ ಉಲ್ಲೇಖಕ್ಕಿಂತ ಹೆಚ್ಚಾಗಿ, ಆ ಹಬ್ಬವು ಸಾರುವ 'ಹೊಸತನ' ಮತ್ತು *'ಜೀವನ ಚಕ್ರ'*ದ ತತ್ವಗಳನ್ನು ಅತ್ಯಂತ ಮಾರ್ಮಿಕವಾಗಿ ವಿಶ್ಲೇಷಿಸಲಾಗಿದೆ.

ಕಗ್ಗದ ದೃಷ್ಟಿಯಲ್ಲಿ ಯುಗಾದಿ ಎಂದರೆ ಕೇವಲ ತಿಥಿ ಬದಲಾವಣೆಯಲ್ಲ, ಅದು ಮನಸ್ಸಿನ ಪರಿವರ್ತನೆ. ಈ ಕುರಿತು ಕೆಲವು ಪ್ರಮುಖ ಅಂಶಗಳು ಇಲ್ಲಿವೆ:

1. ಹಳೆಯದು ಉದುರಿ ಹೊಸತು ಬರುವ ಪ್ರಕ್ರಿಯೆ
ಯುಗಾದಿಯ ಸಮಯದಲ್ಲಿ ಪ್ರಕೃತಿಯಲ್ಲಿ ಎಲೆಗಳು ಉದುರಿ ಹೊಸ ಚಿಗುರು ಬರುತ್ತದೆ. ಇದನ್ನೇ ಡಿವಿಜಿಯವರು ಬದುಕಿನ ಸಂಧ್ಯಾಕಾಲ ಮತ್ತು ಹೊಸ ಪೀಳಿಗೆಯ ಆಗಮನಕ್ಕೆ ಹೋಲಿಸುತ್ತಾರೆ. ಒಂದು ಕಗ್ಗದಲ್ಲಿ ಅವರು ಹೀಗೆ ಹೇಳುತ್ತಾರೆ:

**ಹಳೆಯ ಗಿಡದಲಿ ಹೊಸತು ಹೂ ನಗುತ ನಲಿದಿರಲು ।**
**ಹಳೆಯ ಬೇರಿನೆ ರಸವದಕೆ ಪುಷ್ಟಿಯನು ತರಲು ॥**
**ಹಳೆಯ ತತ್ವದ ಸಾರ ಹೊಸ ರೂಪದಲಿ ಬರಲು ।**
**ಹೊಸತು ಹಳೆಯದರ ಗಂಟು – ಮಂಕುತಿಮ್ಮ ॥"**

ಇಲ್ಲಿ ಯುಗಾದಿಯ ಸಾರವಿದೆ. ಹಳೆಯ ಬೇರಿನ ರಸದಿಂದಲೇ ಹೊಸ ಹೂವು ಅರಳುವಂತೆ, ನಮ್ಮ ಹಳೆಯ ಸಂಸ್ಕೃತಿ ಮತ್ತು ಅನುಭವಗಳ ಮೇಲೆ ಹೊಸ ವರ್ಷದ ಬದುಕು ರೂಪಿತವಾಗಬೇಕು ಎಂಬುದು ಇದರ ಆಶಯ.

2. ಬೇವು-ಬೆಲ್ಲದ ಸಮಚಿತ್ತ (ಸ್ಥಿತಪ್ರಜ್ಞತೆ)
ಯುಗಾದಿಯ ಮೂಲ ಮಂತ್ರವಾದ 'ಬೇವು-ಬೆಲ್ಲ' ಅಥವಾ ಸುಖ-ದುಃಖಗಳ ಸಮಾನ ಸ್ವೀಕಾರವು ಕಗ್ಗದ ಉದ್ದಕ್ಕೂ ಹಾಸುಹೊಕ್ಕಾಗಿದೆ. ಡಿವಿಜಿಯವರು ಬದುಕನ್ನು ಒಂದು ಪಾನಕಕ್ಕೆ ಹೋಲಿಸುತ್ತಾರೆ:

**ಬದುಕು ಸಕ್ಕರೆಯಚ್ಚು, ಬದುಕು ಬೇವಿನ ಕಷಾಯ ।**
**ಬದುಕು ಹಾಲಿನ ಕೆನೆ, ಬದುಕು ಮೊಸರು ॥**
**ಹದವರಿತು ಉಣಬಲ್ಲವಗೆ ಬದುಕು ಸವಿಜೇನು ।**
**ಪದವಿಟ್ಟು ಬಾಳದವಗೆ – ಮಂಕುತಿಮ್ಮ ॥"**

ಯುಗಾದಿಯ ದಿನ ನಾವು ಬೇವು-ಬೆಲ್ಲ ತಿನ್ನುವಾಗ ಪಠಿಸುವ ಶ್ಲೋಕದ (ಶತಾಯುರ್ವಜ್ರದೇಹಾಯ...) ಅರ್ಥವೂ ಇದೇ ಆಗಿದೆ. ಬದುಕಿನ ಕಹಿಯನ್ನು (ಬೇವು) ಮತ್ತು ಸಿಹಿಯನ್ನು (ಬೆಲ್ಲ) ಸಮಾನವಾಗಿ ಸ್ವೀಕರಿಸುವವನೇ ಜಾಣ ಎಂಬ ಕಗ್ಗದ ಸಂದೇಶ ಯುಗಾದಿಯ ಆಚರಣೆಗೆ ಪೂರಕವಾಗಿದೆ.

3. **ಕಾಲದ ಅನಿವಾರ್ಯತೆ ಮತ್ತು ಬದಲಾವಣೆ"** ಯುಗಾದಿ ಎಂದರೆ ಕಾಲಗಣನೆಯ ಆರಂಭ. ಕಗ್ಗವು ಕಾಲವನ್ನು 'ಮಹಾಕಾಲ' ಎಂದು ಕರೆಯುತ್ತದೆ. ಪ್ರತಿ ಯುಗಾದಿಯೂ ನಮಗೆ ನೆನಪಿಸುವುದು ಏನೆಂದರೆ, ಕಾಲವು ಯಾರಿಗಾಗಿಯೂ ಕಾಯುವುದಿಲ್ಲ, ಬದಲಾವಣೆ ಜಗದ ನಿಯಮ.

**ಸಂಕ್ಷಿಪ್ತವಾಗಿ ಹೇಳುವುದಾದರೆ:**

ಮಂಕುತಿಮ್ಮನ ಕಗ್ಗದಲ್ಲಿ "ಇಂದು ಯುಗಾದಿ ಹಬ್ಬ" ಎಂಬ ವರ್ಣನೆಗಿಂತಲೂ, ಯುಗಾದಿ ಹಬ್ಬವು ಮನುಕುಲಕ್ಕೆ ನೀಡುವ 'ಸಮತ್ವ' ಮತ್ತು 'ನವಚೈತನ್ಯ'ದ ಸಂದೇಶಗಳು ದಾರ್ಶನಿಕ ನೆಲೆಯಲ್ಲಿ ವ್ಯಕ್ತವಾಗಿವೆ. ಹಳೆಯದನ್ನು ಗೌರವಿಸುತ್ತಲೇ ಹೊಸದನ್ನು ಸ್ವಾಗತಿಸುವ 'ಕಗ್ಗ'ದ ನಿಲುವು ಯುಗಾದಿಯ ನಿಜವಾದ ಆಶಯವಾಗಿದೆ.

**ಕೃಷಿ ಸಂಸ್ಕೃತಿ ಮತ್ತು ಸುಗ್ಗಿ**

ರೈತನ ಪಾಲಿಗೆ ಯುಗಾದಿ ಹೊಸ ಆರ್ಥಿಕ ವರ್ಷದ ಆರಂಭ. ಭೂಮಿಯನ್ನು ಹದಗೊಳಿಸಿ, ಬೀಜ ಬಿತ್ತಲು ಸಿದ್ಧತೆ ನಡೆಸುವ ಸಮಯ. ಗ್ರಾಮೀಣ ಭಾಗದಲ್ಲಿ ಯುಗಾದಿಯ ಮರುದಿನ 'ವರುಷದ ತೊಡಕು' ಎಂದು ಆಚರಿಸುತ್ತಾರೆ. ಬೇಟೆ, ಕ್ರೀಡೆ ಮತ್ತು ಸಾಮೂಹಿಕ ಭೋಜನಗಳ ಮೂಲಕ ಸಮುದಾಯದ ಬಾಂಧವ್ಯವನ್ನು ಗಟ್ಟಿಗೊಳಿಸಲಾಗುತ್ತದೆ. ಇದು ಕೇವಲ ವೈಯಕ್ತಿಕ ಹಬ್ಬವಲ್ಲ, ಇದು ಸಾಮಾಜಿಕ ಸಾಮರಸ್ಯದ ಹಬ್ಬ.

ಯುಗಾದಿಯು ನಮಗೆ ಕಳಿಸಿಕೊಡುವ ಅತಿದೊಡ್ಡ ಪಾಠವೆಂದರೆ 'ಸ್ಥಿತಪ್ರಜ್ಞತೆ'. ಬೇವಿನ ಕಹಿಯನ್ನು ಹೇಗೆ ನಗುನಗುತ್ತಾ ಸ್ವೀಕರಿಸುತ್ತೇವೆಯೋ, ಬದುಕಿನ ಸಂಕಷ್ಟಗಳನ್ನೂ ಹಾಗೆಯೇ ಎದುರಿಸಬೇಕು. ಪ್ರತಿ ಯುಗಾದಿಯೂ ನಮಗೆ ಹೊಸದನ್ನು ಕಲಿಯುವ, ಹಳೆಯ ತಪ್ಪುಗಳನ್ನು ತಿದ್ದಿಕೊಳ್ಳುವ ಮತ್ತು ಪ್ರಕೃತಿಯನ್ನು ಪ್ರೀತಿಸುವ ಅವಕಾಶವನ್ನು ನೀಡುತ್ತದೆ. ಈ ಹೊಸ ವರ್ಷವು ಎಲ್ಲರ ಬದುಕಿನಲ್ಲಿ ಜ್ಞಾನದ ಬೆಳಕನ್ನು ಮತ್ತು ಶಾಂತಿಯನ್ನು ತರಲಿ.

| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com











# ನವ ಯುಗದ,ಆದಿ ಈ `ಯುಗಾದಿ'..!



ಪ್ರಶಾಂತ್ ಎಂ. ಕಂಬಳಿ

ಹೋಳಿಹಬ್ಬದ ರಂಗುಗಳು ಮಾಸಲಾರಂಭಿಸುತ್ತಿದ್ದಂಯೇ, ಪ್ರಕೃತಿಯ ಮರ -ಗಿಡ, ಹೂ - ಬಳ್ಳಿಗಳಲ್ಲಿ ಚಿಗುರೆಲೆಗಳು ಕಾಣಿಸಿಕೊಂಡು ಅವು ನವಜೀವನವನ್ನು ಪಡೆದುಕೊಳ್ಳುವುದರ ಮೂಲಕ ವಸಂತಾಗಮನವನ್ನು ಸಾರುತ್ತವೆ. ಹಿಂದೂ ಧರ್ಮದ ಪ್ರಕಾರ, ಸೃಷ್ಟಿಕರ್ತನಾದ ಬ್ರಹ್ಮನು ತನ್ನ ಸೃಷ್ಟಿಕಾರ್ಯವನ್ನು ಚೈತ್ರಮಾಸದ ಈ ತಿಂಗಳಿನಲ್ಲಿ (ಮಾರ್ಚ್ - ಏಪ್ರಿಲ್) ಆರಂಭಿಸಿದನೆಂದು ನಂಬಲಾಗಿದೆ.

ಹಿಂದೂ ಶಾಸ್ತ್ರಗಳ ಪ್ರಕಾರ, ಈ ದಿನದಂದು ಬ್ರಹ್ಮನು ಜೀವಿಗಳ ಸೃಷ್ಟಿಗೆ ತೊಡಗಿದನು ಎಂಬುದು ಜನಜನಿತ. ಹಾಗೂ ಈ ಯುಗಾದಿಯನ್ನು "ಹಿಂದೂಗಳ ಹೊಸ ವರ್ಷ" ಎನ್ನಲಾಗುತ್ತದೆ.

ದಕ್ಷಿಣ ಭಾರತದೆಲ್ಲೆಡೆ ಯುಗಾದಿಯನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಮರಗಿಡಗಳು ಹಣ್ಣು ಹೂವುಗಳನ್ನು ನೀಡಲು ಪ್ರಾರಂಭಿಸಿದಂತೆ ಹೊಸ ಜೀವನದ ಆರಂಭಕ್ಕೆ ಯುಗಾದಿ ಕಾರಣವಾಗಿದೆ ಎಂಬುದು ಇದರ ಹಿಂದಿರುವ ನಂಬಿಕೆಯಾಗಿದೆ.

**ಆಚರಣೆ :** ಯುಗಾದಿಯಂದು ಮನೆಗಳನ್ನು ಸ್ವಚ್ಛಗೊಳಿಸಿ, ಬಣ್ಣ ಬಣ್ಣದ ರಂಗೋಲಿಗಳನ್ನು ಹಾಕಿ, ಮಾವಿನ ಎಲೆಗಳ ತೋರಣಗಳಿಂದ ಅಲಂಕರಿಸಿ ಬೆಳಿಗ್ಗೆ ಬೇಗನೆ ಎದ್ದು ಎಣ್ಣೆ ಸ್ನಾನ ಮಾಡಿ ಹೊಸ ಬಟ್ಟೆಗಳನ್ನು ಧರಿಸುವುದು ಒಂದು ಪ್ರಮುಖ ಆಚರಣೆ. ಈ ದಿನದ ವಿಶೇಷತೆಯೆಂದರೆ ?ಬೇವು - ಬೆಲ್ಲ" ಸೇವಿಸುವುದು. ಬೇವು ಕಹಿಯನ್ನು ಸೂಚಿಸಿದರೆ, ಬೆಲ್ಲ ಸಿಹಿಯನ್ನು ಸೂಚಿಸುತ್ತದೆ. ಮನುಷ್ಯನ ಜೀವನದಲ್ಲಿ ಸಿಹಿ ಮತ್ತು ಕಹಿ ಎರಡೂ ಇದ್ದೇ ಇರುತ್ತವೆ ಎಂಬುದನ್ನು ಇದು ಸಾರುತ್ತದೆ.

ಕೆಲವೊಂದು ಕಡೆಗೆ ಈ ಹಬ್ಬದಂದು ಪಂಚಾಂಗ ಶ್ರವಣ ಮಾಡುವ ಪದ್ಧತಿ ಕೂಡ ಇದೆ. ಹೊಸ ವರ್ಷದ ಭವಿಷ್ಯ, ಫಲಿತಾಂಶಗಳನ್ನು ಕೇಳುವುದು ಈ ಆಚರಣೆಯ ಭಾಗವಾಗಿದೆ.

ಮನೆಗಳಲ್ಲಿ ಹೋಳಿಗೆ (ಒಬ್ಬಟ್ಟು), ಶಾವಿಗೆ ಪಾಯಸ, ಮುಂತಾದ ಸಾಂಪ್ರದಾಯಿಕ ಆಹಾರಗಳನ್ನು ತಯಾರಿಸಿ ಕುಟುಂಬದವರೊಂದಿಗೆ ಹಂಚಿಕೊಳ್ಳುತ್ತಾರೆ.

ಯುಗಾದಿ ಹಬ್ಬವು ಹೊಸ ಆಶೆಗಳು, ಸಂತೋಷ ಮತ್ತು ಹೊಸ ಆರಂಭಗಳ ಸಂಕೇತವಾಗಿದೆ. ಇದು ನಮ್ಮ ಜೀವನದಲ್ಲಿ ಹೊಸ ಗುರಿಗಳನ್ನು ಹೊಂದಿ, ಉತ್ತಮ ಭವಿಷ್ಯದ ಕಡೆಗೆ ಹೆಜ್ಜೆ ಇಡುವಂತೆ ಪ್ರೇರೇಪಿಸುತ್ತದೆ.

ನಮ್ಮ ಗ್ರಾಮೀಣ ಭಾಗಗಳಲ್ಲಿ ಯುಗಾದಿ ದಿನದಂದು ರೈತರು ಎತ್ತುಗಳನ್ನು ಸಿಂಗಾರ ಮಾಡಿ, ಭೂಮಿ ತಾಯಿಗೆ ಪೂಜೆ ಮಾಡಿ ಹೊನ್ನಾರು (ಗಳೆ/ಕುಂಟೆ) ಹೂಡುವುದು ವಿಶೇಷ ಸಂಪ್ರದಾಯ.

ಸಾಮಾನ್ಯವಾಗಿ ಬಯಲು ಸೀಮೆಯ ಜಿಲ್ಲೆಗಳಲ್ಲಿ ಮಹತ್ವ ಪಡೆದುಕೊಂಡಿರುವ ಜಾನಪದೀಯ ವಿಶಿಷ್ಟ ಹೊನ್ನಾರು ಆಚರಣೆಯಾಗಿದೆ.

ಹೊನ್ನಾರು ಹಿನ್ನೆಲೆಯಲ್ಲಿ ಹಬ್ಬದ ದಿನ ಬೆಳ್ಳಂಬೆಳಗ್ಗೆ ವ್ಯವಸಾಯದ ಸಂಗಾತಿಗಳಾದ ನೇಗಿಲು, ನಗ, ಜಾನುವಾರುಗಳು ಹಾಗೂ ಇತರ ಸಲಕರಣೆಗಳನ್ನು ತೊಳೆದು ರೈತರು ಅವುಗಳನ್ನು ಹೂವುಳಿಂದ ಅಲಂಕರಿಸಿ, ಜಾನುವಾರುಗಳು ಮತ್ತು ಕೃಷಿ ಸಲಕರಣೆಗಳಿಗೆ ಸಾಮೂಹಿಕವಾಗಿ ಪೂಜೆ ಸಲ್ಲಿಸಿ ರೈತರು ತಮ್ಮ ತಮ್ಮ ಜಮೀನಿನಲ್ಲಿ ಮೊದಲ ಉಳುಮೆ ಮಾಡುತ್ತಾರೆ. ಉತ್ತಮ ಮಳೆ - ಬೆಳೆ ಆಗಲಿ, ಎಲ್ಲರಿಗೂ ಒಳ್ಳೆಯ ಆರೋಗ್ಯ, ಸುಖ - ಸಮೃದ್ಧಿ ಸಿಗಲಿ ಎಂದು ಭೂ ತಾಯಿ ಮತ್ತು ಪ್ರಕೃತಿಗೆ ನಮಿಸಿ ಪ್ರಾರ್ಥಿಸುತ್ತಾರೆ.



**ಎಲ್ಲರ ಬಾಳಿನಲಿ**
**ಬೇವಿನ ಕಹಿ ಕಡಿಮೆಯಾಗಿ**
**ಬೆಲ್ಲದ ಸಿಹಿ ಹೆಚ್ಚಾಗಲಿ...**

# ಬೇವು ಬೆಲ್ಲದ ಸಂಭ್ರಮವೇ ಯುಗಾದಿ..!



| ಪುಷ್ಪ ಪ್ರಸಾದ್

ಚೈತ್ರ ಮಾಸದಲ್ಲಿ ಬರುವ ಮೊದಲ ಹಬ್ಬ ಯುಗಾದಿ, ಹಿಂದೂ ಸಂಪ್ರದಾಯದ ಹೊಸ ವರ್ಷ ಯುಗಾದಿ ಹಬ್ಬ. ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ. ಹೊಸ ವರುಷಕ್ಕೆ ಹೊಸದು ಹೊಸದು ತರುತ್ತಿದೆ. ಈ ಯುಗಾದಿ ಹಬ್ಬ ನಮಗೆ ಮಾತ್ರವಲ್ಲ, ಪ್ರಕೃತಿಗೊ ಸಹ ಹೊಸ ವರುಷವಾಗಿರುತ್ತದೆ. ಚೈತ್ರ ಮಾಸದಿಂದ ಪ್ರಾರಂಭವಾಗುವ. ಈ ಮಾಸದಲ್ಲಿ ಮರ ಗಿಡಗಳು ಚಿಗರೊಡೆದು ಪ್ರಕೃತಿಯೂ ಅಚ್ಚ ಹಸಿರಿನಿಂದ ಕಂಗೊಳಿಸುತ್ತದೆ. ಬೇವು ಬೇಲ್ಲದ ಸಂಭ್ರಮವೇ ಈ ಯಗಾದಿ ಹಬ್ಬ ಮನೆಯಂಗಳದಲ್ಲಿ ಸಗಣಿ ಸಾರಿಸಿ ರಂಗೋಲಿ ಬಿಡಿಸಿ ಬಣ್ಣ ಮತ್ತು ಹೂವುಗಳಿಂದ ಅಲಂಕರಿಸಲಾಗುತ್ತದೆ. ಮನೆಯ ಹೊಸ್ತಿಲು ಮತ್ತು ದೇವರ ಕೋಣೆಯನ್ನು ಬೇವು ಮಾವಿನ ತಳಿರು ತೋರಣ ಮತ್ತು ಹೂವುಗಳಿಂದ ಅಲಂಕರಿಸುತ್ತಾರೆ.

- ಯುಗಾದಿ ಎಂಬ ಪದವು ಉಗಾದಿ ಪದದಿಂದ ಬಂದಿದೆ. ಪ್ರಾಥಮಿಕವಾಗಿ, ಯುಗಾದಿ ಎಂಬ ಪದವು ಎರಡು ಶ್ರೇಷ್ಠ ಪದಗಳ ಸಂಯೋಜನೆಯಾಗಿದೆ: ಯುಗ ಅಂದರೆ ಆಯಸ್ಸು ಅಥವಾ ಅವಧಿ ಮತ್ತು ಆದಿ ಅಂದರೆ ಯಾವುದೋ ಪ್ರಾರಂಭ. ಆದ್ದರಿಂದ, ಯುಗಾದಿ ಎಂದರೆ ಹೊಸ ವರ್ಷದ ಮೂಲ. ಈ ಹಬ್ಬವನ್ನು ಆಚರಿಸುವ ಜನರು ಬ್ರಹ್ಮ ದೇವರ ಮಹತ್ವವನ್ನು ಗುರುತಿಸಲು ಈ ಹಬ್ಬವು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದೆ. ಬ್ರಹ್ಮ ದೇವನು ಯುಗಯುಗಗಳ ಸೃಷ್ಟಿಕರ್ತನಾಗಿರುತ್ತಾನೆ ಮತ್ತು ಹಬ್ಬದ ದಿನದಂದು ಪೂಜಿಸಲ್ಪಡುತ್ತಾನೆ.
- ಹಿಂದೂ ಪುರಾಣಗಳ ಪ್ರಕಾರ, ಬ್ರಹ್ಮ ದೇವರು ಯುಗಾದಿಯಂದು ಬ್ರಹ್ಮಾಂಡದ ಸೃಷ್ಟಿಯನ್ನು ಪ್ರಾರಂಭಿಸಿದನು ಎನ್ನುವ ಇತಿಹಾಸವಿದೆ. ದುರ್ಗಾ ದೇವಿಯ ಒಂಬತ್ತು ರೂಪಗಳನ್ನು ಆಚರಿಸುವ ಒಂಬತ್ತು ದಿನಗಳ ಉತ್ಸವದ ಮೊದಲ ದಿನ - ಚೈತ್ರ ನವರಾತ್ರಿಯು ಈ ದಿನದಿಂದ ಪ್ರಾರಂಭವಾಗುತ್ತದೆ. ಭಗವಾನ್ ಬ್ರಹ್ಮನಿಂದ ಮಾನವಕುಲದ ಸೃಷ್ಟಿಯ ಪ್ರಾರಂಭವನ್ನು ಗುರುತಿಸಲು ಯುಗಾದಿ ಎಂದು ಈ ದಿನವನ್ನು ಆಚರಿಸಲಾಗುತ್ತದೆ. 12 ನೇ ಶತಮಾನದಲ್ಲಿ, ಭಾರತೀಯ ಗಣಿತಜ್ಞ ಭಾಸ್ಕರಾಚಾರ್ಯರು ಯುಗಾದಿಯನ್ನು ಹೊಸ ವರ್ಷದ ಆರಂಭ, ಹೊಸ ತಿಂಗಳು ಮತ್ತು ಹೊಸ ದಿನ ಎಂದು ಹೇಳಿದ್ದಾರೆ.
- ಯುಗಾದಿಯಂದು ಬ್ರಹ್ಮ ದೇವರನ್ನು, ಗಣೇಶ, ಲಕ್ಷ್ಮಿ ದೇವತೆ, ಮಾತಾ ಪಾರ್ವತಿ, ವಿಷ್ಣು ಮತ್ತು ರಾಮನಂತಹ ಇತರ ದೇವರುಗಳೊಂದಿಗೆ ಪೂಜಿಸಲಾಗುತ್ತದೆ. ಯುಗಾದಿ ಪವಿತ್ರವಾದ ದಿನ. ನಮಗೆ ಎರಡು ಶಕೆಗಳಿವೆ. ಶಾಲಿವಾಹನ ಶಕೆ, ವಿಕ್ರಮ ನಾಮಶಕೆ, ಎರಡು ರೀತಿಯ ಶಕೆಗಳನ್ನು ಉಪಾಸನೆ ಮಾಡುತ್ತೇವೆ. ನಮ್ಮ ದಕ್ಷಿಣ ಭಾರತದಲ್ಲಿ ಶಾಲಿವಾಹನ ಶಕೆ ಆಚರಣೆ ಇದ್ದರೆ ಉತ್ತರ ಭಾರತದ ಕಡೆ ವಿಕ್ರಮನಾಮಶಕೆ ಆಚರಿಸುತ್ತಾರೆ. ನಾವು ಸಂಕಲ್ಪ ಮಾಡು ವಾಗ, ಪ್ರವರದಲ್ಲಿ, ? ಶುಭೆ -ಶೋಭನೇ- ಮುಹೂರ್ತೇ ಆದ್ಯ ಬ್ರಹ್ಮಣ ದ್ವಿತೀಯ ಪರಾರ್ಧೇ- ಶ್ವೇತ ವರಾಹ ಕಲ್ಪೇ -ವೈವಸ್ವತ ಮನ್ಮಂತರೇ- ಕಲಿಯುಗೇ, ಪ್ರಥಮಪಾದೇ, ಜಂಬೂದ್ವೀಪೇ, ಭಾರತವರ್ಷೇ, ಭರತಖಂಡೇ, ದಂಡ ಕಾರಣ್ಯೇ, ಗೋದಾವರ್ಯಾ: ದಕ್ಷಿಣ ತೀರೇ, ಶಾಲಿವಾಹನಶಕೇ, ಬೌದ್ಧಾವತಾರೇ, ರಾಮ ಕ್ಷೇತ್ರೇ ಅಸ್ಮಿನ್ ವರ್ತಮಾನೇ ವ್ಯವಹಾರಿಕೇ ಚಾಂದ್ರಮಾನೇನ ಪ್ರಭವಾದಿ ಷಷ್ಠಿಸಂವತ್ಸರೇ, ಈ ರೀತಿ ಸಂಕಲ್ಪ ಪ್ರವರಗಳಲ್ಲಿ, ಪೂಜೆ ಶುಭ ಕಾರ್ಯಗಳಲ್ಲಿ ಹೇಳಿಕೊಂಡೇ ಮಾಡುತ್ತೇವೆ. ಮೊದಲ ಐತಿಹಾಸಿಕ ಸಾಮ್ರಾಜ್ಯದ ಅರಸ ?ಶಾಲಿವಾಹನ? ತನ್ನ ಆಡಳಿತಾವಧಿಯಲ್ಲಿ ಧರ್ಮವನ್ನು ರಕ್ಷಣೆ ಮಾಡಿ ಸನಾತನ ಧರ್ಮವನ್ನು ಸ್ಥಾಪನೆ ಮಾಡಿದಂಥ ಮಹಾಪುರುಷ. ಶಾತ ಎಂದರೆ ಕುದುರೆ ಎಂದು ಕುದುರೆಯನ್ನು ವಾಹನವಾಗಿ ಉಳ್ಳವರೆಂದು ಹೇಳುತ್ತಾರೆ. ಶಾತವಾಹನರು ಬ್ರಾಹ್ಮಣ ಜಾತಿಗೆ ಸೇರಿದ್ದು, ವಿಷ್ಣು ಮತ್ತು ಮತ್ಸ್ಯ ಪುರಾಣಗಳಲ್ಲಿ ಮಾಹಿತಿ ದೊರೆಯುತ್ತದೆ.
- ಕಾಲಮಾನ ತಿಳಿಯಲು ಬ್ರಹ್ಮನು ನಮಗೆ ಪಂಚಾಂಗ ಮಾಡಿಕೊಟ್ಟ ದಿನವೇ ಯುಗಾದಿಯಾಗಿದೆ. ಮಹಾಭಾರತದ ಕಾಲದಲ್ಲೂ ಶ್ರೀ ಕೃಷ್ಣ ಯುಗಾದಿ ಹಬ್ಬದ ಆಚರಣೆ ಮಾಡಿದ್ದನು. ಜೀವನದಲ್ಲಿ ಬರುವ ಕಷ್ಟ ಸುಖಗಳನ್ನು ಸಮಪ್ರಮಾಣದಲ್ಲಿ ಸ್ವೀಕರಿಸಬೇಕೆಂದು ಬೇವು ಬೆಲ್ಲವನ್ನು ಭಗವಂತನಿಗೆ ಅರ್ಪಿಸಿ ಸೇವನೆ ಮಾಡಿ ಸಂತೋಷದಿಂದ ಹಬ್ಬವನ್ನು ಆಚರಿಸಿದರೆ ಆ ವರ್ಷವೆಲ್ಲ ಎಂತಹದೇ ಕಷ್ಟ ಬರಲಿ ಧೃತಿಗೆಡದೆ ಎದುರಿಸಿ ಸಂತೋಷದಿಂದ ಇರುತ್ತಾರೆ ಎಂಬುದು ?ಯುಗಾದಿ? ಆಚರಣೆಯ ಪ್ರಮುಖ ಉದ್ದೇಶವಾಗಿದೆ. ಹಬ್ಬದ ದಿನ ಮುಂಜಾನೆ ಎಣ್ಣೆ ಹಚ್ಚಿಕೊಂಡು ಅಭ್ಯಂಗನ ಸ್ನಾನ ಮಾಡಬೇಕು. ಎಣ್ಣೆ ಲಕ್ಷ್ಮಿ ಯಾದರೆ, ನೀರು ಗಂಗೆ, ಹೊಸ ಬಟ್ಟೆ ಧರಿಸಿ ಮನೆಯಲ್ಲಿ ಹಿರಿಯರು ಮಾಡುವ ಪೂಜೆಗಳಲ್ಲಿ ಭಾಗಿಯಾಗಿ ತೀರ್ಥ ಪ್ರಸಾದ ಸೇವನೆ ಮಾಡಿ, ಸುಗ್ರಾಸ ಭೋಜನವನ್ನು ಸವಿದು ಆನಂದದಿಂದ ಕಳೆಯುತ್ತಾರೆ. ಪಂಚಾಂಗ ಶ್ರವಣ ಕೇಳುವುದು ಪ್ರಮುಖ ಉದ್ದೇಶ. ಈ ರೀತಿ ಹಬ್ಬದ ಆಚರಣೆಯನ್ನು ಮಾಡುತ್ತಾರೆ. ಈ ಹಬ್ಬವನ್ನು ಚಂದ್ರಮಾ ಯುಗಾದಿ ಎಂದೂ ಕರೆಯುತ್ತಾರೆ, ಇದು ಗ್ರೆಗೋರಿಯನ್ ಕ್ಯಾಲೆಂಡರ್ ಪ್ರಕಾರ ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಬರುತ್ತದೆ. ಹಿಂದೂ ಚಂದ್ರಮಾನ ಕ್ಯಾಲೆಂಡರ್ ಪ್ರಕಾರ, ಚಂದ್ರಮಾ ಯುಗಾದಿ ಹೊಸ ವರ್ಷದ ಆರಂಭವನ್ನು ಸೂಚಿಸುತ್ತದೆ.
- ಬೇವು ಬೇಲ್ಲ ವನ್ನು ತಿಂದು ಹಿಂದಿನ ನೋವು ಮರೆತು ಸ್ನೇಹಿತರಿಗೆ ಯುಗಾದಿ ಹಬ್ಬದ ಶುಭಾಷಯಗಳನ್ನು ಹೇಳಿ ಯುಗಾದಿ ಹಬ್ಬ ಆಚರಿಸಲಾಗುತ್ತದೆ. ಕಳೆದ ವರ್ಷದ ಕಹಿ ಘಟನೆಗಳನ್ನು ಮರೆಯೋಣ, ಮತ್ತು ಸಿಹಿ ಘಟನೆಗಳನ್ನು ಸವಿಯೋಣ, ಎನ್ನುವ ಸಂದೇಶವನ್ನು ಯುಗಾದಿ ಹಬ್ಬವು ಬೇವು ಬೆಲ್ಲ ಹಂಚುವುದು ಮೂಲ ಉದ್ದೇಶ ಜೀವನದಲ್ಲಿ ಕಷ್ಟ ಸುಖಗಳು ಬರುತ್ತಲೇ ಇರುತ್ತವೆ. ಕಷ್ಟ ಬಂದಾಗ ಕುಗ್ಗದೆ ಸುಖ ಬಂದಾಗ ಹಿಗ್ಗದೆ ಸಮಾನವಾಗಿ ತೆಗೆದುಕೊಂಡು ಬಾಳಬೇಕೆಂಬುವ ಸಂಕೇತವನ್ನು ಯುಗಾದಿ ಹಬ್ಬ ಆಚರಣೆಯಿಂದ ತಿಳಿದುಕೊಳ್ಳಬಹುದಾಗಿದೆ. ಬೇವಿನ ಎಲೆ, ಹೂವು ಮತ್ತು ಬೆಲ್ಲದ ತುರಿ ಜೊತೆಗೆ ಸ್ವಲ್ಪ ತುಪ್ಪ ಹಾಕಿ ಕಲಿಸಿದ ಮಿಶ್ರಣವೇ ಬೇವು ಬೆಲ್ಲ ಮನೆಯಲ್ಲಿ ದೇವರಿಗೆ ಪೂಜೆ ಮಾಡಿ ಬೇವು ಬೆಲ್ಲ ಮನೆಯವರೆಲ್ಲ ತಿನ್ನುತ್ತಾರೆ. ಸಾಯಂಕಾಲ ಪಂಚಾಂಗ ಓದುವ ಕಾರ್ಯಕ್ರಮ ಮನೆಯ ಹಿರಿಯರು ಅಥವಾ ದೇವಸ್ಥಾನದ ಅರ್ಚಕರು ಪಂಚಾಂಗ ಓದುವುದನ್ನು ಎಲ್ಲಾರೂ ಕೇಳಿಸಿಕೊಳ್ಳುತ್ತಾರೆ. ಈ ಬೇವು ಬೇಲ್ಲದ ಸಂಭ್ರಮವೇ ಯುಗಾದಿ ಹಬ್ಬ.





Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,